CC-O. In Public Domain. Digitized by eGangotri

॥ ಶ್ರೀ ಗುರುಭ್ಯೋ ನಮಃ ॥

ಸಂಧ್ಯಾವಂದನೆ - ಎಂದರೇನು?

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharati Book Centre, Sringeri

CC-O. In Public Domain. Digitized by eGangotri

ಓಂ

ಸಂಧ್ಯಾವಂದನೆ ಎಂದರೇನು ?

(ಗಾಯಿತ್ರೀ ಮಹಾಮಹಿಮೆ ಸಹಿತ)

(ಐದನೇ ಮುದ್ರಣ)

1984

ಪ್ರಕಾಶನ

ಉಪನಯನ ಸಂಘ

98, ರತ್ನವಿಲಾಸ್ ರಸ್ತೆ, ಬಸವನಗುಡಿ, ಬೆಂಗಳೂರು-4

ಬೆಲೆ. ರೂ. 2/-

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಥಮ ಮುದ್ರಣ

ನಮ್ಮ ದೇಶದ ಸಂಧ್ಯಾಧಿಕಾರವುಳ್ಳವರಲ್ಲಿ ದಿನವೂ ಸಂಧ್ಯಾವಂದನೆಯನ್ನು ತಪ್ಪದೆ ಮಾಡುವವರು ಈಗ ಬಹಳ ಅಪರೂಪ. ಹಾಗೆಯೇ ಸಂಧ್ಯಾವಂದನೆಯ ವಿಷಯದಲ್ಲಿ ಆದರವೂ ಭಕ್ತಿಯೂ ಇಲ್ಲದವರೂ ಅತಿ ವಿರಳ. ತಾವು ನಿತ್ಯಕರ್ಮವನ್ನು ಮಾಡುತ್ತಿಲ್ಲವೆಂದು ಅವರಿಗೆಲ್ಲ ಮನದಲ್ಲಿ ಪಶ್ಚಾತ್ತಾಪವುಂಟು. ಯಾರಾದರೂ ಆ ವಿಷಯದಲ್ಲಿ ವಿದ್ವತ್ಪೂರ್ಣವಾಗಿ ಮನಸ್ಸಿಗೊಪ್ಪುವಂತೆ ಮಾತನಾಡಿದರೆ ಎಷ್ಟೋ ಆಸಕ್ತಿಯಿಂದ ಅವರು ಅದನ್ನು ಆಲೈಸುವರು. ಮನಸ್ಸಿನ ಅಂತರಾಳದಲ್ಲಿ ಶ್ರದ್ಧಾಜ್ಯೋತಿ ಮಸುಕು ಮಸುಕಾಗಿಯಾದರೂ ಬೆಳಗುತ್ತಲೇ ಇದೆ. ಆಸ್ತಿಕತೆಯ ಚಿಲುಮೆ ಬತ್ತಿಲ್ಲ. ಶ್ರೀ ಶ್ರೀ ಸ್ವಾಮಿ ಚಿನ್ಮಯಾನಂದಜೀ ಅವರ ಉಪನ್ಯಾಸ ಸಮಾರಂಭಗಳ ದೃಶ್ಯವೇ ಈ ಮಾತಿಗೊಂದು ನಿದರ್ಶನ. ಅಂಥವರಿಗಾಗಿ ಈ ಪುಟ್ಟ ಹೊತ್ತಿಗೆ. ವಿಶ್ವಾಸವನ್ನು ವಿಚಾರದಿಂದ ದೃಢಗೊಳಿಸುವುದೇ ಮುಖ್ಯ ಉದ್ದೇಶ.

ಪಂಚಮ ಸಂಸ್ಕರಣ

ಭಗವಂತನ ಕೃಪೆಯಿಂದ ಈ ಮುದ್ರಣದ ಈ ಪ್ರತಿಯನ್ನು ಮಹಾಜನರಿಗೆ ಅರ್ಪಿಸುತ್ತಿದ್ದೇನೆ. ಆದಷ್ಟು ತಿದ್ದಿದ ಸಂಸ್ಕರಣವಿದು.

ಬೆಂಗಳೂರು
ಅಕ್ಟೋಬರ್ ೧೯೮೫

ಕೆ. ಆರ್. ಶ್ರೀಧರಮೂರ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಓಂ ಸಂಧ್ಯಾಯೈ ನಮಃ ॥

ಸಂಧ್ಯಾವಂದನೆ ಎಂದರೇನು ?

ಯಾಂ ಸದಾ ಸರ್ವಭೂತಾನಿ ಚರಾಣಿ ಸ್ಥಾವರಾಣಿಚ ।
ಸಾಯಂ ಪ್ರಾತರ್ನಮತ್ಯಂತಿ ಸಾ ಮಾ ಸಂಧ್ಯಾऽಭಿರಕ್ಷತು ॥

(ಚರಾಚರಾತ್ಮಕವಾದ ಎಲ್ಲ ಪ್ರಾಣಿಗಳೂ ಸಾಯಂ ಪ್ರಾತಃ ಕಾಲಗಳಲ್ಲಿ, ಪ್ರತಿ ನಿತ್ಯವೂ ಯಾರನ್ನು ನಮಸ್ಕರಿಸುವರೋ ಆ ಸನ್ಧ್ಯಾ ದೇವಿಯು ನನ್ನನ್ನು, ಎಲ್ಲ ಕಡೆಯಿಂದಲೂ, ಕಾಪಾಡಲಿ).

ಪ್ರಸ್ತಾವನೆ

ಸಂಧ್ಯಾವಂದನೆಯು ಪವಿತ್ರವಾದ ಒಂದು ನಿತ್ಯಕರ್ಮ. ಅದರ ಮೊಟ್ಟ ಮೊದಲ ಪ್ರಸ್ತಾಪ ಕಂಡು ಬರುವುದು ವೇದದಲ್ಲಿ.

' ಆಹರಹಸ್ಸಂಧ್ಯಾಮುಪಾಸೀತ ' ಪ್ರತಿದಿನವೂ ಸಂಧ್ಯೋಪಾಸನೆ ಮಾಡು.

'ತಸ್ಮಾದ್ಬ್ರಾಹ್ಮಣೋऽಹೋರಾತ್ರಸ್ಯ ಸಂಯೋಗೇ ಸಂಧ್ಯಾಮುಪಾಸ್ತೇ ॥
ಉದ್ಯಂತ ಮಸ್ತಂ ಯಂತಮಾದಿತ್ಯಮಭಿಧ್ಯಾರ್ಯ್

'ಅಹೋರಾತ್ರಸ್ಯ ಸಂಯೋಗೇ ಸಂಧ್ಯಾಮುಪಾಸ್ತೇ ಸಜ್ಯೋತಿ ರಾಜ್ಯೋತಿ ಷೋದರ್ಶನಾತ್ '.

ಹೀಗೆ ವೇದವಚನಗಳಿಂದ ಹುಟ್ಟಿತು ಸಂಧ್ಯೋಪಾಸನೆ. ಶ್ರುತಿಯಿಂದ ಹುಟ್ಟಿದೆ ಯಾಗಿ ಇದು ಶ್ರೌತಕರ್ಮ.

ವೇದದಲ್ಲಿ, ತೈತ್ತರೀಯಾರಣ್ಯಕದಲ್ಲಿ ಸಂಧ್ಯೋಪಾಸನೆಯು ಸೂರ್ಯಾರ್ಘ್ಯ, ಗಾಯತ್ರೀ ಜಪ, ಆದಿತ್ಯಧ್ಯಾನಗಳೆಂಬ ಕಾರ್ಯಗಳು ಬರುತ್ತವೆ.

ವೇದವು ಎಷ್ಟು ಪ್ರಾಚೀನವೋ ಸಂಧ್ಯಾವಂದನೆಯೂ ಅಷ್ಟು ಪ್ರಾಚೀನ. ಇದುವರೆಗಂತೂ ಜಗತ್ತಿನಲ್ಲಿರುವ ಸಾಹಿತ್ಯಗಳಲ್ಲೆಲ್ಲಾ ವೇದವೇ ಅತ್ಯಂತ ಮೊದಲಿನದು. ಇದನ್ನು ಈಗ ಎಲ್ಲರೂ ಅಂಗೀಕರಿಸಿದ್ದಾರೆ. ಇಂತಹ ವೇದೋದಿತವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗತ್ತಿನಲ್ಲಿಯೇ ಅತ್ಯಂತ ಪ್ರಾಚೀನ ಅನುಸ್ಥಾನವಾದ, ಸಂಧ್ಯಾವಂದನೆಯು ನಮ್ಮ ದೇಶದಲ್ಲಿ ಈಗ್ಯೆ ಅದೆಷ್ಟೋ ಸಾವಿರ ವರ್ಷಗಳಿಂದಲೂ ಆಚರಣೆಯಲ್ಲಿದೆ.

ಕಾಲ ವೈಪರೀತ್ಯದಿಂದ ಈ ಕರ್ಮವನ್ನು ಪೂರ್ಣವಾಗಿ ಆಚರಿಸಲು ಕೆಲವು ವೇಳೆ ಆಗದೆ ಇರಬಹುದು ಆದರೆ ಸಂಧ್ಯಾವಂದನೆಯ ಒಂದೊಂದು ಅಂಗವನ್ನು ೫–೬ ನಿಮಿಷಗಳಲ್ಲಿ ಮಾಡಿ ಮುಗಿಸಬಹುದು. ಅರ್ಘ್ಯ ಪ್ರಧಾನ ಪೂರ್ತಿಗಂತೂ ಹಿಡಿಯುವ ಕಾಲ ಕೇವಲ ನಾಲ್ಕು ನಿಮಿಷ. ಅಷ್ಟೂ ವ್ಯವಧಾನವಿಲ್ಲವೇ ? ಅಷ್ಟೂ ವಿರಾಮವಿಲ್ಲದವರು ಲೋಕದಲ್ಲಿ ಯಾರೂ ಇಲ್ಲ. ಇಲ್ಲದಿರುವುದು ಮನಸ್ಸು, ಶ್ರದ್ಧೆ, ನಂಬಿಕೆ. ಇದು ಆತ್ಮಸಂಶೋಧನೆ ಮಾಡಿಕೊಂಡರೆ ನಮಗೇ ಗೊತ್ತಾಗುವುದು. ಪುತ್ರ, ಪೌತ್ರಾದಿ ಸಂರಕ್ಷಣೆ, ಭೂ, ದ್ರವ್ಯ, ಕೀರ್ತಿ ಇವುಗಳ ಸಂಪಾದನೆಗಾಗಿ ನಾವಿಡುವ ಕಾಲದಲ್ಲಿ ಸ್ವಲ್ಪ ಭಾಗವನ್ನಾದರೂ ತಾರಕವಾದ ಸಂಧ್ಯಾ ಎಂಬ ವೇದ ಮಾತೆಯ ಚರಣಾರವಿಂದದಲ್ಲಿ ಇಡಬಾರದೇ ಎಂದು ಒಬ್ಬ ಮಹನೀಯರು ಕಳಕಳಿಯಿಂದ ನುಡಿದಿದ್ದಾರೆ.

ಯಾ ಚಿಂತಾ ಭುವಿ ಪುತ್ರಪೌತ್ರಭರಣವ್ಯಾಪಾರ ಸಂರಕ್ಷಣೇ,
ಯಾ ಚಿನ್ತಾ ಧನಧಾನ್ಯ ಭೋಗಯಶಸಾಃ ಲಾಭೇ ಸದಾಜಾಯತೇ !
ಸಾ ಚಿನ್ತಾ ಯದಿ ವೇದಮಾತೃ ಚರಣಾಂಭೋಜೇಕ್ಷಣೇ ಹೈತುಕೇ,
ಕಾ ಚಿನ್ತಾ ಯಮರಾಜ ಭೀಮ ಸದನದ್ವಾರಂ ಪ್ರವೇಶೇ ನೃಣಾಂ ॥

ಮನುಷ್ಯನ ದೇಹ ಧಾರಣೆಗೆ ಅತ್ಯವಶ್ಯಕವಾದ ಆಹಾರವು ಪ್ರತಿನಿತ್ಯವೂ ತಪ್ಪದೆ ಸೇವಿಸಲ್ಪಡುವಂತೆ, ಸಂಧ್ಯಾಕರ್ಮವು ಬ್ರಹ್ಮಕ್ಷತ್ರಿಯ ವೈಶ್ಯರಿಗೆ ಪ್ರತಿನಿತ್ಯವೂ ಅತ್ಯವಶ್ಯಕವಾಗಿ ಅನುಷ್ಠೇಯವಾದ ಕರ್ಮವಾಗಿರುವುದು.

ಸಂಧ್ಯಾವಂದನೆಯು ಇಹಕ್ಕೂ ಪರಕ್ಕೂ ಸಾಧನವಾದ ಬಹು ಉತ್ತಮ ಕರ್ಮವಾದುದರಿಂದಲೇ ನಿತ್ಯಕರ್ಮವೆಂದು ಕರೆಯಲ್ಪಡುವುದು. ನಿತ್ಯವಾದುದೇ ಪರಾತ್ಪರ ವಸ್ತುವು. ಅನಿತ್ಯವಾದವುಗಳನ್ನೆಲ್ಲಾ ಪಾಟಿಸಿ ನಿತ್ಯವಾದ ಪರಾತ್ಪರ ವಸ್ತುವನ್ನು ಹೊಂದಿಸುವ ಕರ್ಮವಾಗಿದೆ, ಸಂಧ್ಯಾವಂದನೆ.

ಕರ್ಮಗಳು

ಕರ್ಮಗಳು ಮೂರು ವಿಧ. ನಿತ್ಯ, ನೈಮಿತ್ತಿಕ ಮತ್ತು ಕಾಮ್ಯ ಎಂದು. ಅವಶ್ಯವಾಗಿ ಆಯಾಯ ಕಾಲದಲ್ಲಿಯೇ ಮಾಡಲೇಬೇಕಾಗಿದ್ದು, ಮಾಡದೆ ಇದ್ದರೆ 'ಪ್ರತ್ಯವಾಯ'

Sri Vidyabharathi Book Centre, Sringeri

CC-O. In Public Domain. Digitized by eGangotri

(ದೋಷ) ವುಂಟೆಂದು ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳು ನಿತ್ಯಕರ್ಮಗಳು. ಯಾವು ದಾದರೂ ನಿಮಿತ್ತವು ಬಂದೊದಗಿದಾಗ ಆಗಲೇ ಅವಶ್ಯವಾಗಿ ಮಾಡಬೇಕೆಂದು ವಿಧಿಸಿರುವ ಕರ್ಮಗಳು ನೈಮಿತ್ತಿಕ ಕರ್ಮಗಳು. ಫಲಾಪೇಕ್ಷೆಯಿಂದ ಮಾಡುವುದು ಕಾಮ್ಯ ಕರ್ಮ. ಸಂಧ್ಯಾವಂದನೆಯು ಮೊದಲನೆಯ ಗುಂಪಿನದು. ಸ್ವಪ್ರಯೋಜನವನ್ನು ಬಯಸದೆ, ಕರ್ಮವೆಂದು ದಿನವೂ ಮಾಡುವ ಕರ್ಮ. ಲೋಕ ಕಲ್ಯಾಣವನ್ನು ಬಯಸಿ (ಚತುಸ್ಸಾಗರ ಪರ್ಯಂತಂ, ಶಂನೋ ಅಸ್ತು ದ್ವಿಪದೇ ಶಂ ಚತುಷ್ಪದೇ ಇತ್ಯಾದಿ) ಮಾಡುವ ಶ್ರೇಷ್ಠ ಕರ್ಮ. "ಪರಮೇಶ್ವರ ಪ್ರೀತ್ಯರ್ಥಂ" ಎಂದು ಒಂದು ನಿಷ್ಕಾಮಕರ್ಮ ಚಿತ್ತಶುದ್ಧಿಯಿಂದಾಗಿರಾ ಮೋಕ್ಷಾಂತದವರೆಗೆ ಅದರ ಪ್ರಯೋಜನವುಂಟು. ಕಡೆಯಲ್ಲಿ 'ಶ್ರೀಕೃಷ್ಣಾರ್ಪಣಮಸ್ತು' ಎಂದು ಭಗವಂತನಿಗೆ ಕೂಡಿಸುವುದರಿಂದ ಇದು ಸಾಮಾನ್ಯ ಕರ್ಮದ ಅಂಗಳವನ್ನು ದಾಟಿ ಕರ್ಮಯೋಗವಾಗುವುದು. ಋಷಿ ಜನಗಳು ಇಷ್ಟು ಕಾಲ ನಮಗೆ ಉಳಿಸಿಕೊಟ್ಟಿರುವ ಈ ಆನರ್ಘ್ಯ ರತ್ನವನ್ನು ಪೋಷಿಸಿಕೊಂಡು ಬರಬೇಕಾದುದು ಅವರ ವಂಶೀಯರಾದ ನಮ್ಮೆಲ್ಲರ ಕರ್ತವ್ಯವಾಗಿದೆ. "ಸ್ಥಾವರ ಜಂಗಮಾತ್ಮಕವಾದ ಸರ್ವಪ್ರಾಣಿಗಳೂ ಯಾವಾಗಲೂ ಸಂಜೆ ಮತ್ತು ಪ್ರಾತಃ ಕಾಲದಲ್ಲಿ ಯಾವಾಕೆಯನ್ನು ನಮಸ್ಕರಿಸುವರೋ ಆ ಸಂಧ್ಯಾದೇವಿ ತ್ರಿಮೂರ್ತಿರೂಪಿಣಿ. ಗಾಯತ್ರಿ, ಸಾವಿತ್ರಿ, ಸರಸ್ವತಿ.

ಬೇರೆ ಕಾರಣವೂ ಇದೆ

'ವೇದದಲ್ಲಿ ಹೇಳಿದೆ; ಆದುದರಿಂದ ನಂಬಬೇಕು' ಎಂಬುದಷ್ಟೇ ಅಲ್ಲ ಕಾರಣ. ಸಂಧ್ಯಾವಂದನೆ ಎಂಬ ವಿಧಿಯನ್ನು ಮೊದಲು ರೂಪಿಸಿದ ಋಷಿಗಳು ಬಹು ಜಾಣತನದ ಮಾರ್ಗವನ್ನು ಅನುಸರಿಸಿದ್ದಾರೆ. ವಿಜ್ಞಾನಿಗಳು 'From the known to the unknown' ಎಂಬ ರೀತಿಯಲ್ಲಿ ಎಲ್ಲರಿಗೂ ಅರ್ಥವಾಗುವಂತಹ ವಸ್ತುವನ್ನು ಮೊದಲು ಮಾಡಿಕೊಂಡು, ಸ್ವಲ್ಪ ಸ್ವಲ್ಪವಾಗಿ ಅದರ ತಿರುಳನ್ನು ವಿಶ್ಲೇಷಣೆ ಮಾಡುತ್ತಾ, ಕಡೆಗೆ ಎಲ್ಲಕ್ಕೂ ಆಧಾರವಾಗಿರುವ ಆವ್ಯಕ್ತದೊಡನೆ ನಮ್ಮನ್ನು ಕೂಡಿಸುವ ಜಾಣ್ಮೆ ಅವರದು. ಸಂಸ್ಕೃತಿಯ ಹಂತದ ಮೊದಲು ಮೆಟ್ಟಿಲಾದ ಪ್ರಕೃತಿ ಪೂಜೆಯಿಂದ (ಆಪೋ ಹಿಷ್ಠಾ) ಪ್ರಾರಂಭಿಸಿ, 'ಧಿಯೋಯೋನಃ ಪ್ರಚೋದಯಾತ್' ಎಂಬ ಬೌದ್ಧಿಕ ಮಟ್ಟಕ್ಕೆ ಕೊಂಡೊಯ್ದು, ಮೆಲ್ಲನೆ, ಈ ಸೂರ್ಯನೇ ಪರಬ್ರಹ್ಮ (ಆಸವಾದಿತ್ಯೋಬ್ರಹ್ಮ. ಬ್ರಹ್ಮೈವಸನ್ ಬ್ರಹ್ಮಾಪ್ಯೇತಿ)

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಅಧ್ಯಾತ್ಮಕ್ಕೆ ಕರೆದೊಯ್ಯುವುದು ಸಂಧ್ಯಾವಂದನೆಯ ಕುಶಲಮಾರ್ಗ. ಸಂಧ್ಯಾವಂದನೆಯಲ್ಲಿ ಆಚಮನ, ಮಾರ್ಜನೆ, ಮುಂತಾದ ಕರ್ಮ, ಪ್ರಾಣಾಯಾಮ ವುಳ್ಳ ನಿಧಿಧ್ಯಾಸನ 'ನಮೋಬ್ರಹ್ಮಣೇ, ವಾಸನಾದ್ವಾಸುದೇವಸ್ಯ' ಮುಂತಾಗಿ ಭಕ್ತಿ ಕಡೆಗೆ ಸಂಧ್ಯೆಯನ್ನು ಉಪಾಸಿಸಿದವನು ಬ್ರಹ್ಮನನ್ನು ಉಪಾಸಿಸಿದವನಾಗುತ್ತಾನೆ' ಎಂದು ಜ್ಞಾನ-ಹೀಗೆ ಕರ್ಮ, ಧ್ಯಾನ, ಭಕ್ತಿ, ಜ್ಞಾನ ಯೋಗಗಳ ಸಾರವನ್ನೆಲ್ಲಾ ಬೀಜರೂಪವಾಗಿ ಇಡಲಾಗಿದೆ. ಈ ದೃಷ್ಟಿಯಿಂದ ಸಂಧ್ಯಾವಂದನೆಯನ್ನು 'ಸಂಧ್ಯಾ ಯೋಗ'ವೆಂಬೂ ಕರೆಯಬಹುದು. ೫ ರಿಂದ ೧೬ನೇ ವಯಸ್ಸಿನೊಳಗೆ ಪ್ರಾರಂಭಿ ಸುವ ಆಹ್ನಿಕವಿದಾಗಿರುವುದರಿಂದ ವ್ಯಕ್ತಿಗೆ ಬಾಲ್ಯದಿಂದಲೇ ಹಿಂದೂಧರ್ಮದ ಎಲ್ಲ ಅಂಶಗಳ ಪರಿಚಯವನ್ನು ಸೂಕ್ಷ್ಮವಾಗಿಯಾದರೂ, ಮೊದಲೇ ಮಾಡಿಕೊಡುತ್ತಿದೆ. ಇದೇ ಸಂಧ್ಯಾವಂದನೆಯ ಹೆಚ್ಚುಗಾರಿಕೆ. ಇದು ಎರಡನೆಯ ಕಾರಣ.

ಮೂರನೆಯ ಕಾರಣವೂ ಒಂದಿದೆ. ಸಂಧ್ಯಾವಂದನೆಯು ನಮ್ಮ ದೇಶದ ಅತ್ಯಂತ ಶ್ರೇಷ್ಠರಿಂದ ಬಹುಕಾಲದಿಂದಲೂ ಸೇವ್ಯವಾಗಿ, ಸದಾಚಾರದಿಂದ ಪುನೀತ ವಾಗಿದೆ. 'ಮಹಾಜನೋ ಯೇನಗತಸ್ಸಂಪಥಾಃ' ಶ್ರೀರಾಮ, ಶ್ರೀಕೃಷ್ಣ—ಇವರು ನಮ್ಮ ಆರಾಧ್ಯ ಭಗವಂತ. ಅವರೂ ಸಂಧ್ಯಾವಂದನೆಯನ್ನು ಮಾಡಿದ್ದಾರೆ. ರಾಮಾಯಣದಲ್ಲಿ.

ಕೌಸಲ್ಯಾ ಸುಪ್ರಜಾರಾಮ ಪೂರ್ವಾ ಸನ್ಧ್ಯಾಪ್ರವರ್ತತೇ,
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವ ಮಾಹ್ನಿಕಂ ॥
ತಸ್ಯರ್ಷೇಃ ಪರಮೋದಾರಂ ವಚಃ ಶ್ರುತ್ವಾನೃಪಾತ್ಮಜೌ
ಸ್ನಾತ್ವಾ ಕೃತೋದಕೌ ವೀರಾ ಜೇಪತುಃ ಪರಮಂಜಪಂ ॥

(ಕೌಸಲ್ಯಾ ಸುಪುತ್ರನೇ ಏಳಪ್ಪಾ. ಪ್ರಾತಃಕಾಲದ ಸಂಧ್ಯಾಸಮಯ. ಎದ್ದು ಆಹ್ನಿಕ ಕರ್ಮವನ್ನು ಆಚರಿಸು—ಎಂದು ವಿಶ್ವಾಮಿತ್ರರು ಹೇಳುತ್ತಲೇ ರಾಮ ಲಕ್ಷ್ಮಣರು ಎದ್ದು, ಮಿಂದು, ಆಚಮನವಾಡಿ ಗಾಯತ್ರೀ ಮಂತ್ರವನ್ನು ಜಪಿಸಿ ದರು (ಬಾಲಕಾಂಡ).

ಭಾರತದಲ್ಲಿ :—

ಅವತೀರ್ಯರಥಾತ್ತೂರ್ಣಂ ಕೃತಾಶೌಚಂ ಯಥಾವಿಧಿ । ರಥಮೋಚನ
ಮಾದಿತ್ಯ ಸಂಧ್ಯಾಮುಪ ವಿಶೇಷತಃ(ಹಸ್ತಿನಾಪುರಕ್ಕೆಹೊರಟ ಶ್ರೀಕೃಷ್ಣನುಮಾರ್ಗ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ರಥದಿಂದ ಇಳಿದು ವಿಧಿಪ್ರಕಾರ ಸಂಧ್ಯೋಪಾಸನೆ ಮಾಡಿದನು. (ಉದ್ಯೋಗ ಪರ್ವ). ಕುರುಕ್ಷೇತ್ರದ ಘೋರ ಯುದ್ಧ ನಡೆದಿರುವಾಗಲೂ, ಸನ್ಧ್ಯಾಕಾಲ ಬಂದಾಗ, ಭೀಷ್ಮರೂ, ದ್ರೋಣರೂ ಅಲ್ಲಿಯೇ ಧೂಳಿನಿಂದ ಅರ್ಘ್ಯಪ್ರಧಾನಮಾಡಿ ದರೆಂದು ಮಹಾಭಾರತ ತಿಳಿಸುತ್ತಿದೆ. ದಿಲೀಪನು "ವಿಧೇಃ ಸಾಯಂತನ ಸ್ಯಾಂತೆ ಸದದರ್ಶ ತಪೋನಿಧಿಂ" ಸಾಯಂ ಸಂಧ್ಯಾಕಾಲಗಳಲ್ಲಿ ಮಾಡಬೇಕಾದ ಜಪ ಹೋಮಾದಿ ವಿಧಿಗಳನ್ನು ಮುಗಿಸಿ ತಪೋನಿಧಿಯಾದ ವಸಿಷ್ಠನನ್ನು ನೋಡಿದನು. (ರಘುವಂಶ).

ಪಾರ್ಷ್ಣಿಮುಕ್ತ ವಸುದಾ ತಪಸ್ವಿನಃ, ಪಾವನಾಂಬು ವಿಹಿತಾಂಜಲಿ ಕ್ರಿಯಾಃ।
ಬ್ರಹ್ಮಗೂಢಮಭಿಸಂಧ್ಯಮಾದೃತಾಃ, ಶುದ್ಧಯೇ ವಿಧಿವಿದೋಗೃಣಂತ್ಯಮೀ॥

(ವಿಧಿಯನ್ನು ಅರಿತ ತಪಸ್ವಿಗಳು ತಮ್ಮ ಶುದ್ಧಿಗಾಗಿ ಪಾದಗಳ ಮುಂಭಾಗವನ್ನು ಮಾತ್ರ ನೆಲದಮೇಲೆ ಊರಿ, ಶುದ್ಧೋದಕವನ್ನು ಅಂಜಲಿಯಲ್ಲಿ ಹಿಡಿದು ಅರ್ಘ್ಯ ವನ್ನು ಕೊಟ್ಟು ಸನ್ಧ್ಯಾಕಾಲದಲ್ಲಿ ಗೋಪ್ಯವಾಗಿ ಗಾಯಿತ್ರಿಯನ್ನು ಜಪಿಸುತ್ತಾರೆ). (ಕುಮಾರಸಂಭವ). ಈ ರೀತಿ ಮಾಘಕಾವ್ಯದಲ್ಲಿಯೂ, ಕಿರಾತಾರ್ಜುನೀಯ ದಲ್ಲಿಯೂ ಸಂಧ್ಯೋಪಾಸನೆ ಜಪಗಳನ್ನು ಮಾಡಿದ ಪ್ರಸ್ತಾಪವಿದೆ.

ಹೀಗೆ ಸಂಧ್ಯೋಪಾಸನೆಯು ೧. ನೇಮೋದಿತವಾಗಿದೆ. ೨. ಪರಮಾತ್ಮ ಸಾಕ್ಷಾತ್ಕಾರದವರೆಗೆ, ಅವರವರಿಗೆ ನಿಲುಕುವ ನಿಲುವನ್ನು ತೋರಿಸಿಕೊಡುವ ಜ್ಞಾನ ತನವಾಗಿದೆ. ಮತ್ತು ೩. ಪೂರ್ವದಲ್ಲಿ ಮಹನೀಯರೆಲ್ಲ ಆಚರಿಸಿದ ಮಾರ್ಗದರ್ಶನ ವಿದೆ. ಇನ್ನೂ ಒಂದು ಮುಖ್ಯವಾದ ನಾಲ್ಕನೆಯ ಕಾರಣವಿದೆ. ಸಂಧ್ಯೋಪಾಸನೆ ಯಿಂದ ಕೂಡಲೇ ಪ್ರತ್ಯಕ್ಷವಾಗಿ ಕಾಣುವ ಫಲವೊಂದಿದೆ. ಶಿಸ್ತು ಜೀವನದ ಬಾಳುವೆ ಆದು. "ಪ್ರತಿನಿತ್ಯದ ಸಂಧ್ಯೋಪಾಸನೆಗಳನ್ನು ಸಕಾಲದಲ್ಲಿ ವಿಧಿವತ್ತಾಗಿ ಮಾಡುವ ವನು ಇತರರ ಆದರ ಗೌರವಗಳಿಗೆ ಪಾತ್ರನಾಗುವುದು ಲೋಕದಲ್ಲಿ ಕಂಡುಬಂದಿರುವ ವಿಷಯವೇ ! ಪ್ರಪಂಚದಲ್ಲಿ ವ್ಯವಹರಿಸುತ್ತಿರುವವರಿಗೆಲ್ಲ ಇದೂ ಅತ್ಯಂತ ಅಪೇಕ್ಷ ಣೀಯವಲ್ಲವೇ ?

ಆದರ್ಶ

ಆದರ್ಶವು ಯಾವಾಗಲೂ ಆದಷ್ಟು ಹಿರಿದಾಗಿಯೇ ಇರಬೇಕು. ಅದರತ್ತ ಹೊರಟಾಗ ಪ್ರತಿಯೊಬ್ಬನೂ ತನ್ನ ಕೈಲಾದಷ್ಟು ದೂರವನ್ನಾದರೂ ಮುಟ್ಟುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರ್ಶವೇ ಅಲ್ಪವಾದರೆ ಸಾಧನೆಯು ಪ್ರಯತ್ನವೇನು? ಧರ್ಮವು ವಿಧಿಸಿರುವ ಆಚಾರಗಳು ನಮ್ಮ ಧಾರ್ಮಿಕ ಮೇಲ್ಮೈಗೆ ಕಾರ್ಯರೂಪದಲ್ಲಿ ನನುಗೆ ಸಾಧ್ಯವಿರುವ ಸ್ಥೂಲ ಸಾಧನೆಗಳು ಸನ್ಧ್ಯಾವಂದನೆಯಂತಹ ಸದಾಚಾರಗಳನ್ನು ವಿಧಿಸುವಾಗ ಒಂದು ಮಟ್ಟದ ನಿರ್ಬಂಧವು ಅವಶ್ಯ. ಏಕೆಂದರೆ ಮಾನವನ ಮನಸ್ಸು ಯಾವಾಗಲೂ ಬಹಿರ್ಮುಖವಾಗಿ ವಿಷಯಗಳ ಕಡೆಗೆ ಓಡುವುದೇ ಅದರ ಪ್ರವೃತ್ತಿ. ಅದಾಗ್ಯೂ ಮನಸ್ಸೊಂದು ಇದ್ದರೆ ಯಾವ ಕಾಲಧರ್ಮ ಪರಿಸ್ಥಿತಿಯೂ ಅನುಷ್ಠಾನಕ್ಕೆ ಅಡ್ಡಿ ಮಾಡುವುದಿಲ್ಲ. (ಭೀಷ್ಮರೂ, ದ್ರೋಣರೂ-ಇವರ ವಿಷಯ ಹಿಂದೆಯೇ ತಿಳಿಸಿದೆ.) ಮುಸಲ್ಮಾನರಲ್ಲಿ ಆಸ್ತಿಕರಾದವರು ಪ್ರಯಾಣಮಾಡುತ್ತಿದ್ದಾಗಲೂ, ಪ್ರಾರ್ಥನೆಯಕಾಲ ಒದಗಿದಾಗ ನೆಲಕ್ಕೆ ಅಲ್ಲೇ ಬಟ್ಟೆಯನ್ನು ಹಾಸಿ, ಪ್ರಾರ್ಥನೆಯನ್ನು ಸಲ್ಲಿಸುವುದನ್ನು ನೋಡಬಹುದು. ಮಾನವನು ತನ್ನ ಜೀವನದಲ್ಲಿ ಉತ್ಕರ್ಷವನ್ನು ಬೆಳೆಸಿಕೊಳ್ಳಬೇಕಾದರೆ ಕೆಲವು ವಿಧಿನಿಷೇಧಗಳನ್ನು ಒಟ್ಟೊಟ್ಟಿಗೆ ಅನುಷ್ಠಾನದಲ್ಲಿ ತರಬೇಕಾಗುವುದು. ಸಂಧ್ಯಾವಂದನೆಯು ಅಂತಹ ಒಂದು ಸಾಧನೆ. ಆದುದರಿಂದ ನಿಜವಾಗಿ ಅಡ್ಡಿಯಾಗಿರುವುದು ಪರಿಸ್ಥಿತಿಯಲ್ಲ. ಶ್ರದ್ಧಾಹೀನತೆ, ಅದಕ್ಕೂ ಮೂಲ ಕಾರಣ ಸನ್ಧ್ಯಾವಂದನೆಯಿಂದ ಪ್ರಯೋಜನವುಂಟು ಎಂಬ ವಿಷಯ ಗೊತ್ತಿಲ್ಲದೆ ಇರುವುದು. ತನಗೆ ಪ್ರಯೋಜನಕ್ಕೆ ಬರದ ಕೆಲಸವನ್ನು ಮಾಡುವುದಕ್ಕೆ ಯಾವ ದಡ್ಡನೂ ಹೋಗುವುದಿಲ್ಲ. ಆದುದರಿಂದ ಈಗ ನಾವು ಸಂಧ್ಯಾವಂದನೆ ಎಂದರೇನು? ಅದರ ಪ್ರಯೋಜನವೇನು? ಮುಂತಾದ ವಿವರಗಳನ್ನು ತಿಳಿದುಕೊಳ್ಳುವುದಕ್ಕೆ ಹೋಗೋಣ.

ಸನ್ಧ್ಯಾವಂದನೆಯ ವಿಷಯದಲ್ಲಿ ಕೆಲವು ಋಷಿವಾಕ್ಯ ಹೀಗಿದೆ. ದ್ವಿಜರು ಸನ್ಧ್ಯಾವಂದನೆಯನ್ನು ಯಾವಾಗಲೂ ಆಚರಿಸಬೇಕು. "(ಸನ್ಧ್ಯಾತ್ರಯಂತು ಕರ್ತವ್ಯಂದ್ವಿಜೇನಾತ್ಯವಿದಾ ಸದಾ (ಅತ್ರಿ)" ಸನ್ಧ್ಯಾಹೀನನಾದ ದ್ವಿಜನು ಅಪವಿತ್ರನಾಗುತ್ತಾನೆ. ಅವನು ಯಾವ ಕರ್ಮ ಮಾಡುವುದಕ್ಕೂ ಅರ್ಹನಾಗುವುದಿಲ್ಲ. "ಸನ್ಧ್ಯಾಹೀನೋಽಶುಚಿರ್ನಿತ್ಯಂ ಅನರ್ಹಸ್ಸರ್ವಕರ್ಮಸು" (ದಕ್ಷ) ಹೀಗೆ ಸನ್ಧ್ಯಾವಂದನೆಯು ಒಂದು ನಿತ್ಯ ಕರ್ಮ ಹಾಗೂ ಒಂದು ಧರ್ಮಾನುಷ್ಠಾನ. ಆದರೆ ಹಾಗೆಂದು ಸನ್ಧ್ಯಾವಂದನೆಯು ಒಂದು ಗೊಡ್ಡು ಆಚಾರಹಾಗಿಲ್ಲ. ಪಾರಮಾರ್ಥಿಕ ಪ್ರಯೋಜನದ ಜೊತೆಗೆ ಐಹಿಕವಾದ ಲಾಭವೂ ಅದರಿಂದ ಉಂಟು. ಆರೋಗ್ಯ, ಮನಶ್ಶಾಂತಿ ಇವೇ ಕೂಡಲೇ ಕಾಣಬರುವ ಪ್ರಯೋಜನಗಳು. ಅವು ಯಾರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಜೇಡ ? ಋಷಿಗಳು ದೀರ್ಘಕಾಲ ಸಂಧ್ಯೆಯನ್ನು ಆಚರಿಸಿದುದರಿಂದಲೇ ದೀರ್ಘಾಯುಸ್ಸನ್ನು ಪಡೆದರು [ಋಷಯೋ ನಿತ್ಯ ಸಂಧ್ಯತ್ವಾದ್ದೀರ್ಘಮಾಯುರ ವಾಪ್ನುವ [ಮಹಾಭಾರತ]. ಮಂತ್ರಗಳ ಅರ್ಥದಕಡೆ ಕ್ಷಣ ಕಾಲ ಹಣಕಿ ನೋಡಿದರೂ ಮಂತ್ರಗಳು ನಮಗೆ ನಾವು ಮಾಡುತ್ತಿರುವ ಪಾಪ ಪುಣ್ಯಗಳ ಪರಿಚಯವನ್ನು ಪದೇ ಪದೇ ನೆನಪು ಕೊಡುತ್ತಾ, ಅಂತರಂಗ ಪರಿಶೋಧನೆಯ ಮೂಲಕ, ವ್ಯಕ್ತಿಯು ಸಮಾಜದ ಉತ್ತಮ ಪ್ರಜೆಯಾಗಿ ರೂಪುಗೊಳ್ಳಲು ನೆರವಾಗುವುದು ಎಂದು ಗೊತ್ತಾಗುವುದು. "ಸೂರ್ಯಶ್ಚ, ಅಗ್ನಿಶ್ಚ ಮತ್ತು ಆಪಃ ಪುನನ್ತು" ಮಂತ್ರಗಳನ್ನು ನೋಡಿ.

ಸಂಧ್ಯಾ ಹೀನನ ವಿಷಯ

ಸನ್ಧ್ಯಾವಂದನೆಯನ್ನು ಮಾಡದವರಿಗೆ ಆಗುವ ಕ್ರೂರಗತಿಯನ್ನು ಕೆಲವರು ಋಷಿಗಳು ಬಿತ್ತರಿಸಿದ್ದಾರೆ. "ಸಂಧ್ಯಾಯೀನ ನವಿಜ್ಞಾತಾ ಸಂಧ್ಯಾನೈವಾಪ್ಯುಪಾಸಿತಾ। ಜೀವಮಾನೋ ಭವೇಚ್ಛೂದ್ರೋ ಮೃತಃಶ್ವಾಜೈವ ಜಾಯತೇ॥ ಯಃ ಸಂನ್ಧ್ಯಾಂ ಕಾಲತಃ ಪ್ರಾಪ್ತಾ ಮಾಲಸ್ಯಾದತಿವರ್ತತೇ। ಸೂರ್ಯ ಹತ್ಯಾಮವಾಪ್ನೋತಿ ಹ್ಯಲೂಕತ್ವ ವಿಯಾತ್ ಸ ಚ॥ಅತ್ರಿ॥ ಸಂಧ್ಯೆಯನ್ನು ಯಾರು ತಿಳಿದಿಲ್ಲವೋ ಅಥವಾ ತಿಳಿದೂ ಅದರ ಉಪಾಸನೆ ಮಾಡುವುದಿಲ್ಲವೋ ಅವನು ಬದುಕಿದ್ದರೂ ಶೂದ್ರ ಸಮಾನನು ! ಮೃತನಾದ ಮೇಲೆ ನಾಯಿಯ ಜನ್ಮವನ್ನು ಪಡೆಯುತ್ತಾನೆ. ಯಾವ ದ್ವಿಜನು ಸಂಧ್ಯಾಸಮಯ ಪ್ರಾಪ್ತವಾದಾಗ ಆಲಸಿಕೆಯಿಂದ ಅದರ ಉಲ್ಲಂಘನೆಯನ್ನು ಮಾಡುತ್ತಾನೋ ಅವನಿಗೆ ಸೂರ್ಯನನ್ನು ಹಂಸಿಸಿದ ಪಾಪ ತಗಲುತ್ತದೆ ಮತ್ತು ಮೃತನಾದ ಮೇಲೆ ಗೂಬೆಯ ಜನ್ಮವನ್ನು ಪಡೆಯುತ್ತಾನೆ.

ಈ ವಾಕ್ಯಗಳನ್ನು ನೋಡಿ ವಾಚಕರು ಅಧೀರರಾಗಬೇಕಾಗಿಲ್ಲ. ಆಯ ಚಾತುರ್ವರ್ಣ್ಯವು ಪೂರ್ಣರೂಪದಿಂದ ಉಸಸ್ಥಿತವಿದ್ದ ಕಾಲದ ಚಿತ್ರ. ಈಗ ಎಲ್ಲವೂ ಕೈಗಾರಿಕೀಕರಣ, ಪಟ್ಟಣೀಕರಣಗಳಿಂದ ಕಲಸುಮೇಲೋಗರವಾಗಿದೆ. ಆದರೆ ಅದನ್ನು ಮಾತಿನಿಂದ ಹೇಳುತ್ತೇನೆ. ಮನಸ್ಸಿನಿಂದ ಒಪ್ಪುತ್ತಿಲ್ಲ. ಆಚಾರದ ವಿಷಯದಲ್ಲಿ ಬಹು ಕಟ್ಟು ನಿಟ್ಟಾದ ನಿಲುವಿನವನೆಂಬ ಮನುವು ಕೂಡ ತನ್ನ ಗ್ರಂಥದಲ್ಲಿ ("ಆಥಾಹಸಾಮಯಾಚಾರಿಕಾ ಧರ್ಮಾನ್ ವ್ಯಾಖ್ಯಾಸ್ಯಾಮಃ (ಈಗ ಆ ಸಮಯದ ಧರ್ಮಗಳನ್ನು ವ್ಯಾಖ್ಯಾನ ಮಾಡುತ್ತೇವೆ) ಎಂದು ತಿಳಿಸಿದ್ದಾನೆ. ಅಂದರೆ ಸಮಯ ಮಾರ್ಪಟ್ಟರೆ ಆಚರಣೆಯಲ್ಲಿಯೂ ಅಲ್ಪಸ್ವಲ್ಪ ಬದಲಾವಣೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಲು ಅವಕಾಶವಿದೆ ಎಂದಾಯಿತಷ್ಟೆ! ವಿವಿಧ ಹಂತಗಳ ಅಭಿಪ್ರಾಯವುಳ್ಳ ಋಷಿಗಳ ಮತ ನಮಗೆ ಪರಿಚಯವಿಲ್ಲ ಅಷ್ಟೆ!

ಸನ್ಧ್ಯಾವಿಧಿಯನ್ನು ನಿರ್ಣಯಿಸಿರುವ ಋಷಿಗಳು ವ್ಯವಹಾರವನ್ನು ತಿಳಿಯದ ಆಜ್ಞರೂ ಅಲ್ಲ. ಕಾಲ ಧರ್ಮವನ್ನು ಊಹಿಸಿಯೋ ಏನೋ ಋಷಿಗಳು ಮೊದಲೇ ವಿವಿಧ ಅಂತಸ್ತುಗಳನ್ನು ಸೂಚಿಸಿಯೂ ಇದ್ದಾರೆ. ಕರ್ಮವನ್ನು ಪೂರ್ಣವಾಗಿ ಬಿಟ್ಟೇ ಬಿಡದೆ ಯಾವುದಾದರೂ ಒಂದು ಹಂತದಲ್ಲಿಯಾದರೂ ನಿಲ್ಲಲಿ ಎಂಬುದೇ ಅವರ ಸದಾಶಯ. ಮಗ ಪದವೀಧರನಾಗದಿದ್ದರೆ ಅಕ್ಷರಸ್ಥನಾದರೂ ಆಗಲಿ ಎಂಬುದೇ ಹಂಬಲ, ವಿನಾಯಿತಿ ತಾತ್ಪರ್ಯದ ಕೆಳಗಿನ ಶ್ಲೋಕಗಳಿಂದ ಈ ಅಭಿಮತವು ಸ್ಪಷ್ಟವಾಗುವುದು. ರಾಷ್ಟ್ರಭಂಗೇ ನೃಪಕ್ರೋಧೇ ರೋಗಾರ್ತೇ ಸೂತಕೇऽಪಿ ಚ। ಸನ್ಧ್ಯಾವಂದನ ವಿಚ್ಛಿತ್ತಿಃ ನದೋಷಾಯ ಕದಾಚನ॥ ಜಮದಗ್ನಿ॥ ದೇವಾಗ್ನಿದ್ವಿಜ ವಿದ್ಯಾನಾಂ ಕಾರ್ಯೇ ಮಹತಿ ಸಂಸ್ಥಿತೇ। ಸನ್ಧ್ಯಾಹೀನೋ ನ ದೋಷಾಸ್ತಿ ಯಸ್ಮಾತ್ಸತ್ಕರ್ಮ ಸಾಧಕಾಃ॥

ರಾಜ್ಯಕ್ಕೊಳ್ಗೆ, ರಾಜಾಗ್ರಹ, ರೋಗಬಾಧೆ ಮತ್ತು ಸೂತಕ ಈ ಸಂದರ್ಭಗಳಲ್ಲಿ ಸನ್ಧ್ಯಾವಂದನ ವಿಚ್ಛತಿಯು ದೋಷವಾಗುವುದಿಲ್ಲ. ದೇವತಾರಾಧನೆ, ಹೋಮ, ದ್ವಿಜಪೂಜೆ : ವಿಧ್ಯಭ್ಯಾಸಗಳೆಂಬ ದೊಡ್ಡ ಕಾರ್ಯಗಳಲ್ಲಿ ತೊಡಗಿದ್ದಾಗ, ಸತ್ಕರ್ಮದಲ್ಲಿ ತೊಡಗಿರುವ ಕಾರಣ, ಸಂಧ್ಯಾವಂದನೆ ಮಾಡದಿದ್ದರೂ ಬಾಧಕವಿಲ್ಲ — ವೃದ್ಧ ಮನುವು ಇನ್ನೂ ಸ್ಪಷ್ಟವಾಗಿ "ಉದಯವಾಗಿ ಬಿಟ್ಟರೂ ಅಥವಾ ಕತ್ತಲೆ ಕವಿಯುತ್ತ ಬಂದರೂ ಸಂಧ್ಯಾಕಾಲವೂ ನಷ್ಟವಾಗುವುದಿಲ್ಲ. ಏಕೆಂದರೆ ಕರ್ಮದಲ್ಲಿ ಮುಖ್ಯ ಕಲ್ಪ, ಅನುಕಲ್ಪ (ಮುಖ್ಯ ಕಾಲ, ಗೌಣಕಾಲ)ಗಳು ಉಂಟೇ ಉಂಟು" ಎಂದಿದ್ದಾನೆ. (ನಪ್ರಾತರ್ನಪ್ರದೋಷಶ್ಚ ಸಂಧ್ಯಾಕಾಲೋऽತಿವರ್ತತೇ! ಮುಖ್ಯ ಕಲ್ಪೋऽನು ಕಲ್ಪಶ್ಚ ಸರ್ವಸ್ಮಿಂ ಕರ್ಮಣಿ ಸ್ಮೃತಃ॥

ಮೇಲಿನ ವಿಧಿ – ಅಪವಾದ ಮಂತ್ರಗಳನ್ನು ಸಮನ್ವಯ ಮಾಡಿದರೆ ಗೊತ್ತಾಗುವುದೇನು? ದ್ವಿಜನು ನೇಮೊದಿತವಾದ ಸಂಧ್ಯಾವಂದನೆಯನ್ನು ಮಾಡಿ ಹೇಗಾದರೂ ಉದ್ಧಾರವಾಗಲಿ, ಅದನ್ನು ಬಿಡದಿರಲಿ ಎಂಬುದೇ ಋಷಿಗಳ ಮನಃಪೂರ್ವಕವಾದ ಉದ್ದೇಶವೆಂದು ಗೊತ್ತಾಗುವುದು.

ಸಂಧ್ಯಾವಂದನೆಯ ಇತಿಹಾಸ

ಸನ್ಧ್ಯೋಪಾಸನೆಯು ಈಗ್ಗೆ ಸುಮಾರು ಏಳು ಸಾವಿರ ವರ್ಷಗಳಿಂದಲೂ ನಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಶದಲ್ಲಿ ಆಚರಣೆಯಲ್ಲಿದೆ. ಏಳುಸಾವಿರವೆನ್ನುವುದಕ್ಕೆ ಕಾರಣ ಋಗ್ವೇದದಲ್ಲಿಯೇ ಗಾಯತ್ರೀ ಮಂತ್ರವಿರುವುದರಿಂದ. ಸನಾತನ ಪಂಥದವರಾದ ನಾವು ವೇದವು ಅನಾದಿಯೆಂದೇ ನಂಬಿದ್ದೇನೆ. ಅದಕ್ಕೊಂದು ಕಾಲದ ಗಡಿಯನ್ನು ಗೊತ್ತುಮಾಡಲು ಒಪ್ಪೆವು. ಆದಾಗ್ಯೂ ಪಾಶ್ಚಿಮಾತ್ಯ ಸಂಸ್ಕೃತಿಯ ಸಂಪರ್ಕದಿಂದ ಪ್ರತಿಯೊಂದನ್ನು ಚಾರಿತ್ರಿಕವಾಗಿ ಒರೆಹಚ್ಚುವ ಈ ದಿನಗಳಲ್ಲಿ, ವಿಶ್ವಾಸವನ್ನು ಮೂಡಿಸಬೇಕಾದರೆ, ನಾವೂ ಆ ಮಾಪನದಿಂದ ಅಳೆದು ತೋರಿಸಲೇಬೇಕಾದುದು ಅನಿವಾರ್ಯ. ಆ ವಿಧ ನಲ್ಲಿಯೂ ಪ್ರಾಚೀನತೆಯು ನೆಲೆಗೊಂಡಿದೆ.

ಸಂಧ್ಯಾವಂದನೆಯು ಈಗಿನ ರೂಪವನ್ನು ತಳೆದುದು ಮೂರು ಹಂತಗಳಲ್ಲಿ. ೧. ವೇದಗಳ ಕಾಲದಲ್ಲಿ ೨. ಅದರ ನಂತರದ ಸಹಸ್ರಾರು ವರ್ಷಗಳಲ್ಲಿ ಪ್ರಾದುರ್ಭವಿಸಿದ ಸೂತ್ರಗಳ ಕಾಲದಲ್ಲಿ.

ಶ್ರೀ ಸ್ವಾಮಿ ಚಿನ್ಮಯಾನಂದಜೀ ಅವರ "ಜಪಯೋಗ ಮತ್ತು ಗಾಯತ್ರಿ" ಎಂಬ ಕಿರುಹೊತ್ತಿಗೆಯಿಂದ ಈ ತಾತ್ಪರ್ಯವನ್ನು ಕೃತಜ್ಞತೆಯಿಂದ ಗ್ರಹಿಸ ಲಾಗಿದೆ.

ಪ್ರಾಚೀನ ಕಾಲದಲ್ಲಿ ಸಂಧ್ಯಾಕರ್ಮವು, ಸೂತ್ರಗಳು ಮತ್ತು ಆಗಮಗಳ ನಂತರ ಈಗ ಆಗಿರುವಷ್ಟು ವಿಸ್ತಾರವಾಗಿರಲಿಲ್ಲ. ಮೊದ ಮೊದಲ ದಿನಗಳಲ್ಲಿ ವೇದವು ನಾವು ಅರುಣೋದಯ ಮತ್ತು ಅಸ್ತಮಾನ ಕಾಲಗಳಲ್ಲಿ ಸೂರ್ಯನಿಗೆ ಎದುರಾಗಿ ಜಲದಲ್ಲಿ ನಿಂತು ಗಾಯತ್ರಿ ಮಂತ್ರವನ್ನು ಕೀರ್ತಿಸಬೇಕೆಂದು ಉಪ ದೇಶಿಸಿತ್ತು. ಈ ಮಂತ್ರವನ್ನು ಜಪಿಸುತ್ತಿರುವವನು ತನ್ನ ಕೈ ಬೊಗಸೆಯಲ್ಲಿ ನೀರನ್ನು ಹಿಡಿದುಕೊಂಡು ಪ್ರತಿಯೊಂದು ಮಂತ್ರ ಜಪ ಮುಗಿಯುತ್ತಲೂ ಆ ಉದಕವನ್ನು ಭಗವಂತನಿಗೆ ಅರ್ಪಿಸಬೇಕು. ಇದೇ ಮಹಾ ಅತಿಥಿಗೆ ಕೊಡುವ ಅರ್ಘ್ಯಪ್ರಧಾನ. ಸಂಧ್ಯಾಕರ್ಮದಲ್ಲಿ ಗಾಯತ್ರಿ ಮಂತ್ರೋಚ್ಚಾರಣೆಯೇ ಮುಖ್ಯವಾದ ಅಂಗ. ಆ ಮೊದಲ ದಿನಗಳ ಸಂಧ್ಯಾವಂದನೆಯು ಕೇವಲ ಒಂದು ಪವಿತ್ರಗೊಳಿಸುವ ಕರ್ಮ ವಾಗಿತ್ತು. ಆಮೇಲಾಮೇಲೆ ಗಾಯತ್ರಿಯ ಪ್ರಾಮುಖ್ಯತೆಯು ನಮ್ಮ ಈಗಿನ ಹಂತಕ್ಕೆ ಬೆಳೆಯಿತು. ವೇದಗಳ ನಂತರ ಸಹಸ್ರಾರು ವರ್ಷಗಳ ಬಳಿಕ, ಸೂತ್ರ ಕಾರರು ಕೆಲವನ್ನು ಸೇರಿಸುತ್ತಾ ಬಂದರು. ಇನ್ನು ಕೆಲಕಾಲದ ಮೇಲೆ, ಸೂತ್ರ ಗಳನ್ನು ಹಿಂಬಾಲಿಸಿ ಬಂದುವು ಆಗಮಗಳು. ಆದರೆ ಕರ್ತೃಗಳು ಸಂಧ್ಯಾವಂದನೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮದೇ ಆದ ಕೊಡುಗೆಗಳನ್ನು ಕೊಟ್ಟರು. ವಿಷ್ಣು, ಶಿವ ಮತ್ತು ಶಕ್ತಿ ಇವರ ಪೂಜೆಯಲ್ಲಿ ತಾಂತ್ರಿಕ ವಿಧಾನಗಳನ್ನು, ಪೂಜಾನಿಯಮವನ್ನು ವಿಧಿಸುವುದು ಆಗಮುಗಳ ಕಾರ್ಯಕ್ಷೇತ್ರ. ಪ್ರತಿಯೊಂದು ಆಗಮವೂ ಗಾಯತ್ರಿಯು ತನ್ನದೇ ಎಂದು ಹೇಳಿಕೊಂಡಿತು. ಆ ಆಗಮದಲ್ಲಿ ಯಾವ ದೇವರ ಹೆಸರನ್ನು ಹೊಗಳಿದೆಯೋ ಅದಕ್ಕೆ ಅನುಗುಣವಾಗಿ ಗಾಯತ್ರಿಯ ಅಧಿದೇವತೆಯ ಹೆಸರನ್ನು ಸಾರಿದುವು. ಶಾಕ್ತರು ಗಾಯತ್ರಿಯು ಸ್ತ್ರೀ ದೇವತೆ ಎಂಬ ಭಾವವನ್ನಿತ್ತರು. ಗಾಯತ್ರಿ ದೇವಿಯು ಬಹು ಬೇಗ ವೇದ ಮಾತೆಯಾದಳು. ಗಾಯತ್ರಿಯನ್ನು ಜಪಿಸಿದರೆ ನಾವು ವೇದವನ್ನು ಜಪಿಸಿದೆನೆಂದೇ ಬ್ರಾಹ್ಮಣರು ಈಗಲೂ ನಂಬುತ್ತಾರೆ.

ಒಬ್ಬ ಋಷಿಗೆ ಮಂತ್ರದ ಒಂದಂಶದ ದರ್ಶನವಾದ ಕೂಡಲೇ ಅವನು ಪುಳಕಿತನಾಗಿ, ಅದನ್ನು ನಿತ್ಯಾನುಷ್ಠಾನದಲ್ಲಿ ಸೇರಿಸಿದ, ಇನ್ನೊಬ್ಬನು ಇನ್ನೊಂದನ್ನು, ಹೀಗೆ ಬೆಳೆದಿದೆ. ತಪ್ಪೇನಿಲ್ಲ. ಪರಸ್ಪರ ವಿರೋಧವೂ ಇಲ್ಲ. ನಾವು ದಿನಚರಿಯಲ್ಲಿ ದೇವರ ಪೂಜೆ ಮಾಡುವಾಗ ಕೇಶವಾದಿ ೨೪ ನಾಮಗಳಿಂದ ಮಾತ್ರ ಅರ್ಚನೆಮಾಡುತ್ತೇವೆ. ಸ್ವಲ್ಪ ವಿರಾಮ ದೊರೆತರೆ ಅಷ್ಟೋತ್ತರಗಳಿಂದ. ಇನ್ನೂ ವ್ಯವಧಾನವುಂಟಾದರೆ ಸಹಸ್ರನಾಮಗಳಿಂದ ಅರ್ಚಿಸುತ್ತೇನೆ. ಇದರಲ್ಲಿ ಅಭಾಸನೇನಿಲ್ಲ. ಸಂಧ್ಯಾವಂದನೆಯೂ ಹಾಗೆಯೇ ಅಭಿಪ್ರಾಯಗಳು ಪರಸ್ಪರ ವಿರೋಧಕವಲ್ಲ; ಪೂರಕಗಳು, ಪೋಷಕಗಳು.

ಚನ್ನು ಎಂದು ಹೆಚ್ಚು ಹೆಚ್ಚಾಗಿ ಸೇರಿಸಿರುವರೇ ಹೊರತು ಸರಿಯಲ್ಲ ಎಂಬ ಖಂಡನೆಗೆ ಒಳಗಾಗಿ ತಿರಸ್ಕೃತವಾದ ಭಾಗ ಯಾವುದೂ ಇಲ್ಲ. ಈ ಅಂಶವು ನಮ್ಮ ಗಮನಕ್ಕೆ ಬರಬೇಕು.

ಇನ್ನು ಆಶ್ಚರ್ಯಪಡಬೇಕಾದುದು ಏನೆಂದರೆ ಇಷ್ಟೊಂದು ವೈವಿಧ್ಯತೆ ಇರುವುದಕ್ಕಲ್ಲ. ಇಷ್ಟು ದೀರ್ಘಕಾಲದಲ್ಲಿಯೂ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಈ ರೀತಿ ಏಕ ಸೂತ್ರ ಉಳಿದುಕೊಂಡಿರುವುದಕ್ಕಾಗಿ.

ಸಂಸ್ಕೃತದಲ್ಲಿಯೇ ಏಕೆ?

ಸಂಧ್ಯಾವಂದನೆಯು "ಭಗವಂತನ ವಂದನ" ಎಂದಾದರೆ ಅದಕ್ಕೆ ಸಂಸ್ಕೃತ ಮಂತ್ರಗಳನ್ನೇ ಏಕೆ ಬಳಸಬೇಕು? ಆ ಸ್ವರಗಳನ್ನೇ ಏಕೆ ಹೇಳಬೇಕು? ದೇಶಭಾಷೆಯಲ್ಲಿಯೇ ಗದ್ಯರೂಪವಾಗಿಯೇ ಏಕೆ ಹೇಳಬಾರದು? ಭಗವಂತನಿಗೆ ಅದೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೊತ್ತಾಗುವುದಲ್ಲ ! ಎಂದು ತರ್ಕಮಾಡುವವರೂ ಉಂಟು. ಇಂಥವರು ಬಹು ಜನವಿಲ್ಲ. ಆದರೂ ಇಂಥ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾದುದು ಉಚಿತ.

ಉತ್ತರ : ಸಂಧ್ಯಾವಂದನೆಯು ಒಂದು ವಿಶೇಷ ಪ್ರಕಾರವಾದ ವೈದಿಕ ಕರ್ಮ ಅದರ ಮಹತ್ವವನ್ನು ಶ್ರುತಿ, ಸ್ಮೃತಿ ಮತ್ತು ಪುರಾಣಗಳಲ್ಲಿ ಅನೇಕ ಕಡೆ ಪ್ರತಿಪಾದನೆ ಮಾಡಲಾಗಿದೆ. ಅದರಲ್ಲಿ ಬಳಸಬೇಕಾದ ಪ್ರತಿಯೊಂದು ಮಂತ್ರಕ್ಕೂ, ಮೊದಲಿನಲ್ಲಿಯೇ ಆ ಮಂತ್ರವನ್ನು ಕಂಡು ಹಿಡಿದ ಋಷಿಯ ಹೆಸರು, ಮಂತ್ರದೇವತೆ ಯಾರು ? ಮಂತ್ರಗಳಲ್ಲಿ ಎಷ್ಟು ಅಕ್ಷರ, ಎಷ್ಟು ಪಾದಗಳಿವೆ ಮತ್ತು ಆ ಮಂತ್ರವನ್ನು ಯಾವ ಸಂದರ್ಭದಲ್ಲಿ ಬಳಸಬೇಕು ಎಂಬ ಅಂಶವನ್ನು ನಿಖರವಾಗಿ ತಿಳಿಸಿ, ಪರಿಷ್ಕಾರ ಮಾಡಿದೆ. ಇವೆಲ್ಲವನ್ನೂ ಒಳಗೊಂಡ ಒಂದು ಚೌಕಟ್ಟನ್ನು 'ವಿಧಿ, ಕ್ರಮ' ಎಂದು ಕರೆಯುತ್ತೇವೆ. ಆ ವಿಧಿಯು ಪ್ರಾರಂಭದಿಂದ ಕಡೆಯವರೆಗೆ ಯಾವ ಪ್ರಕಾರವಾಗಿದೆಯೋ ಅದರ ಯಥಾವತ್ತಾಗಿ ನಡೆಸಿದರೆ ಆ ಕರ್ಮವಾದಂತಾಗುವುದು ಅದರ ಫಲ ಪ್ರಾಪ್ತಿಯಾಗುವುದು. ಯಾವ ಭಾಷೆಯಲ್ಲಿಯೂ ಭಗವಂತನ ಕೀರ್ತನೆ ಮಾಡುವುದು ಒಳ್ಳೆಯದೇ. ಆದು ಖಂಡಿತ ಭಗವಂತನಿಗೆ ವೇದ್ಯವಾಗುವುದು. ಆದರೆ ಅದರಿಂದ 'ಸಂಧ್ಯಾವಂದನೆ' ಎಂಬ ನಿತ್ಯಕರ್ಮವನ್ನು ಮಾಡಿದಂತಾಗುವುದಿಲ್ಲ. ಕರ್ಮ ಲೋಪದೋಷದಿಂದ ವಿಮೋಚನೆಯೂ ಆಗದು. ಅಲ್ಲದೆ ಋಷಿಗಳು ಕಂಡುಹಿಡಿದ ಮಂತ್ರಗಳನ್ನು ಬದಲಾಯಿಸುವ ಅಧಿಕಾರವೂ ನಮಗಿಲ್ಲ : ಶಕ್ತಿಯೂ ಇಲ್ಲ. ನಿರುಕ್ತಕಾರನ ವಚನ ಹೀಗಿದೆ "ಪುರುಷ ವಿದ್ಯಾನಿತ್ಯತ್ವಾತ್ ಕರ್ಮ ಸಂಪತ್ತಿರ್ಮಂತ್ರೋವೇದೇ" ಅಂದರೆ ಮನುಷ್ಯನು ಅಲ್ಪಜ್ಞನಾಗಿದ್ದಾನೆ. ಆದುದರಿಂದ ಅವನ ಜ್ಞಾನವೂ ಅನಿತ್ಯ : ಅಪೂರ್ಣ. ಆ ಅನಿತ್ಯ ಅಪೂರ್ಣ ಜ್ಞಾನದಿಂದ ಸತ್ಕರ್ಮಸಿದ್ಧಿಯು ಯಾವಾಗಲೂ ಆಗಲಾರದು. ಆದುದರಿಂದ ವೇದಮಂತ್ರದ್ವಾರವೇ ಕರ್ಮ ಸಂಪಾದನೆ ಪಡೆದುಕೊಳ್ಳಬೇಕಾಗಿದೆ. "ಮಂತ್ರಗಳು" ಎಂಬುವು ಋಷಿಗಳಿಗೆ ಅವರು ಭಾವಪೂರ್ಣರಾಗಿದ್ದಾಗ ಮೊದಲು ಗೋಚರವಾದ ಚಿಹ್ನೆ. ಅದರ ಮೂರ್ತ ಸ್ವರೂಪವೇ ಸ್ವರ. ಪದವೆಂಬುದು ಭಾವನೆಯ ಹೊರಗೆ ಅಭಿವ್ಯಕ್ತವಾಗಲು ತೊಟ್ಟ ಉಡಿಗೆ - ತೊಡಿಗೆ.

ವೇದ ಮಂತ್ರಗಳಿಗೆ ಒಂದು ಸಾಮಾನ್ಯ ಅರ್ಥ (ಅಪರ) ಇನ್ನೊಂದು ಪರ ಬ್ರಹ್ಮನು ಸೂಚಕವಾದ ಅರ್ಥ (ಪರ) ಎಂದು ಎರಡು ಅರ್ಥಗಳಿವೆ.

CC-O. In Public Domain. Digitized by eGangotri

ಪರಾಪರ ವಿಭಾಗೇನ ವೇದಾರ್ಥೋ ದ್ವಿವಿಧಃ ಸ್ಮೃತಃ ।
ಅಪರೋ ಧರ್ಮ ಸಂಜ್ಞಃ ಸ್ಯಾತ್ತತ್ಪರ ಪ್ರಾಪ್ತಿಸಾಧಕಂ ॥

(ಸ್ವಾಂದ ಪು). ಪೂಜ್ಯ ಡಿ. ವಿ.ಜಿ. ಅವರು ಹೀಗೆ ಹೇಳಿದ್ದಾರೆ.

ವೇದೋಚ್ಚಾರಣೆ : ವೇದೋಚ್ಚಾರಣೆಗಾಗಿ ಒಂದು ಸ್ವರಕರ್ಮವು ಸಂಪ್ರದಾಯ ವಿಹಿತವಾಗಿ ಬಂದಿದೆ. ಆ ಸ್ವರ ಶಾಸ್ತ್ರಕ್ಕೆ ಶೀಕ್ಷಾ ಎಂದು ಹೆಸರು. ವೇದ ವಾಕ್ಯಗಳನ್ನು ಇಷ್ಟ ಬಂದಂತೆ ವಿವಿಧ ರಾಗಗಳಿಂದಾಗಲಿ, ಧ್ವನಿವಿಕಾರಗಳಿಂದಾಗಲಿ ಉಚ್ಚರಿಸತಕ್ಕದ್ದಲ್ಲ. ಏಕೆಂದರೆ ವೇದದ ಸ್ವರಕ್ರಮವು, ಆ ಭಾಷೆಯ ಒಂದು ಅಂಗ ಪದಗಳಿಗೆ ಹೇಗೆ ನಿಶ್ಚರ್ಷೆಯಾದ ಅರ್ಥಗಳುಂಟೋ ಹಾಗೆಯೇ ಧ್ವನಿವಿಶೇಷಗಳಿಗೂ ಅರ್ಥಗಳು ಬಹುಕಾಲದ ರೂಢಿಯಿಂದ ಗೊತ್ತಾಗಿ ಬಂದಿರುತ್ತವೆ. ಆ ರೂಢಿ ತಪ್ಪಿದರೆ ಆ ಅರ್ಥ ತಪ್ಪೀತು. ಈ ಕಾರಣದ ಜೊತೆಗೆ ಇನ್ನೊಂದಿದೆ. ಶಬ್ದವು ಕಿವಿಗೆ ಶ್ರುತವಾದ ಮಾತ್ರದಿಂದಲೇ ಮನಸ್ಸು ಒಂದು ಉದಾತ್ತ ಭಾವಕ್ಕೇರುವಂತೆ ವೇದದಲ್ಲಿ ಸ್ವರವರ್ಣ ವ್ಯವಸ್ಥೆಯಾಗಿರುತ್ತದೆ. ವೇದ ಘೋಷಣೆಯಲ್ಲಿರುವ ವಿಶೇಷ ಶಕ್ತಿ ಅದು. ಬಹುಕಾಲದ ಪ್ರಯೋಗ ಪರೀಕ್ಷೆಗಳ ಆಧಾರದ ಮೇಲೆ ಮಹರ್ಷಿಗಳ ಆಧಾರದ ಮೇಲೆ ಮಹರ್ಷಿಗಳು ಆ ವ್ಯವಸ್ಥೆಯನ್ನು ವಿಧಾಯಕ ಮಾಡಿದ್ದಾರೆಂದು ತೋರುತ್ತದೆ. ಆ ಪುರಾತನ ಸಂಪ್ರದಾಯದ ಪ್ರಯೋಜನ ನಮಗೆ ದೊರೆಯಬೇಕಾದರೆ, ಆ ಬಗೆಯ ಮನಸ್ಸಂಸ್ಕಾರವನ್ನು ನಾವು ಅಪೇಕ್ಷಿಸುವುದಾದರೆ. ವೇದಪಾಠವು ಆ ಸ್ವರ ಕ್ರಮವನ್ನು ಅನುಸರಿಸಿದ್ದಾಗಿರಬೇಕು. ಮನಸ್ಸು ಒಂದು ಉನ್ನತವೂ ಹಾಗೆಯೇ ಗಂಭೀರವೂ ಆದ ಸ್ಥಿತಿಯಲ್ಲಿಲ್ಲದಿದ್ದರೆ ಆಗ ಮಾಡಿದ ವೇದ ಪಾಠವು ನಮಗೆ ಉಪಕಾರಕವಾಗದು.

ಮೇಲಾಗಿ ಸಂಸ್ಕೃತವು ಯಾವೊಂದು ಗುಂಪಿನ ಗುತ್ತಿಗೆಯೂ ಅಲ್ಲ. ಭಾರತೀಯರೆಲ್ಲರಿಗೂ ಸೇರಿದ ಸಂಪತ್ತು. ಅದನ್ನು ಉಳಿಸಿ ಬೆಳಸೋಣ. ವೃಥಾ ವಿಕಲ್ಪವನ್ನು ಬದಿಗಿಟ್ಟು ಭಕ್ತಿಯಿಂದ ಭಾವಪೂರ್ಣವಾಗಿ ಆರಾಧಿಸಿ ಕೃತಾರ್ಥರಾಗೋಣ.

ಈಗ ರೂಢಿಯಲ್ಲಿರುವ ಸಂಧ್ಯಾಕ್ರಮದಲ್ಲಿ ಸಾಹಿತ್ಯವನ್ನು ನಾಲ್ಕು ವೇದಗಳಿದಲೂ, ಸ್ಮೃತಿಗಳಿಂದಲೂ, ಪುರಾಣ ಆಗಮಗಳಿಂದಲೂ ಆರಿಸಿಕೊಳ್ಳಲಾಗಿದೆ. ಅವುಗಳ ಔಚಿತ್ಯವನ್ನು ಪ್ರಶ್ನಿಮಾಡುವಾಗ ನಾವು ಆ ಸಾಹಿತ್ಯದ ಪೂರ್ಣಪರಿಚಯ ಪಡೆದಿರಬೇಕು. ಅಂತಹ ಮಹನೀಯರು ವಿದ್ವಾಂಸರಲ್ಲಿಯೇ ಈಗ ಅಪರೂಪ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿದ್ದಾರೆ. ಇನ್ನು ಆಸ್ಮದಾದಿಗಳ ಮಾತೇನು! ಅಥರ್ವವೇದವನ್ನು ಪೂರ್ಣವಾಗಿ ಬಲ್ಲವರು ಭರತಖಂಡದಲ್ಲೆಲ್ಲಾ, ೧೯೭೬ರಲ್ಲಿ ಒಬ್ಬರಿರುವರೆಂಬುದು ಈಚೆಗೆ ಕಾಣ ಬಂದಿತು.!

ಆದುದರಿಂದ ವೇದಸಾಹಿತ್ಯವನ್ನು ಕೆದಕುವಾಗ ನಾವು ಸ್ವಲ್ಪ ವಿನೀತರಾಗಿರುವುದೇ ಕ್ಷೇಮಕರ.

ವಿವಿಧಪಾಠಗಳು

ಸಂಧ್ಯಾವಂದನೆಯ ಕ್ರಮದಲ್ಲಿ ಅನೇಕ ಪಾಠಗಳಿವೆ. ಅವು "ಸಂಧ್ಯಾವಂದನೆ ಸಾವಿರ ಪಾಠ" ಎಂಬ ಗಾದೆಯನ್ನು ಪ್ರಚೋದಿಸಿದೆ. ಆದರೆ ಅದು ನಿಜವಲ್ಲ. ಸ್ಥೂಲವಾಗಿ ಆಡುವ ಮಾತು. ಸ್ವಲ್ಪ ವಿಶ್ಲೇಷಣಪೂರ್ವಕವಾಗಿ, ವಿಮರ್ಶಿಸಿದರೆ ಸಾವಿರ ಪಾಠಗಳಲ್ಲಿಯೂ ಅನುಸ್ಯೂತವಾಗಿ ಸಾಗಿ ಬರುತ್ತಿರುವ ಏಕತ್ವತ್ವೈಯ ಸೂತ್ರವೊಂದು ದ್ಯೋತಕವಾಗುವುದು. ಆಗ ಸಾವಿರವಲ್ಲ : ಪಾಠ ಒಂದೇ ಎಂದು ತಿಳಿದೀತು.

ವಿಸ್ತಾರವಾದ ಈ ದೇಶದಲ್ಲಿ 'ಸುದೀರ್ಘವಾದ ಕಾಲಮಾನದಲ್ಲಿ ಸಂಧ್ಯಾವಂದನೆಯ ಅನೇಕ ಕ್ರಮಗಳು ಕಾಣಬರುವುದು ಆಶ್ಚರ್ಯವಲ್ಲ. ಇವುಗಳನ್ನು ಎರಡು ದೊಡ್ಡ ಗುಂಪಾಗಿಸಬಹುದು. ದ್ರಾವಿಡ ಸಂಪ್ರದಾಯ, ಆಂಧ್ರ ಸಂಪ್ರದಾಯ ಎಂದು. ದ್ರಾವಿಡ ಸಂಸ್ರದಾಯದ ಸ್ಮಾರ್ತ(ಐಯ್ಯರ್‌ರು) ಮತ್ತು ಶ್ರೀವೈಷ್ಣವರ ಪಾಠಗಳಲ್ಲಿ ಬಹುಮಟ್ಟಿನ ಸಾಮ್ಯವಿದೆ. ದ್ವಿತೀಯ ಮಾರ್ಜನೆಯಲ್ಲಿ ಇಬ್ಬರೂ "ಹಿರಣ್ಯವರ್ಣ" ಹೇಳುವುದಿಲ್ಲ. ಧ್ಯಾನ ಶ್ಲೋಕವಾಗಿ (ಮುಕ್ತಾವಿದ್ರುಮ) ಹೇಳುವುದಿಲ್ಲ, ತರ್ಪಣ ಉಂಟು, ಪ್ರಾಣಾಯಾಮದಲ್ಲಿ ಋಷಿಗಳನ್ನು ಛಂದಸ್ಸುಗಳನ್ನು ದೇವತೆಗಳನ್ನು ಪೂರ್ಣವಾಗಿ ಹೇಳುತ್ತಾರೆ. ಹಳೆಯ ಮೈಸೂರಿನ ಆಂಧ್ರ ಪಾಠದಿಂದ ಇದು ವ್ಯತ್ಯಾಸ. "ಆಯಾತುವರದಾ" ದಲ್ಲಿ ಯದ್ರಾತ್ರ್ಯವನ್ನು ಹೇಳುವುದಿಲ್ಲ. ಉಡುಪಿ ಮಂಗಳೂರು ಘಟ್ಟದ ಕೆಳಗಿನವರು 'ಕೇಶವಾಯ ಸ್ವಾಹಾ' ಎಂಬ ಪುರಾಣಾಚಮನಕ್ಕೆ ಬದಲು 'ಋಗ್ವೇದಾಯ ಸ್ವಾಹಾನಮಃ' ಮುಂತಾಗಿ ಶ್ರೌತಾಚಮನ ಹೇಳುವರು. ಋಗ್ವೇದಿಗಳೂ ಸೂರ್ಯೋಪಸ್ಥಾನಕ್ಕೆ 'ಜಾತವೇದಸೇ' ಹೇಳುವುದಿಲ್ಲ 'ಮಿತ್ರಸ್ಯ, ಇಮಂಮೇ ವರುಣ' ಹೇಳುತ್ತಾರೆ. ಆವಾಹನೆಯಲ್ಲಿ ಆಯಾತು ವರದಾ ಇಲ್ಲ. ಗಾಯತ್ರೀ ವಿಸರ್ಜನವಾದಮೇಲೆ 'ಅಷ್ಟಾಕ್ಷರೀ' 'ಪಂಚಾಕ್ಷರೀ' ಜಪಗಳನ್ನು ಸಾಂಗವಾಗಿ ಮಾಡುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶುಕ್ಲಯಜುರ್ವೇದಿಗಳು ಮೊದಲು 'ಸೂರ್ಯಶ್ಚ' ಹೇಳಿ ಆಮೇಲೆ 'ಆಪ್ರೋಹಿಷ್ಠ' ಹೇಳುವರು. ಕಾಶಿ, ಗೋರಖಪುರದವರೂ ಹೀಗೆಯೇ ಹೇಳುವರು ದ್ವಿತೀಯ ಮಾರ್ಜನೆ ಇಲ್ಲ. ಉಪಸ್ಥಾನವಾದ ಮೇಲೆ ಜಪ. ತ್ರಿಕಾಲದಲ್ಲೂ ಚಿಕ್ಕ ಉದುತ್ಯ. ಮೂವರೂ ಶುಕ್ಲಯಜುರ್ವೇದಿಗಳೆಂದು ಕಾಣುತ್ತಾರೆ. ಗೋರಖಪುರದಲ್ಲಿ 'ವಿಷ್ಣುಸ್ಮರಣೆ' ಆದ ಮೇಲೆ ಪುರಾಣಾಚಮನವಿಲ್ಲ.

ಗುಜರಾತಿನಲ್ಲಿ (ಸೂರತ್) ಯಜುರ್ವೇದಿಗಳೂ 'ಸೂರ್ಯಶ್ಚ' ಆದ ಮೇಲೆ 'ಆಪ್ರೋಹಿಷ್ಮಾ' ಮಂತ್ರಾಚಮನವನ್ನು 'ಅಂಬುಪ್ರಾಶನ' ಎಂದು ಕರೆಯುತ್ತಾರೆ. ದ್ವಿತೀಯ ಮಾರ್ಜನೆ ಇಲ್ಲ. ತ್ರಿಕಾಲಕ್ಕೂ ಚಿಕ್ಕ ಉದಿತ್ಯವೊಂದನ್ನೇ ಹೇಳುವರು. ನಂತರ ಗಾಯತ್ರೀ ಜಪ - ಅಯಾತು ವರದಾ ಇಲ್ಲ.

ಹೀಗೆ ವ್ಯತ್ಯಾಸದ ಅಂಶಗಳು. ಆದರೆ ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಅಭೇದ್ಯವಾದ ವಿಂಧ್ಯಪರ್ವತ, ದುರ್ಗಮವಾದ ಕಾಡುಗಳು ಹಾಗೆಯೇ ದಾಟಲಶಕ್ಯವಾದ ಸಿಂಧೂ ಬ್ರಹ್ಮಪುತ್ರ ಮೊದಲಾದ ಮಹಾನದಿಗಳೆಂಬ ಪ್ರಾಕೃತಿಕ ಅಡೆತಡೆಗಳಿದ್ದರೂ ಎಲ್ಲರೂ ಸಂಧ್ಯಾವಂದನೆಯೆಂದರೆ ಆಚಮನ, ಪ್ರಾಣಾಯಾಮ, ಮಾರ್ಜನೆ, ಅರ್ಘ್ಯಪ್ರದಾನ, ಗಾಯತ್ರಿ ಜಪ ಮತ್ತು ಸೂರ್ಯೋಪಸ್ಥಾನಗಳೆಂಬ ಘಟ್ಟಗಳುಳ್ಳದು ಎಂಬ ಪ್ರಧಾನ ಅಂಶವನ್ನು ಅಂಗೀಕರಿಸಿ ಪಾಲಿಸುತ್ತ ಬಂದಿದ್ದಾರೆ. ಒಂದೊಂದು ಘಟ್ಟಕ್ಕೂ ಅಷ್ಟೇ ಮಂತ್ರವೇ. ಅದೇ ಜಪವೇ ಏಕತೆ ಎಂದರೆ ಇದಕ್ಕಿಂತ ಇನ್ನೇನು ಬೇಕು? ಅಷ್ಟೊಂದು ದೀರ್ಘಕಾಲದಲ್ಲಿಯೂ ಏಕ ರೀತಿಯಾಗಿ ರೂಢಿಯಲ್ಲಿರುವ ಇದನ್ನು ನೋಡಿದರೆ ಈ ಸಂಸ್ಕೃತಿಯ ಮತ್ತು ರಾಷ್ಟ್ರೀಯ ಅಖಂಡ ಓಜಸ್ಸಿನ ಪರಿಚಯವಾದೀತು. ಸಾವಿರ ವರ್ಷ ಪರಾಧೀನತೆ ಇದ್ದರೂ, ಅನೇಕ ವಿಪ್ಲವಗಳನ್ನು ಎದುರಿಸಬೇಕಾಗಿ ಬಂದರೂ, ತನ್ನ ಸಂಸ್ಕೃತಿಯ ಕುರುಹಾದ ಷೋಡಶ ಕರ್ಮಗಳನ್ನು ಈ ರೀತಿ ಉಳಿಸಿಕೊಂಡು ಬಂದಿರುವುದು ಜಗತ್ತಿನಲ್ಲಿ ಹಿಂದೂ ಧರ್ಮವೊಂದೇ ಎಂಬುದನ್ನು ಎಲ್ಲರೂ ಮನಗಾಣಬೇಕಾಗಿದೆ.

ಈಗಲೂ ಸಂಧ್ಯಾವಂದನೆಯಲ್ಲಿ ತ್ರಿಮತಸ್ಥರೂ ಒಂದೇ ವೇದಮಂತ್ರವನ್ನೇ ಬಳಸುತ್ತಿದ್ದೇವೆ. ಆದುದರಿಂದ ಎಲ್ಲರ ಬಳಕೆಗೂ ಬರುವಂತಹ ಏಕಪಾಠವೊಂದನ್ನು ರೂಪಿಸುವುದು ಬಹು ಸುಲಭ. ಆದರೆ ಆ ಕೆಲಸವು ಗುರುಮನೆಗಳಿಂದ ಮಾತ್ರ ಸಾಧ್ಯ. ಅಂತಹ ಪುಣ್ಯವನ್ನು ಈಗಲೇ ನಾವು ಕೇಳಿಕೊಂಡು ಬಂದಿರುವಂತೆ ಕಾಣಿಸುತ್ತಿಲ್ಲ. ಆ ಕಾಲ ಬರಲೆಂದು ಈಶ್ವರನನ್ನು ಪ್ರಾರ್ಥಿಸಬಹುದು ಅಷ್ಟೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಧ್ಯಾ ವಂದನೆ ಎಂದರೇನು ?

ಸಂಧ್ಯಾ ಶಬ್ದಾರ್ಥ : ಸಂಧ್ಯಾ ಶಬ್ದದ ಅರ್ಥವೇನು ? "ಸಂಧ್ಯಾ" ಶಬ್ದದ ಬಗೆಗೆ ಕಾಣಬರುವ ವಿವಿಧವ್ಯುತ್ಪತ್ತಿಗಳನ್ನು ನೋಡಿದರೆ ಇದು ತಿಳಿದೀತು.

ಸಮ್ಯಕ್‌ಧೀಯತ ಇತಿಸನ್ಧ್ಯಃ. ೧. ಜೆನ್ನಾಗಿ ಸೇರಿಸುವಿಕೆ. ೨. 'ಸಾಚಸಾವಿದ್ಯಾ ಚ ಸನ್ಧ್ಯಾವಿದ್ಯಾ ಜ್ಞಾನರೂಪಾ' ೩. 'ಸಂಧಾನಂ ಏಕತ್ವಂ ಇತಿ ಸನ್ಧಿಃ' ಏಕತ್ವವಾಗುವಿಕೆಯೇ ಸಂಧಿ ೪. 'ಸಂಧೀಯತೇ ಸಂಪದಾ ಯಜಮಾನ ಅನಯೇತಿ ಸನ್ಧ್ಯಾ. ಯಾವ ಶಕ್ತಿಯ ಉಪಾಸಕನಿಗೆ ಸಂಪತ್ತನ್ನು (ಮೋಕ್ಷವನ್ನು) ಉಂಟು ಮಾಡುತ್ತಾಳೋ ಆವಳಿಗೆ ಸಂಧ್ಯಾ ಎಂದು ಹೆಸರು. ೫. 'ಸಂಧೌ ಭವಾ ಸಂಧ್ಯಾ' ಸಂಧಿಕಾಲದಲ್ಲಿ ಮಾಡುವ ಕರ್ಮ. ೬. 'ಸಂ — ಧ್ಯೈ' ಸಂ — ಚೆನ್ನಾಗಿ, ಧ್ಯೈ-ಧ್ಯಾನಮಾಡುವುದು ಎಂದು (ಸಮ್ಯಕ್ ಧ್ಯಾನಂ,) ಸಂನ್ಧ್ಯಾ ಸಮಯೇ ಚರಿತಾ ಉಪಾಸನಾಃ. 'ಸನ್ಧ್ಯಾ' ಇವೆಲ್ಲ ಅರ್ಥವನ್ನೂ ಒಳಗೊಂಡಿದೆ. 'ಸನ್ಧ್ಯಾ ಎಂಬುದು, ಪ್ರಾಯಶಃ ನಾಲ್ಕು ಅರ್ಥಸೂಚಕವಾಗಿ ರೂಢಿಯಲ್ಲಿದೆ. ೧. ಕಾಲವಾಚಕ ೨. ಕರ್ಮ ವಾಚಕ ೩. ಉಪಾಸನಾ ವಾಚಕ ಮತ್ತು ೪. ವಸ್ತು (ದೇವತಾ) ವಾಚಕ ಎಂದು.

ಕಾಲವಾಚಕವಾಗಿ ಸನ್ಧ್ಯಾಕಾಲವೆಂದು.

(ಅಹೋರಾತ್ರಸ್ಯಯಃ ಸನ್ಧಿಃ ಸೂರ್ಯ ನಕ್ಷತ್ರ ವರ್ಜಿತಃ । ಸಾತು ಸನ್ಧ್ಯಾ ಸಮಾಖ್ಯಾತಾ ಮುನಿಭಿಸ್ತತ್ತ್ವ ದರ್ಶಿ ಭಿಃ ॥ ದಕ್ಷ ॥) ಸೂರ್ಯ ಮತ್ತು ಚಂದ್ರ ಸಂಧಿಸುವ ಸೂರ್ಯೋದಯ ಮತ್ತು ಸೂರ್ಯಾಸ್ತ ಸಂಧಿಸುವ ಕಾಲಕ್ಕೆ ಸನ್ಧ್ಯಾ ಎಂದು ಹೆಸರು. ೨. ಕರ್ಮವೆಂದು ಇನ್ನೊಂದು ವಿವರಣೆ, ಸನ್ಧ್ಯಾ ಕರ್ಮವೆಂದು ಸಂಧೌ ಸನ್ಧ್ಯಾ ಮುಪಾಸೀತ ನೋದಿತೇ ನಾಸ್ತಿಗೇರವೌ (ವೃದ್ಧ ಬಾಹ್ಮಣ) ಸನ್ಧಿ ಕಾಲದಲ್ಲಿ ಮಾಡುವ ಕರ್ಮವಿದಾದುದರಿಂದ ಇದನ್ನು ಸನ್ಧ್ಯಾ ಎಂದು ಕರೆಯುತ್ತಾರೆ. (ಅಹೋರಾತ್ರಯೋರ್ದ್ವೀಸ್ಸನ್ಧ್ಯಾ ಯಾ ಕ್ರಿಯಾ ವಿಧಿಯತೇ ಸಾ ಸನ್ಧ್ಯಾ, ಉಪಾಸ್ತೇ ಸನ್ಧಿ ವೇಳಾಯಾಂ ನಿಶಾಯಾಂ ದಿವಸ ಸ್ಯಚ ಸಾಮೇವ ಸನ್ಧ್ಯಾ ತ ಸ್ಮಾತ್ತು ಪ್ರವದನ್ತಿ ಮನೀಷಿಣಃ । ತತ್ರ ಸನ್ಧ್ಯಾ ಮುಪಾಸೀತ ಸಾಯಂ ಪ್ರಾತಃ ಸಮಾಹಿತಃ॥ ಈ ವಾಕ್ಯಗಳಿಂದ ಸಂಧಿಸಮಯದಲ್ಲಿ ಮಾಡಲಾಗುವ ಪ್ರಾಣಾಯಾಮಾದಿ ಕರ್ಮಗಳಿಗೆ (ಕರ್ಮಗಳ ಅನುಷ್ಠಾನಕ್ಕೆ) ಸನ್ಧ್ಯಾ ಎಂದು ಹೇಳ ಬಹು

Sri Vidyabharathi Book Centre, Sringeri

CC-O. In Public Domain. Digitized by eGangotri

ದಾಗಿದೆ. ೩. ಧ್ಯಾನರೂಪ ಉಪಾಸನೆಗೆ ಸನ್ಧ್ಯಾ ಎಂದು ಹೆಸರು ಎಂಬುದು ಮೂರನೆಯ ತಾತ್ಪರ್ಯ. ೪. 'ದೇವತೆ' ಎಂದು ಇನ್ನೊಂದು ಅರ್ಥ. [ಯಾಂ ಸದಾ ಸರ್ವ ಭೂತಾನಿ....ರಕ್ಷತು].

ಯಾರ ಉಪಾಸನೆ

ಇದು ಯಾವ ದೇವತೆಯನ್ನು ಕುರಿತು ಉಪಾಸನೆ? ಈ ಕರ್ಮದ ಆರಾಧ್ಯ ದೇವತೆ ಯಾರು? "ಸನ್ಧ್ಯೈ" ಎಂಬ ಹೆಸರಿನ ದೇವತೆಯೇ ನಮ್ಮ ಈ ಅನುಷ್ಠಾನದ ಆರಾಧ್ಯ ದೇವತೆ, ಸಂಧ್ಯೆಯು ರಾತ್ರಿ ಮತ್ತು ಹಗಲು ಸಂಧಿ ಕೂಡುವ ಕಾಲದಲ್ಲಿ ಮಹಾತ್ಮರು ಉಪಾಸಿಸುವ ದೇವತೆ, (ಉಪಾವಾಸ ಸೇತು ಯಾಂ ಸನ್ಧಾ ನಿಶಾಯಾ ದಿವಸಸ್ಯ ಚ। ತಾ ಮೇವ ಸನ್ಧ್ಯಾತಸ್ಮಾತ್ತು ಪ್ರವದನ್ತಿ ಮನೀಷಿಣಃ ॥ ವ್ಯಾಸ ॥ ಆದಕ್ಕಾಗಿಯೇ 'ಸನ್ಧ್ಯಾಯೈ' ನಮಃ ಎಂದು ಪ್ರತ್ಯೇಕ ಶಬ್ದ ಪ್ರಯೋಗವಿದೆ. ಪ್ರಕೃತಿ (nature) ಭಾಗಗಳನ್ನು ವ್ಯಕ್ತಿಯೆಂದೇ ವ್ಯವಹರಿಸುವ ಪರಿಪಾಠವಿದೆ ವೇದ ಸಂಪ್ರದಾಯದಲ್ಲಿ. ಉದಾಹರಣೆಗೆ ಉಷಸ್ಸಿನ ಸ್ತೋತ್ರ ನೋಡಬಹುದು. 'ದೇವೀಂ ಉಷಸಂ ಸ್ವರಾವ ಹನ್ತಿ. ಋ ೫. ೧೦. ೧ ಎಂದು ಛಂದಸ್ಸುಗಳನ್ನು ಋಗ್ವೇದದಲ್ಲಿ ಹಾಗೆಯೇ ಸಂಬೋಧಿಸಿದೆ. ಸನ್ಧ್ಯಾವಂದನೆಯಲ್ಲಿ ಪ್ರಧಾನವಾದ ಅರ್ಘ್ಯ ಜಪ ಮತ್ತು ಉಪಸ್ಥಾನಗಳಲ್ಲಿ ಮಾಡುವ ಸ್ತೋತ್ರವು "ಸವಿತೃ" ಎಂಬ ದೇವತೆಯನ್ನು ಕುರಿತದ್ದಾಗಿದೆ. ಸವಿತೃವೆಂದರೆ ಸೂರ್ಯನೆಂಬ ಅರ್ಥದಿಂದ ಸನ್ಧ್ಯಾವಂದನೆಯ ಆರಾಧ್ಯ ದೇವತೆಯು ಸೂರ್ಯರೂಪೀ ಸನ್ಧ್ಯಾದೇವತೆಯೆಂದು ಹೇಳಬಹುದಾಗಿದೆ.

ನಾಲ್ಕೇ ಅಲ್ಲದೆ ಇನ್ನೆರಡು ವಿವರಣೆಯನ್ನು ನೋಡಬಹುದಾಗಿದೆ.

೫. 'ಪರಬ್ರಹ್ಮನ ಉಪಾಸನೆ ಇದು' ಎನ್ನುವ ಅಭಿಪ್ರಾಯವೂ ಉಂಟು. 'ಸಂಧ್ಯೇತಿ ಸೂರ್ಯಗಂಬ್ರಹ್ಮ'. 'ಆಸಾವಾದಿತ್ಯೋ ಬ್ರಹ್ಮ' ಎಂದು ಆದಿತ್ಯ ಮಂಡಲಗತ ಬ್ರಹ್ಮನೇ ಸನ್ಧ್ಯಾ ಶಬ್ದದಿಂದ ಹೇಳಲ್ಪಡುವವನು, ಅವನ ಉಪಾಸನೆಯೇ ಸಂಧ್ಯೋಪಾಸನೆ ಎಂದು ಅಭಿಪ್ರಾಯ.

೬. ಗಾಯತ್ರ್ಯೋಪಾಸನೆಯೇ ಸಂಧ್ಯೋಪಾಸನೆ ಎಂಬುದು ಇನ್ನೂ ಒಂದು ಮತ. 'ಯಾ ಸನ್ಧ್ಯಾಸೈವ ಗಾಯತ್ರೀ ದ್ವಿದಾಭೂತಾ ವ್ಯವಸ್ಥಿತಾ। ಸನ್ಧ್ಯಾ ಉಪಾಸಿತಾಯೇ ವಿಷ್ಣುಸ್ತೇನ ಉಪಾಸಿತಃ ॥ [ಯಜ್ಞವಲ್ಕ್ಯ] ಯಾವುದು ಸನ್ಧ್ಯೋ

Sri Vidyabharathi Book Centre, Sringeri

CC-O. In Public Domain. Digitized by eGangotri

ಅದೇ ಗಾಯತ್ರಿದೇವಿ. ಯಾರಿಂದ ಸಂಧ್ಯೆಯು ಉಪಾಸನೆ ಮಾಡಲ್ಪಡುವುದೋ ಅವನೇ ವಿಷ್ಣುವನ್ನು ಉಪಾಸನೆ ಮಾಡಿದವನೂ ಆಗುತ್ತಾನೆ ಎಂದು.

ಸಂಧಿಕಾಲದಲ್ಲಿ ಉತ್ಪನ್ನವಾಗುವ ಪರಮೇಶ್ವರೀ ಶಕ್ತಿಗೆ ನಾವು ನಮ್ಮ ಕೃತಜ್ಞತೆಯನ್ನು ಸೂಚಿಸುವಂತೆ ನಮಸ್ಕಾರ ಮಾಡುವುದಕ್ಕೆ ಸಂಧ್ಯಾವಂದನೆ ಎಂದೂ, ಆ ಶಕ್ತಿಯ ಸ್ವರೂಪವೇ ಆದ ಭಗವಂತನನ್ನು ಚಿಂತಿಸುವುದಕ್ಕೆ ಸಂಧ್ಯಾ ಉಪಾಸನೆಯೆಂದೂ ಹೇಳಬಹುದಾಗಿದೆ. ಉಪಾಸನೆ ಎಂಬ ಶಬ್ದಕ್ಕೆ ಕುರ್ವೀತ "ಮಾಡು ಎಂಬ" ಕರ್ಮಾರ್ಥವಾದ ಅರ್ಥ ಎಂಬ ಪ್ರಾಜ್ಞರ ಮತವೂ ಉಂಟು ಉಪಾಸನಾ ಎಂದರೆ ಉಪ–ಸಮೀಪದಲ್ಲಿ (ಕೆಳಗೆ) ಆಸನ–ಕುಳಿತುಕೊಳ್ಳುವುದು ಎಂದು.

ಈ ಅನುಷ್ಠಾನದ ವಿಷಯಕ್ಕೆ ಉಪಾಸನ, ವಂದನ ಎಂಬ ಎರಡು ಶಬ್ದ ಪ್ರಯೋಗವೂ ರೂಢಿಯಲ್ಲಿದೆಯಷ್ಟೆ. ವೇದದಲ್ಲಿ ಉಪಾಸನೆ ಎಂಬ ಪದವೇ ಮುಖ್ಯವಾಗಿರುತ್ತೆ. ಸ್ಮೃತಿಗಳಲ್ಲಿ ಉಪಾಸನಾ ಎಂದೂ ಅಲ್ಲಲ್ಲಿ ವಂದನ ಎಂದೂ ಹೇಳಿರುತ್ತದೆ.

ಸಂಧ್ಯಾವಂದನೆಯನ್ನು ಎರಡು ದೃಷ್ಟಿಯಿಂದ ಮಾಡಬಹುದು. ೧. ಕರ್ಮವೆಂದು ೨. ಉಪಾಸನೆ ಎಂದು. ೧. ಶರೀರದಿಂದ ಮಾಡುವುದು ಕರ್ಮ. ಕರ್ಮವೆಂದು ಮಾಡುವವರು ಅರ್ಥ ಧ್ಯಾನಗಳ ಕಡೆಗಿಂತಲೂ ಅನುಕ್ರಮ ಮತ್ತು ಕಾಲವನ್ನು ಮುಖ್ಯವಾಗಿ ಅನುಸರಿಸುವರು. ಉಪಾಸನೆಯು ಅರಿವಿಲ್ಲದವರಿಗೆ ಕರ್ಮದಲ್ಲಿ ಅಧಿಕಾರವಿಲ್ಲ ಎನ್ನಲಾಗದು. ಏಕೆಂದರೆ ಔಷಸ್ತ್ಯಕಾಂಡದಲ್ಲಿ ಅಜ್ಞರೂ ಋತ್ವಿಜರಾಗಿದ್ದುದು ಕಂಡು ಬರುತ್ತಿದೆ ಎಂದು ಶ್ರೀ ಶಂಕರ ಭಗವತ್ಪಾದರು ತಿಳಿಸಿದ್ದಾರೆ. ೨. ಇನ್ನೊಂದು ಉಪಾಸನಾ ದೃಷ್ಟಿ ಮನಸಿನಿಂದ ಮಾಡುವುದು ಉಪಾಸನಾ, ಆಧ್ಯಾತ್ಮದೃಷ್ಟಿ. ಮಂತ್ರಗಳ ಅರ್ಥವನ್ನು ಅನುಸಂಧಾನ ಮಾಡುತ್ತಾ, ಧ್ಯಾನ ಯೋಗದ ಪ್ರಾಣಾಯಾಮಾದಿಗಳನ್ನು ಪೂರ್ಣವಾಗಿ ಅನುಸರಿಸಿ 'ಗಾಯತ್ರಿಯನ್ನೇ ಬ್ರಹ್ಮಜ್ಞಾನಕ್ಕೆ ದ್ವಾರವೆಂದು ತಿಳಿದುಕೊಂಡು. ಗಾಯತ್ರಿಯೆಂಬ ಕಾರ್ಯದ್ವಾರದಿಂದ ತದನುಗತವಾಗಿ ಬ್ರಹ್ಮನನ್ನು ಉಪಾಸನೆ ಮಾಡುವುದು. ಇಲ್ಲಿ ಬ್ರಹ್ಮಚಿಂತನಕ್ಕೆ ಆದ್ಯತೆ, ಉಪಾಸನೆ ಸಹಿತವಾದ ನಿತ್ಯಕರ್ಮ.

ಈಗ ಜನ ಸಾಮಾನ್ಯವಾಗಿ ಅನುಸರಿಸುತ್ತಿರುವುದು 'ಕರ್ಮ' ವೆಂಬ ದೃಷ್ಟಿಯಿಂದ ಪ್ರತ್ಯವಾಯ ಪ್ರಾಪ್ತವಾಗದಿರಲೆಂಬ ಆಶಯದಿಂದ — ಎಂದು ಹೇಳಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

'ವೇದವು ಪ್ರಭುವಿನಂತೆ ಒಂದು ಆಜ್ಞಪ್ತಿ ಮಾಡುವುದು. (ಆಹರಹಸ್ಸಂಧ್ಯಾಮುಪಾಸೀತ) ಎಂದು. ನಂತರ ಅದನ್ನು ಅನುಸರಿಸಿ ಸ್ಮೃತಿಕಾರರು ವಿವರಣಾತ್ಮಕವಾಗಿ ಎಲ್ಲೆ ಕಟ್ಟುಗಳನ್ನು ನಿರ್ಣಯಿಸುವುದು, ಉಡಿಗೆ ತೊಡಿಗೆ ತೊಡಿಸಿ ರೂಪುಗೊಳಿಸುವುದು ಇದು ನಮ್ಮಲ್ಲಿ ನಡೆದು ಬಂದಿರುವ ರೀತಿ. ನಾವು ಈಗ ವೇದವನ್ನು ಅನುಸರಿಸಿರುವ ವೈದಿಕರೂ ಹೌದು, ಹಾಗೆಯೇ ಸ್ಮೃತಿಯನ್ನು ಪಾಲಿಸುವ ಸ್ಮಾರ್ತರೂ ಹೌದು. ಶಾಸನ ಸಭೆಗಳಲ್ಲಿ ಕಾನೂನು (Act) ಮಾಡುತ್ತಾರೆ. ನಂತರ ಅದನ್ನು ಆಚರಣೆಗೆ ತರುವಂತೆ ನಿಯಮಾವಳಿಗಳನ್ನು (Rules) ರಚಿಸುತ್ತಿಲ್ಲವೇ, ಹಾಗೆ. ವಿಜ್ಞಾನ ಕ್ಷೇತ್ರದಲ್ಲಿ ನೂತನ ಸಂಶೋಧನೆಗಳೆಂದು ಅವಕ್ಕೆ ಮಾನ್ಯತೆ ಇಲ್ಲವೇ ?

ಎಷ್ಟೋ ಸಹಸ್ರವರ್ಷಗಳಿಂದಲೂ ಆಚರಣೆಯಲ್ಲಿರುವ ಸಂಧ್ಯಾವಂದನ ವಿಧಿಯನ್ನು ಋಷಿ ಜನರು ಅನೇಕ ಬಾರಿ ನಿರ್ಣಯಿಸಿ, ಆ ಎಲ್ಲ ವಿಷಯಗಳನ್ನು ಒಳಗೊಂಡಂತೆ ಒಂದು ಚೌಕಟ್ಟನ್ನು ರಚಿಸಿ ರೂಢಿಗೆ ತಂದಿದ್ದಾರೆ. ಆಚಮನದಿಂದ ಸೂರ್ಯೋಪಸ್ಥಾನದ ಪೂರ್ತ ಎಲ್ಲ ಕರ್ಮವೂ ಸಂಧ್ಯೋಪಾಸನೆಯೇ. ಈ ಸಂಧ್ಯೆಯ ಋಗ್ಯಜುಸ್ಸಾಮಗಳ ರೂಪಾಂತರ (ಋಗ್ಯಜುಸ್ಸಾಮವೇದಾನಾಂ ರೂಪತ್ರಯ ಮಿದಂ ಪರಂ। ತಸ್ಮಾದ್ದ್ವಿಜಸ್ಸದಾ ಸಂಧ್ಯಾಂತ್ರಿತಯೋಪಾಸ್ತಿ ಮಾಚರೇತ್ ॥ ಭಾರದ್ವಾಜ)

ಸಾರಾಂಶತಃ ಹೀಗೆ ಹೇಳಬಹುದು. ಸಂಧ್ಯಾವಂದನೆಯು ಒಂದು ನಿಷ್ಕಾಮ್ಯ ಕರ್ಮ. 'ಸಂಧ್ಯಾ' ಎಂಬ ದೇವತೆಯನ್ನು ಕುರಿತದ್ದು. ನಾವು ಪ್ರತಿಯೊಂದು ಕರ್ಮಮಾಡುವಾಗಲೂ ಆ ಕರ್ಮವು ಪ್ರಧಾನವಾಗಿ ಒಂದು ದೇವತೆಯನ್ನು ಕುರಿತದ್ದಾದರೂ, ಕರ್ಮಾಂಗವಾಗಿ ಇತರ ಅನೇಕ ದೇವತೆಗಳ ಪೂಜೆ, ಸ್ತೋತ್ರವನ್ನು ಮಾಡುತ್ತೇವೆ. ಹಾಗೆಯೇ ಸಂಧ್ಯಾವಂದನೆಯಲ್ಲಿಯೂ ಸೂರ್ಯ, ಅಗ್ನಿ, ವರುಣ, ಆಪಃ, ಸವಿತೃ ಮೊದಲಾದ ಅನೇಕ ದೇವತೆಗಳನ್ನು ಈಗ ಆರಾಧಿಸುತ್ತಿದ್ದೇವೆ.

ಮುಖ್ಯವಾಗಿ ಕಾಲನಿಯಮದ ಅನುಸರಣೆ. ಅರ್ಘ್ಯ, ಗಾಯತ್ರೀ ಜಪ— ಇವುಗಳನ್ನು ವಿನೀತಭಾವದಿಂದ ಮಾಡಿ ಕೃತಾರ್ಥರಾಗಲೆಂಬುದೇ ಪೂಜ್ಯ ಋಷಿ ಜನರ ಅಭಿಮತವೆಂದು ಹೇಳಬಹುದಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಧ್ಯಾವಂದನೆಯ ವಿವರಣೆ

ಪೂರ್ವಸಿದ್ಧತೆ

ಸ್ಮೃತಿಗಳ ಅನೇಕ ವಚನಗಳನ್ನು ಸಮನ್ವಯ ಮಾಡಿದರೆ ಗೊತ್ತಾಗುವುದೇನೆಂದರೆ ತ್ರಿಕಾಲದಲ್ಲಿಯೂ ಸಂಧ್ಯೋಪಾಸನೆಯನ್ನು ಸೂರ್ಯಾಭಿಮುಖವಾಗಿ ಮಾಡಬೇಕು.(ಷ್ರಾಙಮುಖಃಸತತಂ ವಿಪ್ರಃ ಸಂಧ್ಯೋಪಾಸನ ಮಾಚರೇತ್ (ಕೂರ್ಮ ಪುರಾಣ) ಈಶಾನಕೋಣ ಅಥವಾ ಪೂರ್ವ ದಿಕ್ಕಿಗೆ ಮುಖಮಾಡಿಕೊಂಡು ತ್ರಿಕಾಲ ಸಂಧ್ಯಾ ಮಾಡಬಹುದು. (ಆಚಾರದರ್ಶ) ಆದಾಗ್ಯೂ ಅರ್ಘ್ಯ, ಉಪಸ್ಥಾನ ಮತ್ತು ಜಪವನ್ನು ಸೂರ್ಯಾಭಿಮುಖವಾಗಿಯೇ ಮಾಡಬೇಕು ಆಚಮನವನ್ನು ಮಾತ್ರ ಪಶ್ಚಿಮ ಮತ್ತು ದಕ್ಷಿಣ ಮುಖಮಾಡಿಕೊಂಡು ಮಾಡಲೇ ಕೂಡದು.

ಋಷಿ, ದೇವತೆ, ಛಂದಸ್ಸು — ಪ್ರತಿಯೊಂದು ಮಂತ್ರಕ್ಕೂ ಆ ಮಂತ್ರ ದ್ರಷ್ಟಾರನಾದ ಋಷಿ, ದೇವತೆ ಛಂದಸ್ಸುಗಳು ಮತ್ತು ಅದನ್ನು ಉಪಯೋಗಿಸ ಬೇಕಾದ ಸಂದರ್ಭ – ಇವುಗಳನ್ನು ಕೂಡಿಸಿಯೇ ಹೇಳುವಂತೆ ಕ್ರಮವನ್ನು ಏರ್ಪಡಿಸಿದೆ. ಋಷಿ, ದೇವತಾ ಛಂದಸ್ಸುಗಳೆಂದರೇನು ಎಂಬುದನ್ನೂ ಸಾಯಣರು ಸ್ಪಷ್ಟಪಡಿಸಿದಾರೆ ಯಸ್ಯ ವಾಕ್ಯಂ ಸ ಋಷಿಃ (ಯಾವ ಮಂತ್ರವನ್ನು ತಪಃ ಪ್ರಭಾವದಿಂದ ನೋಡಿ ಪ್ರವಚನಕ್ಕೆ ತಂದನೋ ಅವನೇ ಆ ಮಂತ್ರಕ್ಕೆ ಋಷಿ) ಯೋಽರ್ಥ ಉಚ್ಯತೇ ಸಾದೇವತಾ, (ಮಂತ್ರ ಪ್ರತಿಪಾದ್ಯಾರ್ಥವೇ ದೇವತೆಯು) ಯದಕ್ಷರಪರಿಮಾಣಂ ತಚ್ಛಂದಃ ಛಂಛೋಭಿರೇವಾತ್ಮಾನಂ ಛಾದಯಿತ್ವೋಪಾಯೂಂಚ್ಛಂದಸಾಂ ಛಂದತ್ವಂ (ಶ್ರುತಿ) ಮಂತ್ರಗಳು ಯಾವುದರಿಂದ ಆಚ್ಛಾದನೆ ಮಾಡಿಕೊಳ್ಳುವುವೋ ಅವುಗಳೇ ಛಂದಸ್ಸುಗಳು. ವೈದಿಕ ಸಂಹಿತೆಗಳನ್ನು 'ಛಂದೋ ಮಯೀವಾಕ್' ಎನ್ನುತ್ತಾರೆ. ಛಂದಸ್ಸೆಂದರೆ 'ಛಂದಃ ಪಾದೌತು ವೇದಸ್ಯ' (ಪಾ) ಎಂದಿದೆ. ವ್ಯಕ್ತಿಗಳು ನಿಲ್ಲುವುದಕ್ಕೂ ನಡೆಯುವುದಕ್ಕೂ ಹೇಗೆ ಪಾದಗಳು ಪ್ರಧಾನ ಸಾಧನಗಳೋ ಹಾಗೆಯೇ ವೇದಮಂತ್ರಗಳು ನಿಲ್ಲುವುದಕ್ಕೆ ಅಗತ್ಯವಾದ ಪಾದಗಳಿಗೆ "ಛಂದಸ್ಸು" ಎಂಬ ಹೆಸರು.

ಮಂತ್ರಗಳನ್ನು ಋಷಿ, ದೇವತಾ ಛಂದಸ್ಸುಗಳ ಸಹಿತವಾಗಿಯೇ ಉಚ್ಚರಿಸಬೇಕೆಂಬ ಸಂಪ್ರದಾಯವನ್ನು ರೂಢಿಗೆ ತಂದ ಮಹರ್ಷಿಗಳ ಜಾಣ್ಮೆ ಮತ್ತು ದೂರದೃಷ್ಟಿಯ ಪರಿಚಯವು ನಮಗಾಗಬೇಕಾದರೆ ಆಗ ನಾವು ನೆರೆ ಹೊರೆಯ ರಾಷ್ಟ್ರಗಳ ಇತಿಹಾಸದ ಕಡೆಗೆ, ಸೂಕ್ಷ್ಮವಾಗಿ ಗಮನಿಸಿ ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕಾದುದು ಅವಶ್ಯಕ.

CC-O. Vidyabharathi Book Centre, Sringeri.

CC-O. In Public Domain. Digitized by eGangotri

ಹಿಂದೆ ಅರಬರ ಶಕ್ತಿ ದೊಡ್ಡ ದೊಡ್ಡ ಸಾಮ್ರಾಜ್ಯಗಳಾಗಿದ್ದ ಪರ್ಶಿಯಾ, ಟರ್ಕಿ, ಈಜಿಪ್ಟ್, ಆಫ್ಘಾನಿಸ್ತಾನ ಮತ್ತು ಯೂರೋಪಿನ ಕೆಲಭಾಗಗಳು—ಇವು ಗಳಲ್ಲೆಲ್ಲಾ ಒಬ್ಬನನ್ನು ಬಿಡದೆ ಮತಾಂತರಗೊಳಿಸಿತು. ಅಲ್ಲಿನ ಪ್ರಾಚೀನ ಸಂಸ್ಕೃತಿ ಗುಡಿಸಿ ಹೋಯಿತು!

ಕ್ರೈಸ್ತಧರ್ಮವೂ ಅಷ್ಟೇ! ಕ್ರಿಸ್ತನ ಉದಯವಾದ ಸ್ವಲ್ಪಕಾಲದಲ್ಲಿಯೇ ಯೂರೋಪಿನಲ್ಲಿ ಮೊದಲಿದ್ದ ಮತಗಳು ಕಣ್ಮರೆಯಾದವು ಓಡಿನ್, ಫ್ರೂಯಿಡ್‌ರ ಮತ ಹಾಗೆಯೇ ಗ್ರೀಕ್, ರೋಮನ್ ಆಡಂಬರಗಳು ಸಂಪೂರ್ಣವಾಗಿ ಮಾಯವಾದವು. ಮಧ್ಯ ಅಮೆರಿಕ, ದಕ್ಷಿಣ ಅಮೆರಿಕದಲ್ಲಿ ಸ್ಪೇನರು ಮತ್ತು ಪೋರ್ಚುಗೀಸರು ತಮ್ಮ ಮತವನ್ನು ಕೆಂಪು ಇಂಡಿಯನ್ನರ ಮೇಲೆ ಹೇರಿದರು. ಸಮಗ್ರ ಫಿಲಿಪ್ಪೈನ್ ಆ ಹಾಡಾಗಿ ಹೋಯಿತು! (A. C. Bose)

ಆದರೆ ಭಾರತದಲ್ಲಿ ಹಾಗಾಗಲಿಲ್ಲ. ೧೦೦೦ ವರ್ಷಗಳ ಕಾಲ ಪರಾಧೀನತೆಯಲ್ಲಿ ಸಿಲುಕಿದರೂ ಹಿಂದೂ ಧರ್ಮವನ್ನು ಹಾಗಾಗದಂತೆ ರಕ್ಷಿಸಿದುದು ಒಂದೇ ಒಂದು — ಅದು ವೇದ ಸಂಪ್ರದಾಯ.

ಮಂತ್ರಗಳು ಕಂಠಸ್ಥವಾಗಿರುವುದೇ ಶ್ರೇಷ್ಠ, ಗ್ರಂಥಸ್ಥಕ್ಕಿಂತ ಎಂಬುದು ಮೊದಲ ಸಂಪ್ರದಾಯ. ಆದರಿಂದ ಆಕ್ರಮಣಕಾರರು ಇಲ್ಲಿನ ಗ್ರಂಥ ಭಂಡಾರಗಳನ್ನು ಸರ್ವನಾಶ ಮಾಡಿದರೂ, ದೇವಸ್ಥಾನಗಳನ್ನು ನೆಲಸಮ ಮಾಡಿದರೂ ನೂರಾರು ವೈದಿಕ ಬ್ರಾಹ್ಮಣರನ್ನು ಕೊಲೆ ಮಾಡಿದರೂ [ಅಲೆಗ್ಜಾಂಡರನು ಒಂದು ಜಾಗದಲ್ಲಿಯೇ ೨೦೦ ಜನ ಬ್ರಾಹ್ಮಣರನ್ನು ಕೊಂದನು] ವೇದವು ಕಂಠಸ್ಥವಾಗಿದ್ದುದರಿಂದ ಅದು ಬೇರೆ ಕಡೆ – ಅಂತೂ ಉಳಿದುಕೊಂಡಿತು. ಆದರೆ ಆ ಮಂತ್ರಗಳು ಕಾಲಕ್ರಮದಲ್ಲಿ ಬದಲಾವಣೆಗೆ ಒಳಗಾಗಿ ಕೆಟ್ಟು ಹೋಗಬಹುದಷ್ಟೆ! ಹಾಗಾಗದಂತೆಯೂ ಕಾಪಾಡಲು ಜಾಣತನದ ಸಂಪ್ರದಾಯವೊಂದನ್ನು ರೂಢಿಗೆ ತಂದರು. ಮಂತ್ರಗಳ ಜೊತೆಯಲ್ಲಿಯೇ ಋಷಿ, ದೇವತಾ, ಛಂದಸ್ಸುಗಳನ್ನು ಹೇಳಬೇಕೆಂಬುದೆ ಆ ಎರಡನೆಯ ಜಾಣತನ. ಮಂತ್ರಗಳ ಸ್ವರೋಚ್ಚಾರಣೆಗೆ ಪದ, ಘನ, ಜಟೆ ಎಂಬ ಕ್ರಮವನ್ನು ಋಷಿ ಮೊದಲಾದುವನ್ನು ಹೇಳಿದುದರಿಂದ ಅಲ್ಲಲ್ಲಿಯೇ ಹೋಲಿಸಿ ನೋಡಿಕೊಂಡು ಪರಿ ಶುದ್ಧತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಯಿತು. ಒಂದೊಂದು ಮಂತ್ರಕ್ಕೂ ಇಂತಿಂತಹ ಋಷಿ, ದೇವತಾ, ಛಂದಸ್ಸೇ ಎಂಬುದನ್ನೂ ನಿರ್ದಿಷ್ಟವಾಗಿ ಗೊತ್ತುಮಾಡಿ "ಸರ್ವಾನುಕ್ರಮಸೂತ್ರ" ವೆಂಬ ಗ್ರಂಥವನ್ನು ರಚಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಷ್ಟೆಲ್ಲ ದೂರದೃಷ್ಟಿಯ ಮುಂಜಾಗರೂಕತಾ ಕ್ರಮದಿಂದ ಇಂದಿಗೂ ನಮ್ಮ ಪಾಲಿಗೆ ವೇದವು ಅಳಿಯದೆ ಉಳಿದುಕೊಂಡಿದೆ.

ಋಷಿ ಎಂದರೆ 'ಜ್ಞಾನಸ್ಯ ಪಾರಗಮಾತ್ ಋಷಿಃ' ಜ್ಞಾನದ ದಡವನ್ನು ಮುಟ್ಟಿದವನು ಎಂದು. ಋಷಿ, ಋಷೀಕ, ಋಷಿಪುತ್ರ, ಶ್ರುತಶ್ರೀ ಎಂಬ ಭೇದಗಳಿವೆ.

ವಿಭೂತಿ, ಊರ್ಧ್ವಪುಂಡ್ರ: ಸ್ನಾನವಾದ ಕೂಡಲೇ ಸಂಧ್ಯಾವಂದನೆಗೆ ಮುನ್ನ ವಿಭೂತಿ – ಊರ್ಧ್ವ ಪುಂಡ್ರಗಳನ್ನು ಧರಿಸಬೇಕು. ಆದಿಲ್ಲದವನ ಮುಖ ಸ್ಮಶಾನಕ್ಕೆ ಸಮವೆಂದು ವರ್ಣಿಸಿದ್ದಾರೆ.

ಅಧಿಕಾರಿಯ ವಿಷಯ : ಸಂಧ್ಯಾವಂದನೆಯನ್ನು ಯಾರು ಮಾಡಬೇಕು ? "ಇದನ್ನು ಎಲ್ಲರೂ ಆಚರಿಸಬೇಕು. ಆದರಲ್ಲಿಯೂ ವಿಶೇಷವಾಗಿ ಬಾಹ್ಮಣರು ಆಚರಿಸಬೇಕು" ಎಂದು 'ಸಂಧ್ಯಾವಂದನ' ಕ್ರಮದಲ್ಲಿ ತಿಳಿಸಿರುತ್ತಾರೆ, ಆಸ್ಥಾನ ವಿದ್ವಾನ್ ಶ್ರೀ ಚಂದ್ರಶೇಖರಶಾಸ್ತ್ರಿಗಳು. ೪ ವರ್ಣದವರೂ ಮಾಡಬಹುದೆಂದು ಪೂಜ್ಯ ದಯಾನಂದ ಸರಸ್ವತಿಗಳ ಮತ. ಸ್ತ್ರೀಯರಿಗೂ ಅಧಿಕಾರವುಂಟು ಎಂಬುದು ಅವರ ಮತ. ಪ್ರಾವೃತ್ತಾಂಯಜ್ಞೋಪವೀತಿನೀಮಭ್ಯುದಾನಯನ್ ಜಪೇತ್, (ಗೊ ಗೃಹ್ಯಸೂ) ಯಾವ ಕನ್ಯೆಯು ಉತ್ತಮ ವಸ್ತ್ರದಿಂದ ಆಚ್ಛಾದಿತಳಾಗಿದ್ದಾಳೋ ಮತ್ತು ಯಜ್ಞೋಪವೀತವನ್ನು ಧಾರಣೆ ಮಾಡಿದ್ದಾಳೋ. ಅಂತಹ ಕನ್ಯೆಯನ್ನು ವಿವಾಹ ಮಂಟಪಕ್ಕೆ ಕರೆತರಬೇಕು. "ಸ್ತ್ರೀಹಿ ಬ್ರಹ್ಮಾಬಭೂವಿಥ (ಋ.ಆ.೩೩.೧೯) ಸ್ತ್ರೀಯೂ ವೇದಗಳ ಜ್ಞಾತ್ರಿಯಾಗಬಲ್ಲಳು. ಘೋಷಾ, ಗೋಧಾ, ವಿಶ್ವವಾರಾ, ಅಪಾಲ, ಉಪನಿಷತ್, ನಿಷತ್‌ಜುಹೂ, ಅದಿತಿ ಮೊದಲಾದವರು ವೇದಮಂತ್ರ ದರ್ಶನ ಮಾಡಿದರು. ಮೈತ್ರೇಯಿ, ಗಾರ್ಗ್ಯ – ರ ಹೆಸರನ್ನು ಯಾರು ಕೇಳಿಲ್ಲ ?

ಪುರಾ ಕಲ್ಪೇಷು ನಾರೀಣಾಂ ಮೌಂಜೀ ಬಂಧನ ಮಿಷ್ಯತೇ ।
ಅಧ್ಯಾಪನಂ ಚ ವೇದಾನಾಂ ಸಾವಿತ್ರೀ ವಚನಂ ತಥಾ ॥ ಮನು ॥

(ಹಿಂದಿನ ದಿನಗಳಲ್ಲಿ ಸ್ತ್ರೀಯರಿಗೆ ಉಪನಯನವಾಗುತ್ತಿತ್ತು. ಅವರು ವೇದಗಳನ್ನು ಅಧ್ಯಯನ ಮಾಡಿ ಇತರರಿಗೂ ಅಧ್ಯಾಪನ ಮಾಡಿಸುತ್ತಿದ್ದರು. ಗಾಯಿತ್ರೀ ಮಂತ್ರವನ್ನು ಪಠಿಸುತ್ತಿದ್ದರು.) ಶೂದ್ರರಿಗೂ ಅಧಿಕಾರವುಂಟು ಎಂಬಪಕ್ಷ 'ಯಥೇಮಾಂ ವಾಚಂ ಕಲ್ಯಾಣೀ ಮಾವದಾನಿ ಜನೇಭ್ಯಃ, ಬ್ರಹ್ಮರಾಜನ್ಯಾಭ್ಯಾಂ ಶೂದ್ರಾಯ ಚಾರ್ಯಾಯ ಚ ಸ್ವಾಯ ಚಾರಣಾಯ: ಎಂಬ ಯಜುರ್ವೇದದ (ಅ ೨೬ ಮಂ. ೨) ಮಂತ್ರವನ್ನು ಉದ್ಧರಿಸುತ್ತಾರೆ. (ಶೂದ್ರ) ವರ್ಣದವರಿಗೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹ ಹೇಗೆ ವೇದವನ್ನು ಪ್ರಕಾಶ ಪಡಿಸಿದ್ರಿನೋ, ಹಾಗೆಯೇ ನೀವೂ ಸಹ ಪ್ರಚಾರ ಪಡಿಸಿರಿ ಎಂದು ಅದರ ಅರ್ಥ (ಯ. ಸಂ.) ಆದರೆ ಈ ಅಭಿಪ್ರಾಯಗಳಿಗೆ ಈಗಿನ ಸಮಾಜ ಸಾಮಾನ್ಯದ ಅಂಗೀಕಾರವಿಲ್ಲ. ದ್ವಿಜರಿಗೆ ಅಧಿಕಾರವುಂಟು ಎನ್ನುವಷ್ಟಕ್ಕೆ ಸಾಮಾನ್ಯ ಒಪ್ಪಿಗೆ ಇರುವಂತಿದೆ. ಈಗಿನ ಪರಿಸ್ಥಿತಿಯಲ್ಲಿ ಇದೆಲ್ಲವೂ ಕೇವಲ 'ವಿದುಷಾಂವೈದುಷ್ಯ' ವೆನಬಹುದಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆನ್ನುವ ದ್ವಿಜರಂತೂ ವೇದೋದಿತ ಕರ್ಮ ಮಾಡಲು ಯಾವ ಅಡ್ಡಿಯೂ ಇಲ್ಲ. ಈ ವಿಷಯದಲ್ಲಿಯೂ ಈಗ ಕಾಣಬರುತ್ತಿರುವ ಆಚರಣೆಯ ವಿಷಯದಲ್ಲಿ. ಗೀತಾ ಪ್ರೆಸ್ಸಿನ 'ನಿತ್ಯ ಕರ್ಮಪ್ರಯೋಗ' ದಲ್ಲಿ ಹೀಗೆ ಹೇಳಿದೆ. 'ಇಂದಿನ ಪೇಟೆಗಳಲ್ಲಿ ಕ್ಷತ್ರಿಯ-ಸಂಧ್ಯಾ' ಮತ್ತು "ವೈಶ್ಯ ಸಂಧ್ಯಾ" ಎಂಬ ಹೆಸರಿನಿಂದ ಪುಸ್ತಕಗಳು ಮಾರಾಟವಾಗಲು ಹೊರಟಿವೆ. ಇದರಿಂದ ಜನಗಳಲ್ಲಿ ಬಹಳ ಭ್ರಮೆ ಹರಡಿದೆ ವೈಶ್ಯ ಮತ್ತು ಕ್ಷತ್ರಿಯರಿಗೇ ಬೇರೆ ಸಂಧ್ಯಾ ಏನೂ ಇಲ್ಲ. ಒಂದೇ ಪ್ರಕಾರದ ಸಂಧ್ಯಾ ದ್ವಿಜ ಮಾತ್ರರಿಲ್ಲರ ಉಪಯೋಗಕ್ಕೂ ಆಗುವುದು. ಸಂಕಲ್ಪ ಮತ್ತು ಅಭಿವಾದನ ಹೇಗೆ? ವಾಗ ಬ್ರಾಹ್ಮಣರು 'ಶರ್ಮಾಹಂಭೋ' ಎಂದೂ, ಕ್ಷತ್ರಿಯರು 'ವರ್ಮಾsಹಂಭೋ' ಎಂದೂ ವೈಶ್ಯರು 'ಗುಪ್ತಾsಹಂಭೋ' ಎಂದೂ, ಹೇಳಬೇಕು?

ಬ್ರಾಹ್ಮಣರು ಕರ್ಮಾನುಷ್ಠಾನದಲ್ಲಿ ಹಿಂಜರಿದಿರುವುದೇ ಈ ಗೊಂದಲಕ್ಕೆಲ್ಲ ಮುಖ್ಯ ಕಾರಣ.

ಕುಶಪವಿತ್ರ: ಸ್ನಾನ, ದಾನ, ಜಪ, ಹೋಮ. ಸ್ವಾಧ್ಯಾಯ, ಸಂಧ್ಯೋಪಾಸನ, ಪಿತೃಕಾರ್ಯ ಮತ್ತು ಅಭಿವಾದನೆಗಳಲ್ಲಿ ಎರಡು ಕೈಗಳಲ್ಲಿಯೂ ಕುಶ ಧಾರಣೆ ಮಾಡಿರಬೇಕು ಎಡಗೈನಲ್ಲಿ ಕುಶ, ಬಲಗೈನಲ್ಲಿ ಪವಿತ್ರ ಧರಿಸಿರಬೇಕು. ಯಾವ ದ್ವಿಜನು ಎರಡು ಕೈಗಳಲ್ಲೂ ಕುಶಧರಿಸಿ ಆಚಮನ ಮಾಡುತ್ತಾನೋ ಅವನು ಸೋಮಪಾನ ಮಾಡಿದ ಫಲವನ್ನು ಪಡೆಯುತ್ತಾನೆ. ಆಚಮನದಿಂದ ಪವಿತ್ರ ಉಚ್ಚಿಷ್ಟವಾಗುವುದಿಲ್ಲ. [ಕಾತ್ಯಾಯನ] ಕುಶ, ಕಾಶ, ಶರ ಗೋಧಿಗರಿ, ಚಿನ್ನ, ಬೆಳ್ಳಿ ಮತ್ತು ತಾಮ್ರ ಈ ರೀತಿ ದರ್ಭೆಗಳಿವೆ.

ಸಂಧ್ಯಾವಂದನೆ ಪ್ರಾರಂಭಿಸುವುದಕ್ಕೆ ಮೊದಲು ಗಾಯಿತ್ರೀ ಮಂತ್ರೋಚ್ಚಾರಣ ಪೂರ್ವಕವಾಗಿ ಶಿಖೆಯನ್ನು ಗಂಟುಹಾಕಿಕೊಳ್ಳಬೇಕು. 'ಶಿಖಾ ಕಚ್ಚನಿಬದ್ಧೋ ಸೋ ಪವೀತಿ ಸಮಾಹಿತಃ' ಶ್ರೌತ ಮತ್ತು ಸ್ಮಾರ್ತಕರ್ಮಗಳಲ್ಲಿ ೨ ಯಜ್ಞೋಪ

Sri Vidyabharathi Book Centre, Sringeri

CC-O. In Public Domain. Digitized by eGangotri

ವೀತ ಧಾರಣೆ ಮಾಡಿರಬೇಕು. ಉತ್ತರೀಯ [ಹೊದ್ದುಕೊಳ್ಳುವ ಪಂಚೆ] ಇಲ್ಲದಿದ್ದರೆ ಸಿನೆಯ ಯಜ್ಞೋಪವೀತವನ್ನು ಹಾಕಿಕೊಳ್ಳಬೇಕು (ವಿಶ್ವಾಮಿತ್ರ ಕಲ್ಪ).

ಯಜ್ಞೋಪವೀತದಲ್ಲಿ ಒಂಬತ್ತು ಎಳೆಗಳಿಂದ ಸುತ್ತಿವಾಡಿದ ಮೂರು ಧಾರಗಳಿವೆ ಈ ಒಂಬತ್ತು ಎಳೆಗಳು ಒಂಬತ್ತು ದೇವತೆಗಳು. ಜನಿವಾರ ತಯಾರಿಸುವಾಗ ಈ ದೇವರುಗಳಾದ ಓಂಕಾರ, ಅಗ್ನಿ, ನಾಗ, ಸೋಮ, ಪಿತೃಗಳು, ಪ್ರಜಾಪತಿ ವಾಯು ಮತ್ತು ಸೂರ್ಯರೆಂಬುದನ್ನು ಆಹ್ವಾನಿಸಬೇಕು. [ದೇವಳ] ಎಳೆಯ ಉದ್ದ ೯೬ ಅಂಗುಲದ ಮೂರು ಕಾಲು, ಮೂರು ಗುಣಗಳು. ಸತ್, ಚಿತ್. ಆನಂದ ಮುಂತಾದ ನಮಗೆ ತುಂಬಾ ಪವಿತ್ರ ಅಥವಾ ಅರ್ಥಗರ್ಭಿತವಾದ ತ್ರಯಗಳ ಸೂಚಕವು" [ಗಾ.ಜ,].

ದೇಶ ಮತ್ತು ಕಾಲ ವಿಚಾರ: ಸನ್ಧ್ಯಾವಂದನೆಯನ್ನು ಎಲ್ಲಿ ಮಾಡಬೇಕು? "ಸಂಧ್ಯೋಪಾಸನೆಯೂ ಗೃಹ್ಯಸೂತ್ರದಲ್ಲಿ ಬಾರದೆ ಆರಣ್ಯಕದಲ್ಲಿ ಬರುತ್ತಾದ್ದರಿಂದ ಆರಣ್ಯದಲ್ಲಿ ಆದನ್ನು ನಡೆಸುವ ಕ್ರಮವೇ ಮುಂಚೆ ಸಾಮಾನ್ಯವಾಗಿತ್ತು" ಪುಣ್ಯಕ್ಷೇತ್ರಂ ನದೀತೀರಂ ಗುಹಾ ಪರ್ವತ ಮಸ್ತಕವ್ । ತೀರ್ಥಪ್ರದೇಶಾಃ ಸಿನ್ಧೂನಾಂ ಸಂಗಮಃ ಪಾವನಂ ಸರಃ [ಶಾರದಾ] ಉದ್ಯಾನ್ಯಾನಿ ವಿವಿಕ್ತಾನಿ ಬಿಲ್ವ ಮೂಲಂ ತಟಂ ಗಿರೇಃ। ದೇವಾದ್ಯಾಯತನಂ ಕೂಲಂ ಸಮುದ್ರಸ್ಯ ನಿಜಂ ಗೃಹಂ (ಆಹ್ನಿಕ ಸೂತ್ರಾವಳಿ) ನದಿಗಳ ಸುರಮ್ಯ ಪ್ರವಾಹ, ಪರ್ವತಗಳ ಉದ್ಭುತ ದೃಶ್ಯ, ವನ್ಯ ವೃಕ್ಷಲತಾದಿಗಳ ಆನಂದಕಾರಕ ಪ್ರದೇಶ, ಉಧ್ಯಾನವನಗಳ ರಮಣೀಯವಾದ ದೃಶ್ಯ, ಇವುಗಳ ಮೇಲೆ ಪ್ರಾತಃಸಾಯಂಕಾಲಗಳಲ್ಲಿ ಸೂರ್ಯರಶ್ಮಿ ಬಿದ್ದು ಕಿರಣಗಳು ಮನೋಹರವಾಗಿ ಸೂಸಿ ಆನಂದವನ್ನು ತರುತ್ತವೆ. ಇಂತಹ ಪ್ರಶಾಂತ ಸೌಂದರ್ಯದಲ್ಲಿ ತಲ್ಲೀನನಾಗಿ ಋಷಿ ಭಗವಂತನಲ್ಲಿ ಮಗ್ನನಾಗುತ್ತಾನೆ. ವಿನೀತಭಾವದಿಂದ ತನ್ನ ಕೃತಜ್ಞತೆಯನ್ನು ಅರ್ಪಿಸುತ್ತಾನೆ. ಇದೇ ಸನ್ಧ್ಯಾರಹಸ್ಯ : ಸ್ಥಳದ ವಿಶೇಷ.

ಕಾಲದ ವಿಷಯ : ದಿನರಾತ್ರಿಗಳ ಸಂಧಿ ಸಮಯದಲ್ಲಿ ಸಂಧ್ಯೋಪಾಸನೆ ಮಾಡಬೇಕು. ಸಾಯಂಕಾಲದಲ್ಲಿ ಇನ್ನೂ ಸೂರ್ಯ ಇರುವಾಗ ಪ್ರಾರಂಭಿಸಬೇಕು ಮತ್ತು ಪ್ರಾತಃ ಕಾಲದಲ್ಲಿ ಇನ್ನೂ ಸೂರ್ಯೋದಯಕ್ಕೆ ಮೊದಲೇ ಪ್ರಾರಂಭಿಸಬೇಕು. ಹೀಗೆಂಬುದು ಶ್ರುತಿ ವಚನ. ಅಹೋರಾತ್ರಸ್ಯ ಸಂಯೋಗೇ ಸನ್ಧ್ಯಾಮುಪಾಸ್ತೇ ಸಜ್ಯೋತಿಷೀ ಅಜ್ಯೋತಿಷೋ ದರ್ಶನಾತ್ " ಪ್ರಾತಸ್ಸನ್ಧ್ಯೆಗೆ ನಕ್ಷತ್ರಗಳಿರುವಾಗಲೇ ಪ್ರಾರಂಭಿಸುವುದು ಉತ್ತಮವಲ್ಲ. ನಕ್ಷತ್ರಗಳು ಕಾಣದಾದಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾರಂಭಿಸುವುದು ಮಧ್ಯಮಕಾಲ. ಸೂರ್ಯನಿರುವಾಗ ಪ್ರಾರಂಭಿಸುವುದು ಕನಿಷ್ಠ ಕಾಲ. ಸಾಯಂಸಂಧ್ಯೆಯನ್ನಾದರೋ ಸೂರ್ಯನು ಇನ್ನೂ ಇರುವಾಗ ಪ್ರಾರಂಭಿಸುವುದೇ ಉತ್ತಮಪಕ್ಷ. ಮುಳುಗಿದ ಮೇಲಿನದು ಮಧ್ಯಮ ಪಕ್ಷ. ನಕ್ಷತ್ರಗಳು ಕಾಣಿಸಿಕೊಂಡ ಮೇಲೆ ಮಾಡುವುದು ಕನಿಷ್ಠ ಪಕ್ಷ, (ಉತ್ತಮಾ ತಾರಕೊ ಪೇತಾ ಮಧ್ಯಮಾಲುಪ್ತತಾರಕಾ ! ಅಧಮಾ ಸೂರ್ಯಸಹಿತಾ ಪ್ರಾತಃ ಸನ್ಧ್ಯಾತ್ರಿಧಾ ಸ್ಮೃತಾ। ಉತ್ತಮಾ ಸೂರ್ಯಸಹಿತಾ ಮಧ್ಯಮಾಲುಪ್ತ ಭಾಸ್ಕರ। ಅಧಮಾ ತಾರ ಕೋಪೇತಾ ಸಾಯಂಸನ್ಧ್ಯಾತ್ರಿಧಾಸ್ಮೃತಾ (ಮನು) ಸೂರ್ಯ ಮತ್ತು ನಕ್ಷತ್ರಗಳಿಲ್ಲದ ಸನ್ಧಿಕಾಲದಲ್ಲಿ ಸಂಧ್ಯೋಪಾಸನೆ ಮಾಡಬೇಕೆಂದು ಯಾಜ್ಞವಲ್ಕ್ಯರ ಮತ.

ಪ್ರಾತಸ್ಸಂಧ್ಯೆಯಲ್ಲಿ ಸೂರ್ಯೋದಯದ ನಂತರದ ೨ ಘಳಿಗೆವರೆಗೂ ಗೌಣೋತ್ತಮಕಾಲ, ಸಾಯಂ ಸಂಧ್ಯೆಯಲ್ಲಿ ಸೂರ್ಯಾಸ್ತವಾದ ಮೇಲೆ ೩ ಘಳಿಗೆವರೆಗೂ ಗೌಣೋತ್ತಮಕಾಲ. ಹಾಗೆಯೇ ಪ್ರಾತಸ್ಸಾಯಂಗಳಲ್ಲಿ ಸೂರ್ಯ ಉದಯ, ಅಸ್ತಗಳ ನಂತರಳ ಘಳಿಗೆವರೆಗೆ ಗೌಣೋತ್ತಮಕಾಲ. (ಸ್ಮೃತಿ ಸಂಗ್ರಹ) ಗೌಣ ಮಧ್ಯಮಕಾಲದಲ್ಲಿ ಸಂಧ್ಯಾವಂದನೆ ಮಾಡಿದರೆ ಪ್ರಾಯಶ್ಚಿತ್ತವಿಲ್ಲ. ಆದಕ್ಕಿಂಲೂ ಹೆಚ್ಚಾದ ಕಾಲವಾದರೆ ಆಗ ವ್ಯಾಹೃತಿ, ತಿರಸ್ಸು ಗಳೊಡನೆ ಗಾಯತ್ರಿ ಮಂತ್ರವನ್ನು

ಓಂ ಭೂ ರ್ಭುವಸ್ಸುವಃ। ತತ್ಸವಿತು ರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ। ಧಿಯೋ ಯೋನಃ ಪ್ರಚೋದಯಾತ್। ಓಮಾಪೋ ಜ್ಯೋತೀ ರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥ ಎಂದು

ಪೂರ್ತಿ ಹೇಳಿ ನಾಲ್ಕನೇ ಅರ್ಘ್ಯ ಕೊಡಬೇಕು (ಮದನ ಪಾರಿಜಾತ) "ಗಾಯತ್ರೀ ಶಿರಸಾ ಸಾರ್ಧಮುಕ್ತ್ವಾವ್ಯಾಹೃತಿ ಭಿಸ್ಸಹ। ಕಾಲಾತೀತ ವಿಶುದ್ಧ್ಯರ್ಥಂ ಚತುರ್ಥಾರ್ಘ್ಯಂ ಪ್ರದಾಪಯೇತ್ ॥ ಪ್ರಾಯಶ್ಚಿತ್ತಾರ್ಘ್ಯವನ್ನು ಮೊದಲೇ ಕೊಡಬೇಕೆಂಬ ಪಕ್ಷವೂ ಇದೆ.) ಪರದೇಶದಲ್ಲಿ ಯಾತ್ರೆ ಮಾಡುತ್ತಿದ್ದಾಗ ಪ್ರಾತರ್ಮಧ್ಯಾಹ್ನದ ಸಂಧ್ಯೆ ಆಚರಿಸಲಾಗದೆ ಹೋದವರು ರಾತ್ರಿಯಲ್ಲಿ ಪ್ರಾಯಶ್ಚಿತ್ತವನ್ನು ಮೊದಲು ಮಾಡಿ ಆನೇಲಿ [illegible] ಎಂಬುದಾಗಿ ಗೌತಮವಾಕ್ಯ.

Sri Vidyabharathi Book Centre, Shirsi

CC-O. In Public Domain. Digitized by eGangotri

ಕಾಲನಿಯಮದ ವಿಷಯಕ್ಕೆ ತಾತ್ತ್ವಿಕವಾದ ವಿವರಣೆಯೊಂದಿದೆ. ಮೊದಲು ಬ್ರಹ್ಮವೊಂದೇ ಇತ್ತು. "ಬಹುಸ್ಯಾಮ" ಎಂದು ಇಚ್ಛಿಸಿತು. ಆ ಇಚ್ಛೆಯನ್ನೇ ಮಹಾಶಕ್ತಿ, ಮಹಾ ಪ್ರಕೃತಿ, ಮಾಯೆ ಎಂದೆಲ್ಲ ವಿಧವಿಧವಾಗಿ ಹೇಳುವುದು. ಅದು ಸತ್ವ ರಜಸ್ಸು, ತಮಸ್ಸುಗಳೆಂಬ ತ್ರಿಗುಣಗಳ ಸ್ವರೂಪ ಸೃಷ್ಟಿ. ಸ್ಥಿತಿ, ಲಯವೆಂಬುದೆಲ್ಲ ಅದರ ಕಾರ್ಯ. ಜಗತ್ತೆಂಬುದೆಲ್ಲ ಈ ಮೂರು ಗುಣಗಳ ಕಾರ್ಯ. ಈ ಕ್ರಿಯೆಯು ಯಾವಾಗಲೂ ನಡೆಯುತ್ತಲೇ ಇರುವುದು,. ಒಂದು ಕ್ಷಣವೂ ಇಲ್ಲ ಆ ಕ್ರಿಯೆ ಇಲ್ಲದ ಕಾಲ. ಆದರೆ ಒಂದೊಂದು ಸಾರಿ ಒಂದೊಂದು ಗುಣಹೆಚ್ಚು ಎದ್ದು ಕಾಣುವುದು. ಕಾಲಕ್ಕೂ, ಗುಣಕ್ಕೂ ಸಂಬಂಧವುಂಟು. ಪ್ರಾತಃ ಕಾಲದಲ್ಲಿ ಸೃಷ್ಟಿಕಾರ್ಯದ ಸತ್ವಗುಣ ಪ್ರಧಾನ. ಆದರ ಅಧಿಷ್ಠಾತೃ ದೇವತೆಯನ್ನು ಉಪಾಸನೆಯ ಸೌಲಭ್ಯಕ್ಕಾಗಿ "ಬ್ರಹ್ಮಾಣಿ" ಎಂದು ಕರೆಯುತ್ತೇವೆ. ಮಧ್ಯಾಹ್ನದಲ್ಲಿ, ಸ್ಥಿತಿಕಾರ್ಯದ ರಜೋಗುಣವು ಪ್ರಧಾನವಾಗಿ, ಆಗಿನ ದೇವತೆಯನ್ನು "ವೈಷ್ಣವಿ" ಎಂದು ಕರೆಯುವುದು. ಸಾಯಂಕಾಲದಲ್ಲಿ ಲಯಕಾಲದ ತಾಮಸ ಗುಣಪ್ರಧಾನ. ಆ ಕಾಲದ ದೇವತೆ "ಮಹೇಶ್ವರೀ" ಎಂದು ಸಾಧಕನು ಹೀಗೆ ಆಯಾಯ ಕಾಲದ ಉಪಾಸನಾ ದೇವತೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕಲ್ಪಿಸಿಕೊಂಡು, ಅದಕ್ಕನುಗುಣವಾದ ಸ್ವರೂಪವನ್ನು ನಿರ್ದೇಶಿಸುವ ಧ್ಯಾನ ಶ್ಲೋಕದ ಮೂಲಕ ಆ ದೇವತೆಯನ್ನು ಚಿಂತಿಸುತ್ತಾನೆ.

ಹೀಗಿರುವಲ್ಲಿ, ಈಗ ಕಾಲನಿಯಮವನ್ನು ದುರ್ಲಕ್ಷಿಸಿ, ಸೃಷ್ಟಿಕಾರ್ಯದ ಅಹಸ್ಸಿನ ದೇವತೆಯನ್ನು ಬ್ರಹ್ಮಾಣಿಯನ್ನು - ಸ್ಥಿತಿಕಾಲದ ಮಧ್ಯಾಹ್ನದಲ್ಲಿ - ವೈಷ್ಣವಿಯ ಅಧಿಕಾರದ ವೇಳೆ-ಉಪಾಸನೆ ಮಾಡಿದರೆ-ಒಬ್ಬ ರಾಜನ ರಾಜ್ಯದಲ್ಲಿದ್ದು ಆವನಿಗೆ ಸಲ್ಲಬೇಕಾದ ಕಪ್ಪಕಾಣಿಕೆಗಳನ್ನು ಇನ್ನೊಬ್ಬ ರಾಜನಿಗೆ ಕೊಟ್ಟಂತೆ ಆಗುವುದಿಲ್ಲವೇ? ಶ್ರಮವು ಪ್ರಯೋಜನಕಾರಿಯಾಗದೆ ಹೋಗಬಹುದಲ್ಲವೇ? ಹೀಗೆಂಬುದೇ ಕಾಲನಿಯಮದ ರಹಸ್ಯ (Arthur Avalon)

ಸಂಧ್ಯಾವಂದನೆ ಎಷ್ಟು?

ದಿನಕ್ಕೆ ಎಷ್ಟು ಸಲ ಸಂಧ್ಯಾವಂದನೆಯನ್ನು ಮಾಡಬೇಕು? ಎರಡೇ, ಮೂರೇ, ನಾಲ್ಕು ಸಾರಿಯೇ? ಎರಡು ಎಂಬುದರ ಸಮರ್ಥನೆ ಹೀಗಿದೆ. ಮನುವಚನ "ನತಿಷ್ಠತಿ ತು ಯಃ ಪೂರ್ವಾಂ ನೋಪಾಸ್ತೇ ಯಸ್ತು ಪಶ್ಚಿಮಾಂ। ಸ ಶೂದ್ರವದ್ಬಹಿಷ್ಕಾರ್ಯಃ ಸರ್ವಸ್ಮಾದ್ದ್ವಿಜಕರ್ಮಣಃ (ಪ್ರಾತಃ ಸಾಯಂಕಾಲಗಳಲ್ಲಿ ಸಂಧ್ಯೋಪಾಸನೆ ಮಾಡದವನನ್ನು ದ್ವಿಜಕರ್ಮಗಳಿಂದಲೂ ಬಹಿಷ್ಕರಿಸಬೇಕು)

CC-O. Vasishtha Ganapathi Sastrigal Trust, Chennai. Digitized by eGangotri

CC-O. In Public Domain. Digitized by eGangotri

ಇಲ್ಲಿ ಎರಡೇ ಕಾಲವು ಸೂಚಿತವಾಯಿತು. "ತಸ್ಮಾದಹೋರಾತ್ರಸ್ಯ ಸಂಯೋಗೇ ಬ್ರಾಹ್ಮಣಃ ಸಂಧ್ಯಾಮುಪಾಸೀತ, ಉದ್ಯಂತ ಮಸ್ತಂ ಯಂತಮಾದಿತ್ಯಮಭಿಧ್ಯಾರ್ಯ" (ಸಾಮವೇದ ಷ. ಬ್ರಾ.) ಆದುದರಿಂದ ಹಗಲು ರಾತ್ರಿಗಳ ಸಂಧಿ ಸಮಯದಲ್ಲಿ, ಉದಯವಾಗುತ್ತಿರುವ ಮತ್ತು ಅಸ್ತಮಿಸುತ್ತಿರುವ ಸೂರ್ಯನನ್ನು ನೋಡಿ, ಬ್ರಾಹ್ಮಣನು ಸಂಧ್ಯೋಪಾಸನೆ ಮಾಡಬೇಕು ಇಲ್ಲಿಯೂ ಎರಡು ಕಾಲ, 'ಪ್ರಾತರ್ಗೃಹ ಪತಿರ್ನೋ ಅಗ್ನಿಃ ಸಾಯಂ ಸಾಯಂ ಸೌಮನಸಸ್ಯದಾತಾ, ವಸೋರ್ವ ಸೋರ್ವ ಸಂಧಾನ ಏಧೀಂ,ಧಾ ನಾಸ್ತ್ವಶಂಹಿಮಾ ಋಭೀಮ (ಆಥ್ಲ೬೧೬–೫೫–೪) ಪ್ರಾತಃ ಕಾಲ ಮಾಡಿದ ಯಜ್ಞವು ಸಾಯಂಕಾಲದವರೆಗೂ ಮನಸ್ಸನ್ನು ಶುದ್ಧವಾಗಿರಿಸು ತ್ತದೆ. ಐಶ್ವರ್ಯದಾತನಾದ ಪರಮಾತ್ಮನೇ ನಿನ್ನನ್ನು ಸ್ತುತಿಸುತ್ತಾ ನಾವು ನೂರು ವರ್ಷಗಳಕಾಲ ಬಾಳುವಂತಾಗಲಿ. "ಉಪತ್ವಾಗ್ನೇ ದಿವೇ ದಿವೇದೋಷಾವಸ್ತರ್ಧಿಯಾ ವಯಂ, ನಮೋಭರಂತ ಏಮಸಿ" (ಸಾಮವೇದ ೧೧೨–೪) ಜ್ಞಾನಸ್ವರೂಪನಾದ ಭಗವಂತನೇ, ಪ್ರತಿ ದಿವಸ ನಾವು ಪ್ರಾತಃಸಾಯಂಕಾಲದಲ್ಲಿ ನಮಸ್ಕಾರ ವಚನ ಗಳಿಂದ ನಿನ್ನ ಹತ್ತಿರ ಬರುತ್ತೇವೆ:—ಹೀಗೆ ಎರಡು ಬಾರಿ ಸಂಧ್ಯಾವಂದನೆಯನ್ನಾ ಚರಿಸಬೇಕೆಂಬುದಕ್ಕೆ ವಾಕ್ಯಗಳಿವೆ.

ಹಾಗೆಯೇ ಮೂರು ಬಾರಿ (ಮಧ್ಯಾಹ್ನ) ಸಂಧ್ಯೆಯನ್ನು ನಮಸ್ಕರಿಸಬೇಕೆ ನ್ನುವ ಋಷಿಗಳೂ ಉಂಟು.

"ಏತತ್ಸಂಧ್ಯಾತ್ರಯಂ ಪ್ರೋಕ್ತಂ ಬ್ರಾಹ್ಮಣ್ಯಂಯದಧಿಷ್ಠಿತಮ್ ! ಯಸ್ಯ ನಾಸ್ತ್ಯಾದರಸ್ತನ್ರ ನ ಸ ಬ್ರಾಹ್ಮಣ ಉಚ್ಯತೇ (ಛಂದೋಗಪರಿಶಿಷ್ಟ) "ಪ್ರಾತರ್ದೇವೀ ನುದಿತಿಂಜೋಹವೀಮಿಮಧ್ಯಂದಿನ ಉದಿತಾ ಸೂರ್ಯಸ್ಯ (ನಾನು ಪ್ರಾತಃ ಕಾಲ ದಲ್ಲಿ ಅದಿತಿದೇವಿಯ ಉಪಾಸನೆ ಮಾಡುತ್ತೇನೆ. ಹಾಗೆಯೇ ಸೂರ್ಯೋದಯ ವಾದ ನಂತರ ಮಧ್ಯಾಹ್ನದಲ್ಲಿ ಉಪಾಸನೆ ಮಾಡುತ್ತೇನೆ) "ಹವೇತ್ವಾ ಸೂರ ಉದಿತೇ ಹವೇಮಧ್ಯಂ ದಿನೇ ದಿವಃ (ಋ) ಹೇ ಪ್ರಭೋ ! ಸೂರ್ಯೋದಯ ಸಮ ಯದಲ್ಲಿ ನಿನ್ನ ಪ್ರಾರ್ಥನೆ ಮಾಡುತ್ತೇನೆ. ಹಾಗೆಯೇ ದಿನದ ಮಧ್ಯದಲ್ಲಿಯೂ ಪ್ರಾರ್ಥನೆ ಮಾಡುತ್ತೇನೆ. " ಸಂಧ್ಯಾತ್ರಯಂತು ಕರ್ತವ್ಯಂ ದ್ವಿಜೇನಾತ್ಮವಿದಾ ಸದಾ (ಅತ್ರಿಸ್ಮೃತಿ) ಹೀಗೆ ಸಂಧ್ಯೆಯನ್ನು ೩ ಕಾಲದಲ್ಲಿ ಆಚರಿಸಬೇಕೆಂದಾಯಿತು (ಶುಕ್ಲ) ಯಜುರ್ವೇದಿಗಳಿಗಂತು ಮಧ್ಯಾಹ್ನ ಸಂಧ್ಯಾ ವಿಶೇಷ ಅವಶ್ಯಕವಾದುದಾಗಿದೆ. ಆದರೆ ಕೆಲವೆಯು ಕಾಲವನ್ನು ಸೂಚಿಸುವುದೂ ಉಂಟು. ಅವರು

CC-O. Vasishtha Bharathi Book Centre, Sringeri

CC-O. In Public Domain. Digitized by eGangotri

"ನಮಃ ಸಾಯಂ ನಮಃ ಪ್ರಾತರ್ನಮೋ ರಾತ್ರ್ಯಾ ನಮೋದಿವಾ । ಭವಾಯ ಚ ಶರ್ವಾಯ ಚೋಭಾಭ್ಯಾಮಕರಂ ನಮಃ(ಅಥರ್ವ ೧೧-೨-೧೬] ಒಂದು ಉಪನಿಷತ್ತಿನಲ್ಲಿ "ನೀಷೀಥೇತುರಿಯಾಂ ಸಂಧ್ಯಾಂ ಜಪಾತ್ವಾವಾಕ್ ಸಿದ್ಧಿರ್ಭವತಿ" [ಮಧ್ಯರಾತ್ರಿಯಲ್ಲಿ ಗಾಯಿತ್ರಿಯನ್ನು ಜಪಿಸಿದವನು ವಾಕ್ ಸಿದ್ಧಿಪಡೆಯುವನು] ಎಂದಿದೆ. ಹೀಗೆ ನಾಲ್ಕನೆಯ ಕಾಲಕ್ಕೆ ವೇದವಚನವನ್ನು ಉದಾಹರಿಸಿರುವ ಸ್ವಾಧ್ಯಾಯ ಮಂಡಲದ ಪಂಡಿತ ಶ್ರೀ ಸಾತ್ವಳೇಕರ್‌ರವರೇ ಮುಂದೆ 'ಈ ವಿಷಯದಲ್ಲಿ ಇನ್ನೂ ಸಂಶೋಧನೆ ಆಗಬೇಕಾದ ಅವಶ್ಯಕತೆ ಇದೆ" ಎಂದೂ ಮತ್ತು 'ಲೌಕಿಕ ವ್ಯವಹಾರದ ಸಾಧನೆ ಮಾಡುತ್ತಾ ಆತ್ಮದ ಉನ್ನತಿಯನ್ನು ಸ್ವಲಸ್ವಲ್ಪವಾಗಿ ಸಾಧಿಸಿಕೊಳ್ಳುತ್ತಾ ಹೋಗಬೇಕೆನ್ನುವವರಿಗೆ ಪ್ರತಿದಿನ ೩ ಬಾರಿ ಅಥವಾ ಕಡೆಯ ಪಕ್ಷ ಎರಡು ಬಾರಿಯಾದರೂ ಅವರಿಗೆ ಉಪಾಸನಾ ಹೇಳಿದೆ, ಎಂದಿದ್ದಾರೆ. ಆಪಸ್ತಂಭರು, ಗೌತಮರು ಮನು ಮತ್ತು ಯಜ್ಞವಲ್ಕ್ಯರು ದಿನಕ್ಕೆ ಎರಡೇ ಸಂಧ್ಯೋಪಾಸನೆಗಳನ್ನು ವಿಧಿಸಿದ್ದಾರೆ: ಮಧ್ಯಾಹ್ನದ್ದನ್ನು ವಿಧಿಸಿಲ್ಲ [ಗಾ. ಜ.] ಋಗ್ವೇದಿಗಳು ಉಪನಯನದ ವೇಳೆ ಬ್ರಹ್ಮೋಪದೇಶವಾದ ಮೇಲೆ, ಮಾಧ್ಯಾಹ್ನಿಕಕ್ಕೆ ಕಾಲವಿದ್ದರೂ ಮಾಧ್ಯಾಹ್ನಿಕ ಸಂಧ್ಯಾ ಮಾಡುವುದಿಲ್ಲ. ಸಾಯಂ ಸಂಧ್ಯಾವಂದನೆಯಿಂದಲೇ ಉಪನಯನ ಪ್ರಾರಂಭ ಇದೂ ಎರಡೇ ಸಂಧ್ಯಾವಂದನೆಯ ಸೂಚಿಯಾಗಿದೆ, ಹೀಗೆ ಎರಡು ಕಾಲದಲ್ಲಿಯೂ ಪೂರ್ಣವಾಗಿ ಮಾಡಲು ಅವಕಾಶವಿಲ್ಲದಾಗ ಆರ್ಘ್ಯದವರೆಗಾದರೂ ಮಾಡಲಿ ಎಂಬುದು ವಿಚಾರ ನಿಷ್ಪತ್ತಿ. ಏಕೆಂದರೆ ಅಶೌಚದಲ್ಲಿ ವೇದಾಧ್ಯಯನ, ಗಾಯತ್ರಿ ಜಪ, ಹೋಮಾದಿಗಳನ್ನು ಮಾಡಬಾರದೆಂದೂ ಆದರೆ ಅಶೌಚದಲ್ಲಿ ಕೂಡ ಆರ್ಘ್ಯ ಪ್ರಧಾನವನ್ನು ಮಾಡಲೇಬೇಕೆಂದೂ ಪೈಠೀನಸರ ವಾಕ್ಯವಿರುವುದರಿಂದ ವ್ಯವಧಾನವಿಲ್ಲದ ಸಮಯದಲ್ಲಿ ಆರ್ಘ್ಯದವರೆಗೆ ಮಾಡಿದರೂ ಸಂಧ್ಯಾಫಲಸಿದ್ಧಿಸುವುದೆಂದಾಯಿತು. ಇದಕ್ಕೆ ಳ ನಿಮಿಷ ಕೂಡ ಹಿಡಿಯುವುದಿಲ್ಲ. ಆಷ್ಟೂ ವಿರಾಮವಿಲ್ಲವೇ?

ಸಂಧ್ಯಾವಂದನೆ ಅಂಗಗಳು

ಸನ್ಧ್ಯಾವಂದನೆಯಲ್ಲಿ ನಾಲ್ಕು ಪ್ರಧಾನವಾದ ಅಂಗಗಳಿವೆ. ಆಚಮನ, ಆರ್ಘ್ಯ ಪ್ರಧಾನ, ಗಾಯತ್ರೀ ಜಪ ಮತ್ತು ಸೂರ್ಯೋಪಸ್ಥಾನ ಎಂಬುವು. ಆಚಮನ ಮಾರ್ಜನೆ ಮಂತ್ರಗಳಿಂದ ಅಂತರಂಗ - ಬಹಿರಂಗ ಪರಿಶುದ್ಧತಾ ಭಾವನೆಯನ್ನು ಪೈಗೂಡಿಸಿಕೊಂಡು, ಕೃತಜ್ಞತೆಯ ಸೂಚಕವಾಗಿ ಸೂರ್ಯ ದೇವನಿಗೆ ಆರ್ಘ್ಯವನ್ನರ್ಪಿಸಿ ಆವಾಹನೆ ಧ್ಯಾನಗಳಿಂದ ಗಾಯಿತ್ರಿ ದೇವತೆಯ ಸಾನಿಧ್ಯವನ್ನು ಸಾಧಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು ಗಾಯತ್ರೀ ಮಂತ್ರ ಜಪವನ್ನು ಮಾಡುವುದು. ಇದಾದ ನಂತರ ಸೂರ್ಯಾಭಿ ಮುಖವಾಗಿ ನಿಂತುಕೊಂಡು ಸೂರ್ಯ ಪ್ರಾರ್ಥನೆ [ಸೂರ್ಯೋಪಸ್ಥಾನ] ಮಾಡು ವುದು. ನಾನಾ ದಿಕ್ಕುಗಳಲ್ಲಿರುವ ದೇವತೆಗಳನ್ನು ವಂದಿಸಿ ಋಷಿಜನ, ಮಾತಾಪಿತೃ ಗಳನ್ನು ಸ್ಮರಿಸಿ ಅದುವರೆಗೆ ಮಾಡಿದ ಸಕಲ ಕರ್ಮಗಳನ್ನು ಸರ್ವಾತ್ಮಕನಾದ ಶ್ರೀ ಕೃಷ್ಣನಿಗೆ ಸಮರ್ಪಿಸುವುದು. ಇದು ಸನ್ಧ್ಯಾಕರ್ಮದ ತಾತ್ಪರ್ಯ. ಕೆಲವರು ಉಪಸ್ಥಾನವನ್ನು ಮೊದಲು ಮಾಡಿ ಆಮೇಲೆ ಗಾಯತ್ರಿ ಜಪ ಮಾಡುವರು.

ಅಂಗಗಳ ವಿವರಣೆ

ಅಧ್ಯಯನ ಸೌಕರ್ಯಕ್ಕಾಗಿ ಸನ್ಧ್ಯಾನುಷ್ಠಾನವನ್ನು ಕೆಲವರು ಮೂರು ಭಾಗವಾಗಿ ವಿಂಗಡಿಸಿಕೊಂಡಿದ್ದಾರೆ. ೧. ಪೂರ್ವಾಂಗ, ಆಚಮನದಿಂದ ಗಾಯತ್ರೀ ಜಪಪೂರ್ತಿಯಾಗಿ, ೨. ಉತ್ತರಾಂಗ ತರ್ಪಣ, ಉಪಾಸ್ಥಾನ, ಗಾಯತ್ರೀ ಪ್ರಸ್ಥಾನಗಳು ೩. ಭಗವದರ್ಪಣ-ಎಂದು. ಇನ್ನು ಕೆಲವರು ೧] ಅರ್ಘ್ಯಪ್ರದಾನ ೨] ಗಾಯತ್ರಿ ಜಪ ೩] ವಿಸರ್ಜನೆ ಎಂದು ಎಲ್ಲದರ ತಾತ್ಪರ್ಯವೂ ಒಂದೇ.

ವಿಷ್ಣು ಸ್ಮರಣೆ : 'ಅಪವಿತ್ರಃ ಪವಿತ್ರೋ ವಾ' ಕರ್ಮಗಳನ್ನು ಪ್ರಾರಂಭಿ ಸುವ ಮುನ್ನ ಪರಿಶುದ್ಧತಾಭಾವನೆಯನ್ನು ಮೈಗೂಡಿಸಿಕೊಳ್ಳಬೇಕು. ಪುಣ್ಡರೀಕಾಕ್ಷ ನಾದ ವಿಷ್ಣು ಸ್ಮರಣೆಯಿಂದ ಇದು ಸಾಧ್ಯವಾಗುವುದು.

'ಆಚಮನ ಓಂ ಕೇಶವಾಯ ಸ್ವಾಹಾ'....ಇದು ಪುರಾಣಾಚಮನ 'ಚಮ್' ಎಂಬ ಧಾತುವಿನಿಂದ ಹುಟ್ಟಿದೆ 'ಆ' ಎಂಬ ಉಪಸರ್ಗ ಸೇರಿದೆ. ಚಮ್ ಎಂದರೆ ನಿಧಾನವಾಗಿ ನೀರು ಕುಡಿ ಎಂದರ್ಥ (ಯ.ಸ.) ಕರ್ಮದ ಆರಂಭ ಮತ್ತು ಸಮಾಪ್ತಿ ಗಳ ವೇಳೆ ಆಚಮನ ಅತಿ ಮುಖ್ಯ. ಮೊದಲಿನ ೩ ಮಂತ್ರಗಳಿಂದ ಬ್ರಹ್ಮತೀರ್ಥ ದಿಂದ ನೀರು ಕುಡಿದು, ಕೈಒದ್ದೆ ಮಾಡಿಕೊಂಡು, ಮಿಕ್ಕ ೨೧ ಮಂತ್ರಗಳಿಂದ ಅವ ರವರ ಸಂಪ್ರದಾಯದಂತೆ ಅಂಗಸ್ಪರ್ಶನೆ ಮಾಡಿದರೆ ಒದಡಿದರೆ ಐದು ಜ್ಞಾನೇಂದ್ರಿ ಯಗಳು, ಐದು ಕರ್ಮೇಂದ್ರಿಯಗಳು, ಐದು ಮುಖ್ಯ ಪ್ರಾಣಗಳು, ಐದು ಉಪ ಪ್ರಾಣಗಳು, ಒಂದು ಮನಸ್ತತ್ವ ಇವೆಲ್ಲ ಶುದ್ಧವಾಗುವುದು ಆಚಮನದಿಂದ ಮನಸ್ಸಿನ ಉದ್ವೇಗವೂ ಶಾಂತವಾಗುವುದು. ಆಚಮನದ ವೇಳೆ ಬ್ರಾಹ್ಮಣನು ಹೃದಯ ಮುಟ್ಟುವಷ್ಟು (ಉದ್ದಿನಕಾಳು ಮುಳುಗುವಷ್ಟು) ಜಲವನ್ನು ಪಾನಮಾಡ ಬೇಕು. ಕ್ಷತ್ರಿಯರು ಕಂಠವನ್ನು ಮುಟ್ಟುವಷ್ಟು ಮತ್ತು ವೈಶ್ಯರು ಕಾಲು ಮುಟ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ವಷ್ಟ ಜಲವನ್ನು ಪ್ರತಿಸಾರಿಯೂ ಉಪಯೋಗಿಸಬೇಕು. ಮೂರು ಆಚಮನದಿಂದ ಮೊದಲನೆಯದರಿಂದ ಋಗ್ವೇದ, ಎರಡನೆಯದರಿಂದ ಯಜುರ್ವೇದ ಮತ್ತು ಮೂರನೆಯದರಿಂದ ಸಾಮವೇದ ತೃಪ್ತಿಯಾಗುವುದು. ಇದೆಲ್ಲವೂ ಪ್ರಾಣಾಯಾಮ, ಸಂಕಲ್ಪಕ್ಕೆ ಮೊದಲು ಬರುವ ಪುರಾಣಾಚಮನದ ವಿಷಯ.

ಘಟ್ಟದ ಕೆಳಗಿನವರು ಮೊದಲು 'ಋಗ್ವೇದಾಯ ಸ್ವಾಹಾ' ಮುಂತಾಗಿ ಶ್ರೌತಾಚಮನ ಹೇಳುತ್ತಾರೆ.

ಆಚಮನದಲ್ಲಿ ಶ್ರೌತಾಚಮನ, ಸ್ಮಾರ್ತಾಚಮನ ಮತ್ತು ಪುರಾಣಾಚಮನ ಗಳೆಂದು ಮೂರು ವಿಧ. ಕೇಶವನೇ ಮೊದಲಾದ ಹೆಸರುಗಳಿಂದ ಪ್ರಾರಂಭ ಮಾಡು ವಿಕೆ ಪುರಾಣಾಚಮನ. ಶ್ರೌತಾಚಮನವು ಬ್ರಹ್ಮಯಜ್ಞಾಂಗವೆಂದು ಘಟ್ಟದ ಕೆಳ ಗಿನವರು ಹೇಳುತ್ತಾರೆ. ಎರಡನೆಯ ಸ್ಮಾರ್ತಾಚಮನ ಸನ್ಧ್ಯಾವಂದನೆಗಳಲ್ಲಿಲ್ಲ. ಮಂತ್ರಗಳನ್ನು ಉಚ್ಚರಿಸದೆ, ಪುರಾಣಾಚಮನದಂತೆ ಮನಸ್ಸಿನಲ್ಲೇ ಮಾಡುವುದು. ಮದರಾಸಿನ ಕಡೆ ಇರುವಂತಿದೆ. ದೇಹಶುದ್ಧಿಯಾಗುವುದಕ್ಕೋಸ್ಕರ ಯೋಗಶಾಸ್ತ್ರ ದಲ್ಲಿ ಹೇಳಿರುವ ಜಲಧೌತೀ, ಅಗ್ನಿಧೌತಿ ವಾಯುಧೌತಿಗಳೆಂಬ ಕಾರ್ಯಗಳ ತತ್ತ್ವ ಗಳನ್ನು ಸನ್ಧ್ಯಾಕರ್ಮವು ಒಳಗೊಂಡಿದೆ. ಧೌತಿ, ಎಂದರೆ ಶುಚಿಮಾಡುವಿಕೆ.

ದ್ವಿಜನು ಕರ್ಮದಲ್ಲಿ ಪ್ರವೃತ್ತನಾಗಿರುವಾಗ ಕೆಮ್ಮು, ಸೀನು ಬಂದರೆ ಆಚಮನ ಮಾಡಬೇಕು. ಜಲವಿಲ್ಲದಿದ್ದರೆ ಬಲ ಕಿವಿಯನ್ನು ಮುಟ್ಟಿಕೊಳ್ಳಬೇಕು. ಅಲ್ಲಿ ಅಗ್ನಿ, ಜಲ, ವೇದ, ಸೋಮ, ಸೂರ್ಯ ಮತ್ತು ವಾಯು ದೇವತೆಗಳಿ ರುವರೆಂಬುದು ಮತ. (ಅಗ್ನಿ ರಾಪಶ್ಚವೇದಾಶ್ಚ ಸೋಮಸ್ಸೂರ್ಯೋನಿಲಸ್ತಥಾ ಸರ್ವೇ ದೇವಾಶ್ಚ ವಿಪ್ರಸ್ಯಕರ್ಣೇ ತಿಷ್ಠಂತಿ ದಕ್ಷಿಣೇ.

ಸ್ಪರ್ಶ : ಈ ಆಚಮನದ ವೇಳೆ ಅಂಗುಷ್ಠವೂ ಸೇರಿದ ಬೆರಳುಗಳಿಂದ ವಿವಿಧ ಅಂಗಗಳನ್ನು ಮುಟ್ಟಿಕೊಳ್ಳುತ್ತೇವಷ್ಟೆ. ಅದರ ಮೂಲ ಕಲ್ಪನೆ ಹೀಗಿದೆ. ಅಂಗಗಳಿಗೆಲ್ಲಾ ಆಯಾಯ ಅಂಗಗಳನ್ನು ವ್ಯಾಪಿಸಿರುವ (ಅಧಿ) ದೇವತೆಗಳಿದ್ದಾರೆ. ಸ್ಪರ್ಶನದ ಮೂಲಕ ಅವರನ್ನು ಸ್ಮರಿಸಿದರೆ ಅವರು ಸುಪ್ರೀತರಾಗಿ ಅನುಗ್ರಹಿಸುವ ರೆಂಬುದು ಭಾವ. ಅಂಗುಷ್ಠದ ಬೆರಳೂ ಜೊತೆಯಲ್ಲಿರಬೇಕೆಂದು ಏಕೆ? ಎಂದರೆ ಶ್ರುತಿಯು 'ಅಂಗುಷ್ಠ ಮಾತ್ರ : ಪುರುಷೋऽಙ್ಗುಷ್ಠಂಚ ಸಮಾಶ್ರಿತಃ' ಎಂದಿದೆ. ಆದುದರಿಂದ ಮನು 'ಸಾಂಜ್ಞುಷ್ಠಾನಿ ಸದಾಚರೇತ್' ಎಂದಿದ್ದಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಗುಷ್ಟದ ಮೂಲದಲ್ಲಿ ಬ್ರಹ್ಮತೀರ್ಥ, ಹಸ್ತಾಗ್ರದಲ್ಲಿ ದೇವತೀರ್ಥ, ಕನಿಷ್ಠಾಂಗುಳಿಯ (ಚಿಕ್ಕಬೆರಳಿನ) ಮೂಲಭಾಗಗಳಲ್ಲಿ ಪ್ರಜಾಪತಿ ತೀರ್ಥ ಮತ್ತು ತರ್ಜನೀ ಬೆರಳಿನ ಮೂಲದಲ್ಲಿ ಪಿತೃತೀರ್ಥಗಳಿವೆ.

ನದಿಯಲ್ಲಿ ಆಚಮನ ಮಾಡುವಾಗ ನೀರನ್ನು ಎಡಗೈನಲ್ಲಿ ಮುಟ್ಟಿಕೊಂಡಿರಬೇಕು (ಸ್ಪೃಷ್ಟಾಪ್ಲವಹಸ್ತೇನ ವಾಮೇನ ತಟೇ ನದ್ಯಾದಿಕೇಷುಚ) ಮನೆಯಲ್ಲಿ ಉದ್ಧರಣೆಯಲ್ಲಿ ಉದ್ಧರಣೆ ಎಂದರೆ ಯಾವುದು? 'ಉರ್ತ್' ಮೇಲೆ ಎತ್ತಿ 'ಧಾರಣೆ' ಹಿಡಿಯುತ್ತೋ ಅದು.

ಪ್ರಾಣಾಯಾಮ : ಪ್ರಣವಸ್ಯ ಪರಬ್ರಹ್ಮಋಷಿಃ ....ಆಪಓಂ. ಇದ ಪ್ರಾಣಾಯಾಮ ಮಂತ್ರ, ಸವ್ಯಾಹೃತಿಂ ಸಪ್ರಣವಾಂ ಗಾಯತ್ರೀಂ ಶಿರಸಾ ಸಹತ್ರಿಃ ಪಠೇದಾಯತಃ ಪ್ರಾಣಃ ಪ್ರಾಣಾಯಾಮಸ್ಸ ಉಚ್ಯತೇ ॥ ಸಪ್ತವ್ಯಾಹೃತಿಯಿಂದಲೂ ಪ್ರಣವದಿಂದಲೂ ಕೂಡಿರುವ ಸಶಿರಸ್ಕವಾದ ಗಾಯತ್ರಿಯನ್ನು ತ್ರಿರಾವೃತ್ತಿ ಜಪಿಸುವುದೇ ಪ್ರಾಣಾಯಾಮ. ಈ ಪ್ರಾಣಾಯಾಮವನ್ನು ಸನ್ಧ್ಯಾರಂಭದಲ್ಲಿಯೂ, ಜಪಾರಂಭದಲ್ಲಿಯೂ ಮೂರು ಸಲ ಮಾಡಬೇಕು ಅರ್ಘ್ಯದಾನದಲ್ಲಿ ಒಂದೇ ಅವರ್ತಿ ಪ್ರಾಣಾಯಾಮವು.

ಪ್ರಾಣಾಯಾಮ : "ಪ್ರಾಣಾ" ಎಂದರೆ ಶಸನವಾಯು. 'ಆಯಾಮ' ಎಂದರೆ ತಡೆಯುವುದು. ಪ್ರಾಣಾಯಾಮವೆಂದರೆ (ಶ್ವಾಸ ಪ್ರಶಾಸ ಯೋರ್ಗತಿ ವಿಚ್ಛೇದಃ) ಶ್ವಾಸವನ್ನು ಎಳೆದುಕೊಳ್ಳುವ ಕ್ರಿಯೆಗೆ ಪೂರಕವೆಂದೂ ತಡೆದು ನಿಲ್ಲಿಸುವುದಕ್ಕೆ ಕುಂಭಕವೆಂದೂ ಹೊರಗೆ ಬಿಡುವುದಕ್ಕೆ ರೇಚಕವೆಂದೂ, ಹೆಸರು. ಬ್ರಹ್ಮಚಾರಿಯು ಕನಿಷ್ಠಾಕನಾಮಿಕಾಂಗುಷ್ಠ ಬೆರಳುಗಳಿಂದ, ಗೃಹಸ್ಥನು ಐದೂ ಬೆರಳುಗಳಿಂದ ನಾಸಾಗ್ರವನ್ನು ಹಿಡಿಯಬೇಕು. ಪ್ರಾಣಾಯಾಮವು ಆಧ್ಯಾತ್ಮಿಕ ಮಾತ್ರವೆ ಅಲ್ಲ ವೈಜಾನಿಕವೂ ಹೌದು. ಮನಸ್ಸು ಪ್ರಾಣ ಮತ್ತು ವೀರ್ಯ ಎಂಬುವೆಲ್ಲ ಒಂದೇ ವಸ್ತು, ಪ್ರಾಣವನ್ನು ವಶಮಾಡಿಕೊಂಡರೆ ಮನಸ್ಸು ತಾನೇ ವಶಕ್ಕೆ ಬರುವುದು. ವೀರ್ಯವೂ ಸ್ಥಿರವಾಗುವುದು. ಪೂರಕ ಮಾಡುವ ಸಮಯದಲ್ಲಿ ನೀಲದಳಕ್ಕೆ ಸಮಾನ. ಶ್ಯಾಮ ಸುಂದರ ಚತುರ್ಭುಜ ಭಗವಾ ವಿಷ್ಣುವನ್ನು ನಾಭಿದೇಶದಲ್ಲಿ ಧ್ಯಾನಮಾಡಬೇಕು. ಕುಂಭಕದ ಸಮಯದಲ್ಲಿ ನಾಭಿಯಿಂದ ಪ್ರಕಟವಾಗುವ ಕಮಲಾಸನದ ಮೇಲೆ ವಿರಾಜಮಾನನಾದ, ಅರುಣ–ಗೌರಮಿಶ್ರಿತ ವರ್ಣದ ಚತುರ್ಮುಖ ಬ್ರಹ್ಮನನ್ನು ಉಪಾಸನೆ ಮಾಡಬೇಕು. ಹಾಗೆಯೇ ರೇಚಕದ ಸಮಯ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಶುದ್ಧಸ್ಫಟಿಕ ಸಮಾನ ಶ್ವೇತವರ್ಣ ತ್ರಿನೇತ್ರ ಮಹಾದೇವನ ಲಲಾಟವನ್ನು ಧ್ಯಾನಮಾಡಬೇಕು ಹೀಗೆಂದು ಯಜ್ಞವಲ್ಕ್ಯ, ಪಾರಿಜಾತ ಮತ್ತು ರತ್ನಾಕರ ಮೊದ ಲಾದವರ ಮತಗಳಾಗಿವೆ.

ಪ್ರಾಣಾಯಾಮದಲ್ಲಿ ನಾಲ್ಕು ಅಂಶಗಳಿವೆ. ಪ್ರಣವ, ವ್ಯಾಹೃತಿ, ಗಾಯತ್ರೀ ಗಾಯತ್ರೀ ಶಿರಸ್ಸು ಎಂದು. ೧. ಓಂ ಎಂಬ ಪ್ರಣವ ೨. ಸಪ್ತ ವ್ಯಾಹೃತಿಗಳೆಂಬ ಭೂಃ, ಭುವಃ ಸುವಃ, ಮಹಃ, ಜನಃ, ತಪಃ, ಸತ್ಯಂ ಎಂಬ ವ್ಯಾಹೃತಿ' ೩. ತತ್ಸವಿತುಃ ಪ್ರಚೋದಯಾತ್ ಎಂಬ ಗಾಯತ್ರಿ ಮತ್ತು ೪. ಗಾಯತ್ರೀ ಶಿರಸ್ಸೆಂದು ಕರೆಯಲ್ಪಡುವ ಓಮಾಪೋ ಜ್ಯೋತಿರಸೋ ಅಮೃತಂ ಬ್ರಹ್ಮ ಭೂರ್ಭುವಸ್ಸು ವರೋಂ ಎಂಬುದು. ಪ್ರಾಣಾಯಾಮದಿಂದ ದೇಹ ಶುದ್ಧವಾಗಿ, ಮನೋವಾ ಕ್ಕಾಯಗಳಿಂದ ರಾತ್ರಿ ಮಾಡಿದ ಪಾಪವು ಬೆಳಗಿನ ಪ್ರಾಣಾಯಾಮದಿಂದಲೂ ಹಗಲು ಮಾಡಿದ ಪಾಪವು ಮಧ್ಯಾಹ್ನ ಮತ್ತು ಸಾಯಂಕಾಲದ ಪ್ರಾಣಾಯಾಮ ಗಳಿಂದಲೂ, ಪರಿಹಾರವಾಗುವುದೆಂಬುದೇ ಮುಖ್ಯಾರ್ಥ.

"ಓಂ"

ಈ ಮಂತ್ರದ ಪ್ರಾರಂಭದಲ್ಲಿರುವ ಓಂ ಎಂಬ ಪ್ರಣವ ಮತ್ತು ಮೂರು ಮಹಾವ್ಯಾಹೃತಿ ಇವುಗಳ ತಾತ್ಪರ್ಯ ಹೀಗಿದೆ :—

ಓಂ ವೇದವನ್ನು ಪ್ರಾರಂಭಿಸುವಾಗ ಓಂಕಾರದಿಂದಲೇ ಪ್ರಾರಂಭಿಸಬೇಕು. ಓಂ ಎಂಬುದನ್ನು ಪ್ರಣವವೆಂದೂ ಕರೆಯುತ್ತಾರೆ. 'ಪ್ರಣವ' ಎಂದರೆ ಪ್ರಕರ್ಷೇಣ ನೂಯತೇ ತ್ಸ್ತೂಯತೇ ಪ್ರಣಮಯತೇ ತ್ಯೇತಸ್ಮಾತ್ಪ್ರಣವಃ (ಸಕಲಪ್ರಾಣ ಗಳನ್ನು ಪರಮಾತ್ಮನಲ್ಲಿ ಅರ್ಪಿಸುವುದರಿಂದ ಪ್ರಣವಃ (ಸ.ತಾ) ಓಂ ಎಂಬೀ ಅಕ್ಷರವು ಪರಮಾತ್ಮನಿಗೆ ಅತ್ಯಂತ ಸಮೀಪವಾಗಿರುವ ಹೆಸರು. ಏಕೆಂದರೆ ಅದನ್ನು ಪ್ರಯೋಗಿಸಿದರೆ (ತನ್ನ) ಪ್ರಿಯತಮನಾದ ನಾಮವನ್ನು ತೆಗೆದುಕೊಂಡು ಉಚ್ಚರಿ ಸಿದರೆ ಜನವು ಹೇಗೆ ಪ್ರಸನ್ನವಾಗುತ್ತದೆಯೋ ಹಾಗೆ ಅರ್ಚನೆಯೇ ಮುಂತಾದುವು ಗಳಿಂದ ಅರ್ಚನೆಗೆ (ಉಪಯೋಗಿಸುವ ಪ್ರತಿಮೆಯೇ ಮುಂತಾದುವುಗಳಂತೆ) ಪರ ಮಾತ್ಮನಿಗೆ ಪ್ರತೀಕವೆಂದಾಗುತ್ತದೆ. (ಛಾಂ. ಭಾ.) ಬ್ರಹ್ಮನ ಪ್ರತೀಕವಾದ ಓಂಕಾರ ವನ್ನೇ ಬ್ರಹ್ಮವೆಂದಿದೆ. 'ಓಂಕಾರೇಣ ಬ್ರಹ್ಮಣಾ ಪರಮಾತ್ಮನಃ ಪ್ರತೀಕ ಭೂತೇನ ಸರ್ವವಾಕ್ ಶಬ್ದಜಾತಂಸಂತೃಣ್ಣಾ (ಶಂ. ಭಾ.) ಪರಮಾತ್ಮನಿಗೆ ಪ್ರತೀಕವಾಗಿರುವ ಓಂಕಾರವೆಂಬ ಬ್ರಹ್ಮದಿಂದ ವಾಕ್ಕೆಲ್ಲವೂ, ಶಬ್ದಜಾತವೆಲ್ಲವೂ ಕೊರೆಯಲ್ಪಟ್ಟಿರುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗತ್ತಿನ ಸೃಷ್ಟಿಯಾಗಬೇಕಾದರೆ ಆಕಾಶದ ತನ್ಮಾತ್ರೆಗಳಲ್ಲಿ ಚಲನ ಆರಂಭವಾಗಬೇಕು. ಶಬ್ದವೇ ಆ ಚಲನೆಯನ್ನುಂಟುಮಾಡುತ್ತದೆ. ಸೃಷ್ಟಿಯ ಆದಿ ಶಬ್ದ ಓಂ ಎಂಬುದು.

ಓಂ ಎಂಬುದರಲ್ಲಿ ಮೂರು ಅಕ್ಷರಗಳಿವೆ. ಅ, ಉ, ಮ ಎಂದು. ಲೋಕದ ಎಲ್ಲ ಶಬ್ದಗಳೂ ನಮ್ಮ ಕಂಠದಲ್ಲಿ ಶಬ್ದಹೊರಡುವ ಅ ಮತ್ತು ತುಟಿಯ ಮ ಸ್ಥಾನಗಳ ನಡುವೆ ಹುಟ್ಟುತ್ತವೆ. ಅ ಹೇಳುವಾಗ ಬಾಯಿ ತೆರೆಯುತ್ತೇವೆ. ಉ ಹೇಳುವಾಗ ಬಾಯಿ ತೆರೆದಿರುತ್ತದೆ. ಮ ಹೇಳುವಾಗ ಮುಚ್ಚುತ್ತದೆ. ಆದ್ದರಿಂದ ಅ, ಉ, ಮ, ವು (ಓಂಕಾರವು) ಸರ್ವ ಶಬ್ದ ಸ್ವರೂಪಗಳನ್ನು ಅಳವಡಿಸಿದಂತಾಗುತ್ತದೆ. ಓಂಕಾರದ ಅವಯವವಾದ ಅ ಕಾರವೇ ಎಲ್ಲಾ ಶಬ್ದ ರೂಪಗಳಾಗಿರುವುದರಿಂದ ಓಂಕಾರವು ಸರ್ವ ಶಬ್ದರೂಪವಾಗಿದೆ, ಸಕಲ ವಾಙ್ಮಯ ಸ್ವರೂಪವಾಗಿದೆ.

ಓಂ ಎಂಬುದನ್ನು ಶ್ರುತಿ, ಸ್ಮೃತಿಗಳಲ್ಲಿ ಬಹಳವಾಗಿ ಹೊಗಳಿದೆ. ಸರ್ವೇವೇದಾ ಯತ್ಪದ ಮಾಮನಂತಿ ತಪಾಂಸಿ ಸರ್ವಾಣಿ ಚ ಯದ್ವದಂತಿ। ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇಪದಂ ಸಂಗ್ರಹೇಣ ಬ್ರವೀಮ್ಯೋಮಿತ್ಯೇ ತತ್ (ಕಠೋಪನಿಷತ್ತು.) (ಯಮನು ಅಂದದ್ದು) ಸಕಲ ವೇದಗಳೂ ಯಾವ ಪರಮ ಪದವನ್ನು ಪ್ರತಿವಾದಿಸುವುವೋ, ಯಾವ ಧ್ಯೇಯಕ್ಕಾಗಿ ಎಲ್ಲ ತಪಸ್ಸುಗಳೋ, ಯಾವುದನ್ನಿಚ್ಛಿಸುತ್ತಾ (ಸಾಧಕರು) ಬ್ರಹ್ಮಚರ್ಯ ವ್ರತವನ್ನು ಪಾಲಿಸುವರೋ ಆ ಪರಮಗತಿ ವಿಷಯವನ್ನು ನಾನು ಸಂಕ್ಷೇಪದಿಂದ ಹೇಳುವೆನು. "ಓಂ ಎಂಬುದೇ ಅದು" ಹೀಗೆ ತೈತ್ತರಿಯ, ಮಂಡಕ, ಛಾಂದೋಗ್ಯ, ಬೃಹದಾರಣ್ಯಕ ಮೊದಲಾದವುಗಳಲ್ಲೆಲ್ಲ ಹೇಳಿದೆ. ಓಂ ಎಂಬ ಶಬ್ದ ಹುಟ್ಟುವುದು. 'ಅವ್' ಎಂಬ ಧಾತುವಿನಿಂದ 'ಅವತಿ ಇತಿ ಓಂ' ರಕ್ಷಿಸುವುದು ಎಂದು ಅರ್ಥ [ಅವ್ ಎಂಬ ಧಾತುವಿನಿಂದ ೨೦ ಅರ್ಥಗಳು ನಿಷ್ಪನ್ನವಾಗುತ್ತವೆ] "ಅನಿಷೇಧೆ ಪುರ್ಮಾ ವಿಷ್ಣೌ" ಎಂಬ ನಿಘಂಟಿನ ಪ್ರಕಾರ ವಿಷ್ಣು ಎಂದು ತಾತ್ಪರ್ಯ. ಉ ಲಕ್ಷ್ಮೀವಾಚಕ. ಮ್-ಜ್ಞಾನಗುಣಾರ್ಥಕ. 'ಅಕಾರೇಣೋಚ್ಯತೇ ವಿಷ್ಣುಃ ಸರ್ವಲೋಕೇಶ್ವರೋ ಹರಿಃ। ಉಕಾರೇಣೋಚ್ಯತೇ ಲಕ್ಷ್ಮೀಃ ಮಕಾರೋ ದಾಸವಾಚಕಃ॥ ಪದ್ಮೋದ್ಭವ ಸಂಹಿತೇ॥

'ಪ್ರತಿಯೊಂದು ದೇಶಕ್ಕೂ ಒಂದು ರಾಷ್ಟ್ರಧ್ವಜವಿರುವುದು. ಅದನ್ನು ಆದರಿಸಿ ಗೌರವಿಸುವುದು ಅಲ್ಲಿನ ಎಲ್ಲ ಪ್ರಜೆಗಳಿಗೂ ಅನಿವಾರ್ಯ ಕರ್ತವ್ಯ. ಆ ಧ್ವಜವು ಆ ರಾಷ್ಟ್ರದ ಸಮಗ್ರ ಇತಿಹಾಸದ, ಸಕಲ ಶಕ್ತಿಯ ಪ್ರತೀಕ. ವೇಧಾನುಯಾಯಿಗೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾತ್ಮ ಪ್ರಪಂಚದಲ್ಲಿ, ಓಂ ಎಂಬುದು ಹಾಗೆ ಆ ಶಬ್ದವು ಕಿವಿಗೆ ಶ್ರುತವಾದ ಕೂಡಲೇ ಅವನಿಗೆ ತನ್ನ ಸಮಗ್ರ ಸಂಸ್ಕೃತಿಯು ಮೂರ್ತಿವತ್ತಾಗಿ ಎದುರಿಗೆ ನಿಂತಂತಾಗುವುದು. ಭಕ್ತಿ ಭಾವವು ಹೊರಹೊಮ್ಮುವುದು. ತರ್ಕ ಆ ಮೇಲೆ.

ವ್ಯಾಹೃತಿಃ ಓಂ ಭೂಃ, ಓಂ ಭುವಃ, ಓಂ ಸುವಃ, ಓಂ ಮಹಃ, ಓಂ ಜನಃ ಓಂ ತಪಃ, ಓಂ ಸತ್ಯಂ–ಇವು ಸಪ್ತ ವ್ಯಾಹೃತಿಗಳು "ಭೂಃ ಭುವಃ ಸುವಃ" ಈ ಮೂರನ್ನು ಮಹಾವ್ಯಾಹೃತಿಗಳೆನ್ನುತ್ತಾರೆ. 'ಭೂರ್ಭುವಃ ಸುವರಿತಿವಾ ಏತಾಸ್ತಿಸ್ರೋ ವ್ಯಾಹೃತಯಃ ! ಭೂರಿತಿವಾ ಆಯಂ ಲೋಕಃ। ಭುವ ಇತ್ಯನ್ತರಿಕ್ಷಂ । ಸುವರಿತ್ಯಸೌ ಲೋಕಃ ॥ ತೈ ॥

'ಏಳು ವ್ಯಾಹೃತಿಗಳೂ ಏಳು ಲೋಕಗಳನ್ನು ಸೂಚಿಸುತ್ತವೆ ಎಂದು ಪುರಾಣಗಳಲ್ಲಿ ಹೇಳಿದೆ. ಏಳು ವ್ಯಾಹೃತಿಗಳಿಗೆ ಅನುಕ್ರಮವಾಗಿ ವಿಶ್ವಾಮಿತ್ರ, ಜಮದಗ್ನಿ, ಭಾರದ್ವಾಜ, ಗೌತಮ, ಅತ್ರಿ, ವಸಿಷ್ಠ, ಕಶ್ಯಪ ಋಷಿಗಳು ಪ್ರತ್ಯೇಕ ಎಂದು ಕರೆಯಲಾಗಿದೆ.' (ಯಂ ಸಂ.)

ಅರ್ಥ: ಭೂಃ–ಭೂಲೋಕವು ಓಂಕಾರ ವಾಚ್ಯನಾದ ಪರಮಾತ್ಮ. ಹಾಗೆಯೇ ಭುವಃ, ಸುವಃ ಇತ್ಯಾದಿ ಇತರ ಆರು ಲೋಕಗಳೂ ಪರಮಾತ್ಮನೇ. ವ್ಯಾಹೃತಿ ಎಂದರೆ ವಿ ಆ ಹರ ವ್ಯಾಹಾರ ವ್ಯಾಹೃ ಎಂದರೆ ಹೇಳು, ನುಡಿ, ಮಾತನಾಡು ಎಂದು. ಸಾರ ರೂಪವಾಗಿ ಹಿಂಡಿ ತೆಗೆದ ರಸ ಎಂದು ಹೇಳುತ್ತಾರೆ. (ಇನ್ನೊಂದು ಆರ್ಥ) ಓಂ–ಗುಣಪೂರ್ಣನಾದ ಪರಮಾತ್ಮನು ಓಂಕಾರವಾಚ್ಯನು. ಭೂಃ–ಗುಣಪೂರ್ಣನು. ಭುವಃ–ನಿರವಧಿಕ ಐಶ್ವರ್ಯವಂತನು, ಸುವಃ-ಸುಖಸ್ವರೂಪನು, ವಃ–ಶ್ರೇಷ್ಠನಾಗಿ ಪೂಜಿಸಲ್ಪಡುವನು. ಜನಃ ಸೃಷ್ಟಿಕರ್ತನು, ತಪಃ ಜ್ಞಾನ–ಸ್ವರೂಪನು ಸತ್ಯಂ ಮುಕ್ತಾಮುಕ್ತ ನಿಯಾಮಕನು.

ಈ ಮಂತ್ರವನ್ನು ಹೇಳಿದರೆ ಸಪ್ತಲೋಕಗಳನ್ನು ಮತ್ತು ಅಲ್ಲಿರುವ ದೇವತೆಗಳನ್ನು ಸ್ಮರಿಸಿ, ನಮಸ್ಕರಿಸಿದಂತೆ ಆಗುವುದು. ಅವರ ಅನುಗ್ರಹ ಪ್ರಾಪ್ತವಾಗುವುದು–ಎಂಬುದು ಮುಖ್ಯಭಾವನೆ. ಭೂಲೋಕವೇ ಮೊದಲಾದ ಏಳು ಲೋಕಗಳೂ ಆ ಪರಬ್ರಹ್ಮನ ಸ್ವರೂಪವೇ ಹೊರತು ಬೇರೆಯಲ್ಲ ಎಂಬುದು ತಾತ್ಪರ್ಯ.

ಗಾಯತ್ರೀ ಶಿರಸ್ಸು : "ಓಮಾಪೋ ಜ್ಯೋತಿರಸೋ ಮೃತಂ ಬ್ರಹ್ಮ ಭೂರ್ಭುವಃ ಸುವರೋಂ". ಇದನ್ನು ಗಾಯತ್ರೀ ಶಿರಸ್ಸು ಎನ್ನುತ್ತಾರೆ. ಆಪಃ

Sri Vidyabharathi Book-Centre, Singeri

CC-O. In Public Domain. Digitized by eGangotri

ಈ ಮೂರು ಲೋಕಗಳೂ, ಅಮೃತಂ–ನಾಶರಹಿತವಾದ. ಓಂ–ಓಂಕಾರ ವಾಚ್ಯನಾದ ಬ್ರಹ್ಮ–ಬ್ರಹ್ಮತತ್ವವೇ (ಇನ್ನೊಂದು ಅರ್ಥ) ಆಪಃ–ಆಪಶ್ಯಬ್ದ ವಾಚ್ಯನಾದ ಪರಮಾತ್ಮನು. ಜ್ಯೋತಿಃ–ಪ್ರಕಾಶಸ್ವರೂಪ, ರಸಃ–ಸಾರಭೂತನು, ಸ್ವಃ–ಸುಖಸ್ವರೂಪನು, ಓಂ ಬ್ರಹ್ಮ–ಗುಣಪೂರ್ಣನಾದ ಪರಮಾತ್ಮನನ್ನು, ಧೀಮಹಿ-ಧ್ಯಾನ ಮಾಡುತ್ತೇವೆ. ತತ್ಸವಿತುಃ....ಪ್ರಚೋದಯಾತ್ ಯಃ-ಯಾವಾತನು, ನಃ–ನಮ್ಮ ಧಿಯಃ–ಬುದ್ಧಿಗಳನ್ನು, ಪ್ರಚೋದಯಾತ್ - ಪ್ರೇರೇಪಿಸುತ್ತಾನೆಯೋ ಅಂತಹ. ಸವಿತುಃ–ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಾದ, ದೇವಸ್ಯ-ಸರ್ವವ್ಯಾಪಕನೂ ಸರ್ವ ಪ್ರಕಾಶನೂ ಆದ ಪರಮಾತ್ಮನ, ವರೇಣ್ಯಂ–ಶ್ರೇಷ್ಠವಾದ, ತತ್ ಭರ್ಗಃ–ಆ ತೇಜಸ್ಸನ್ನು ಧೀಮಹಿ–ಧ್ಯಾನಮಾಡುತ್ತೇವೆ(ವಿಸ್ತೃತ ವಿಮರ್ಶೆ ಮುಂದಿನ ಅಧ್ಯಾಯದಲ್ಲಿದೆ).

ಸಂಕಲ್ಪ : ಸಂಕಲ್ಪವೆಂದರೆ "ಕಲ್ಪಯತಿ ವಾಂಛತಮಿತಿ ಕಲ್ಪಃ ' ಜಿನ್ನಾಗಿ ಬಯಸುವುದು. ಆಥವ ಕೋರುವುದು ಎಂದರ್ಥ. ' ಮಮಉಪಾತ್ತ ನನ್ನಿಂದ ಮಾಡಲ್ಪಟ್ಟ ಸಕಲವಾದ ಪಾಪಗಳನ್ನು ನಾಶಗೊಳಿಸುವುದರ ಮೂಲಕ ಪರಮೇಶ್ವರನಿಗೆ ಪ್ರೀತಿಯಾಗಲು ಈ ಸಂಧ್ಯಾ ಮಾಡುತ್ತೇನೆ " ಎಂದು ನಿಷ್ಕಾಮ ಪ್ರಾರ್ಥನೆ. ನಮ್ಮ ವ್ಯಾಪಾರಗಳೆಲ್ಲಾ ನಾವು ಮಾಡುವ ಸಂಕಲ್ಪದಿಂದಲೇ. ಸಂಕಲ್ಪಮಾತ್ರದಿಂದಲೇ ಜಗದ್ವ್ಯಾಪಾರದ ವಿಳಾಸವು. "ಸಂಕಲ್ಪ ಮಾತ್ರ ಕಲನೇ ಹಿ ಜಗದ್ವಿಲಾಸಃ" ಸಾಮನಸಾ ಧ್ಯಾಯೇದ್, ಯದ್ವಾ ಅಹಂ ಕಿಂಚನ ಮನಸ್ಯಾಧ್ಯಾಸ್ಯಾಮಿ ತಧೈತದ್ ಭವಿಷ್ಯತಿ । ತದ್ಧಸಾ ತಥೈವ ಭವತಿ ॥ ಗೋಪಥಬ್ರಾಂ ॥ ತಾನು ಮಾಡಬೇಕೆಂದಿರುವ ಕಾರ್ಯಕ್ಕೆ ಧೃಢ ಆದರೂ, ನಮ್ರತೆಯ ಪ್ರತಿಜ್ಞೆ ಮಾಡುವುದಕ್ಕೆ 'ಸಂಕಲ್ಪ' ಎಂದು ಹೆಸರು. ಸಂಧ್ಯಾ ಕರ್ಮದಲ್ಲಿ ಗಾಯತ್ರೀ ಜಪಮಾಡುವವರೆಗೆ ಮೂರು ನಾಲ್ಕಾವರ್ತಿ ಬರುವ ಪ್ರಾಣಾಯಾಮ. ಸಂಕಲ್ಪಗಳಿಂದ ಮನಶ್ಯಕ್ತಿಯನ್ನು ಉದ್ಭೋಧ ಮಾಡಿದಂತಾಗುವುದು. ಕೈಗಳನ್ನು ಜೋಡಿಸಿ ಬಲ ತೊಡೆಯ ಮೇಲಿಟ್ಟು ಸಂಕಲ್ಪಿಸಬೇಕು. (ಸದರ್ಭಹಸ್ತಾ ಜಾನೂರ್ಧ್ವಾದಕ್ಷಿಣೇ ದಕ್ಷಿಣೋತ್ತರಾ ಕೃತ್ವಾ ಜಾನುನಿ ಕರ್ತವ್ಯ ಮೇತತ್ಕರ್ಮ ಕರೋಮಿಯತ್ ॥ ಸ್ವಮಾನಸೇನಸ್ಮರಣಂ ತತ್ಸಂಕಲ್ಪ ಇತಿ ಸ್ಮೃತಃ ॥ ಭಾರದ್ವಾಜ ॥

ಆಸನ: ಸಂಧ್ಯೋಪಾಸನೆಯಲ್ಲಿ ಆಸನವು ಒಂದು ಮುಖ್ಯವಾದ ಅಂಶವಾಗಿದೆ. ಮಾಡುವಲ್ಲಿ ಹಿಂದು ಸಾಧನ ಅವಶ್ಯಕ. ಮಂತ್ರ ಜಪಿಸುವಾಗ ನಮಗೂ ಭೂಮಿಗೂ

CC-O. Vasanthakumar Research Centre, Vyasabhyasam Book Centre, Sringeri

CC-O. In Public Domain. Digitized by eGangotri

ಮತ್ತು ವೃತ್ತಿಗಳನ್ನು ಏಕಾಗ್ರಮಾಡುವ ಸಮಯದಲ್ಲಿ ಶರೀರದ ಒಳಗೆ ಒಂದು ವಿಧವಾದ ವಿದ್ಯುತ್ ಶಕ್ತಿ ಆವಿರ್ಭೂತವಾಗುವುದು. ಶರೀರ ಮತ್ತು ಪೃಥ್ವೀ ಮಧ್ಯದಲ್ಲಿ ಆಸನವಿಲ್ಲದಿದ್ದರೆ ಆ ವಿದ್ಯುತ್ ಶಕ್ತಿ ಭೂಮಿಯ ಆಕರ್ಷಣ ಶಕ್ತಿಯಿಂದ ಸೆಳೆಯಲ್ಪಡುವುದು ಮತ್ತು ಅದರಿಂದ ಶರೀರ ಮನಸ್ಸು ಸ್ವಾಸ್ಥ್ಯವೂ ಕೆಡಬಹುದು

ಯಾವೊಂದು ಸ್ಥಳವನ್ನು ಸಾರ್ವಕಾಲಿಕವಾಗಿಯೂ ಪರಿಶುದ್ಧವೆನ್ನಲಾಗುವುದಿಲ್ಲ. ಆದುದರಿಂದಲೇ ಪ್ರತಿಯೊಂದು ಸಂದರ್ಭದಲ್ಲೂ ಈ ಸಂಸ್ಕಾರವನ್ನು ಮಾಡಿಕೊಳ್ಳುತ್ತಿರಬೇಕು.

ಮಾರ್ಜನೆ : ಆಪೋಹಿಷ್ಠಾ....ಜನಯಥಾಚನಃ ಇದು ಮಾರ್ಜನೆ ಮಂತ್ರ ಒಂದು ಉದ್ಧರಣೆ ನೀರನ್ನು ಎಡಗೈನಲ್ಲಿ ಹಿಡಿದುಕೊಂಡು 'ಆಪೋಹಿಷ್ಟಾಂ..... ಮಂತ್ರವನ್ನು ಪಠಿಸುತ್ತಾ ಬಲಗೈ ಅನಾಮಿಕ ಬೆರಳಿನಿಂದ ಒಂದೊಂದು ಋಕ್ಕಿಗಾಗಲಿ ತರುವಾಯ ಒಂದೊಂದು ಪಾದಕ್ಕಾಗಲಿ ಪ್ರೋಕ್ಷಿಸಿಕೊಂಡು ಮಿಕ್ಕ ನೀರನ್ನು ಕೈಯಲ್ಲಿ ಹಾಕಿಕೊಂಡು ತಲೆಗೆ ಪ್ರದಕ್ಷಿಣವಾಗಿ ಸುತ್ತಿ ಜೆಲ್ಲುಬೇಕು. ಮಾರ್ಜನೆ ಎಂಬುದು ಮೃಜ್ ಧಾತುವಿನಿಂದ ಹುಟ್ಟಿದೆ. ಸ್ವಚ್ಛಮಾಡು. ಶುದ್ಧಮಾಡು ಎಂದರ್ಥ. 'ಶನ್ನ ಆಪಸ್ತು ದ್ರುಪದಾ ಆಪೋಹಿಷ್ಠಾಘರ್ಷಣಂ। ಏತೈಶ್ಚ ಪಂಚಭಿರ್ಮಂತ್ರೈಃ ಮಂತ್ರ ಸ್ನಾನಮುದಾತವಮ್॥ ಯೋಗ ಯಾಜ್ಞವಲ್ಕ್ಯ॥ ವೇದ ಮಾರ್ಗದಲ್ಲಿ ಪರಿಶುದ್ಧತೆಗೆ ಹೆಚ್ಚಿನ ಸ್ಥಾನವಿದೆ. ಆದುದರಿಂದಲೇ ಸಂಧ್ಯಾವಂದನೆಯಲ್ಲಿ ವಿಷ್ಣು ಸ್ಮರಣೆ, ಮಾರ್ಜನೆ, ಮಂತ್ರಾಚಮನ ಇವೆಲ್ಲ ಇವೆ. ಮಾರ್ಜನ ಎಂದರೆ ಜೊಕ್ಕಟ ಮಾಡುವುದು. ಶುದ್ಧಮಾಡುವುದು. ಸ್ನಾನಮಾಡುವುದರಿಂದ ಶರೀರದ ಬಾಹ್ಯ ಶುದ್ಧಿಯಾಗುವುದು, ಮಾರ್ಜನೆ ಮಂತ್ರದಿಂದ ಅದರಲ್ಲಿ ಪವಿತ್ರತೆ ತುಂಬುವುದು. ಆಚಮನದಿಂದ ಅಂತಃ ಶುದ್ಧಿಯೂ ಸಾಧಿತವಾಗುವುದು. ಮಾರ್ಜನದ್ವಾರಾ ರಕ್ತದ ಒತ್ತಡ ಕಡಿಮೆಯಾಗುವುದು. "ಶೌಂಚಂ ತು ದ್ವಿವಿಧಂ ಪ್ರೋಕ್ತಂ ಬಾಹ್ಯ ಮಾಭ್ಯಂತರಂ ತಥಾ" 'ಆಪೋಹಿಷ್ಠಾ .... ಆರಂಗಮಾಮವಃ' ವರೆಗೆ ಶಿರಸ್ಸಿಗೂ 'ಯಸ್ಯಕ್ಷಯಾಯ' ದಿಂದ ಭೂಮಿಗೂ 'ಆಪೋ ಜನಯಥಾಚನಃ' ಶಿರಸ್ಸಿಗೂ ಪ್ರೋಕ್ಷಿಸಬೇಕು. 'ಆಪ್ಲೃವ್ಯಾಪ್ತೌ' ಎಂಬ ಧಾತುವಿನಿಂದ ಆಪಃ ನಿಷ್ಪನ್ನವಾಗಿದೆ ನೀರು ಹರಡಿಕೊಳ್ಳುವ ಸ್ವಭಾವದ್ದು. ಸುಖ, ಶಾಂತಿ ಆರೋಗ್ಯವರ್ಧಿಸುವ ಶಕ್ತಿ ಇದಕ್ಕಿದೆ. ಇಂದ್ರನು ತನ್ನ ಪುರೋಹಿತನಾದ ವಿಶ್ವರೂಪನೆಂಬುವನನ್ನು ಕೊಂದವ್ದರಿಂದ ಬಂದ [illegible] ಕೊಳ್ಳಲು ಈ ಮಂತ್ರಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಪಠಿಸಿ, ಪುನೀತನಾದನೆಂದು 'ಬೃಹದ್ದೇವತೆ' ಯಲ್ಲಿಯೂ 'ಋಗ್ವಿಧಾನ'ದಲ್ಲಿಯೂ ಉಲ್ಲೇಖವಿದೆ. ಜಲಾಧಿ ದೇವತೆಗಳು ಸುವೃಷ್ಟಿಯಿಂದ ಸಸ್ಯಾಭಿವೃದ್ಧಿಯನ್ನುಂಟುಮಾಡಿ ಅಂತಹ ಸಸ್ಯ ಸಮೃದ್ಧಿಯಿಂದಲೂ ಜಲಪಾನದಿಂದಲೂ ಹೊಂದಬಹುದಾದ ಅನ್ನವನ್ನು ಕೊಡಲೆಂದು ಪ್ರಾರ್ಥನೆಯು ಸರ್ವ ಪ್ರಾಣಿಗಳಿಗೂ ಹಿತವನ್ನು ಕೋರುವ ಪ್ರಾರ್ಥನೆಯಾಗಿದೆ.

ಮುಂತ್ರಾಚಮನ: 'ಸೂರ್ಯಶ್ಚ ಮಾ ಮನುಶ್ಚ ಇತ್ಯಾದಿ ಒಂದು ಉದ್ಧರಣೆ ನೀರನ್ನು ಬಲಗೈಗೆ ಹಾಕಿಕೊಂಡು ಈ ಮಂತ್ರ ಪಠಿಸಿ ಮುಗಿದ ಮೇಲೆ ಕುಡಿಯಬೇಕು, ಮಾರ್ಜನೆಯಿಂದ ಬಾಹ್ಯ ಶುದ್ಧಿ ಪಡೆದರೆ ಮಂತ್ರಾಚಮನದಿಂದ ಅಂತಶ್ಶುದ್ಧಿಯನ್ನು ಪಡೆಯುತ್ತೇವೆ ಮಂತ್ರದ ತಾತ್ಪರ್ಯವೇ ಅಮೋಘವಾಗಿದೆ. 'ಸೂರ್ಯಶ್ಚ....ಸ್ವಾಹಾ' ಅರ್ಥ—ಸೂರ್ಯನೂ ಕ್ರೋಧ ಮತ್ತು ಆದಕ್ಕೆ ಕಾರಣನಾದ ಕಾಮ ಮುಂತಾದುವೂ ಪಾಪಗಳ ದೆಸೆಯಿಂದ ನಮ್ಮನ್ನು ಕಾಪಾಡಲಿ. ರಾತ್ರಿ ನೇಳೆಯಲ್ಲಿ ಮನಸ್ಸು, ಮಾತು, ಕೈಗಳು ಕಾಲುಗಳು, ಹೊಟ್ಟೆ ಜನನೇಂದ್ರಿಯಗಳಿಂದ ನಾನು ಯಾವ ಪಾಪಗಳನ್ನು ಮಾಡಿದ್ದೆನೋ ಅವನ್ನೆಲ್ಲ ರಾತ್ರಿಯೇ ಕಳೆದು ಬಿಡಲಿ. ಹಾಗೂ ಏನಾದರೂ ಪಾಪ ಉಳಿದಿದ್ದರೆ, ಅದರ ವಿನಾಶಕ್ಕಾಗಿ, ಅಮೃತಕ್ಕೆ ಮೂಲ ಕಾರಣನಾದ ಸೂರ್ಯನೆಂಬ ತೇಜೋರೂಪಿಯಾದ ಪರಮಾತ್ಮನಲ್ಲಿ ಈ ಜಲಬಿಂದುವನ್ನು ಆಹುತಿಯಾಗಿ ಸಮರ್ಪಿಸುತ್ತೇನೆ. ಸಂಜೆಯಲ್ಲಿ ಅಗ್ನಿಗೆ, ಮಧ್ಯಾಹ್ನದ ಮಂತ್ರದಲ್ಲಿ ಇನ್ನೂ ಒಂದು. ಒಂದು ವೈಶಿಷ್ಟ್ಯ ಪಾಪದ ಪಟ್ಟಿಯಲ್ಲಿ 'ಅಸತಾಂಚ ಪ್ರತಿಗ್ರಹ' ಅಸತ್ಪುರುಷರಿಂದ ಏನನ್ನಾದರು ಸ್ವೀಕರಿಸಿದ್ದರೆ ಅರ್ಥಾತ್ ಪಾಪ ದ್ರವ್ಯವನ್ನು ಪಡೆದಿದ್ದರೆ ಎಂದು. ಎಂತಹ ಆದರ್ಶ! ಇದನ್ನು ದಿನಕ್ಕೆ ಮೂರು ಸಾರಿಯಾದರೂ ಜ್ಞಾಪಿಸಿಕೊಳ್ಳುತ್ತಿದ್ದರೆ ಆ ಮನಸ್ಸಿನ ಪವಿತ್ರತೆ ಹೇಗಿರುತ್ತದೆ! ಸಂಧ್ಯಾವಂದನೆಯಲ್ಲ ಪರಮಾತ್ಮನೊಬ್ಬನನ್ನು ಮಾತ್ರ ಪ್ರಾರ್ಥಿಸದೆ ಸೂರ್ಯ ಅಗ್ನಿ, ವರುಣ, ವಾಯು ಮುಂತಾದ ಅನೇಕ ದೇವತೆಗಳನ್ನೂ ಈಗ ಪ್ರಾರ್ಥಿಸುತ್ತಿದ್ದೇವೆ-ಏಕೆ? ಕಾರಣ ಇಷ್ಟೆ! ನಮ್ಮ ಶರೀರವು "ಶರೀರಂ ಪಾಂಚಭೌತಿಕಂ" ಆದುದರಿಂದ ಪಂಚಭೂತಗಳ ಅಭಿಮಾನಿ ದೇವತೆಗಳ ಅನುಗ್ರಹವೂ ನಮಗೆ ಅವಶ್ಯಕ.

ಮಾರ್ಜನೆ ಮತ್ತು ಮಂತ್ರಾಚಮನಗಳಲ್ಲಿ ಕೆಲವರು ಮಂತ್ರಾಚಮನವನ್ನು ಮೊದಲು ಹೇಳಿ ಮಾರ್ಜನವನ್ನು ನಂತರ ಮಾಡುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಿತೀಯ ಮಾರ್ಜನೆ: (ಋಗ್ವೇದಿಗಳು) ಆಪೋಹಿಷ್ಠಾ..... ಶಂನೋದೇವಿ ರವಸೇ ಹುವೇ. (ಯಜು.) ದಧಿಕ್ರಾವ್ಣೋ.....ಹಿರಣ್ಮಯವರ್ಣಾ ....ನಿಧತ್ತ.

ಅಘಮರ್ಷಣ (ಪಾಪ ಪುರುಷ ವಿಸರ್ಜನೆ (ಋ .ವೇ.) ಋತಂ ಚ ಸತ್ಯಂ ಚ (ಯ. ವೇ.) 'ದ್ರುಪದಾದಿವ' ಅಘಮರ್ಷಣೆ ಎಂದರೆ (ಅಘ) ಪಾಪವನ್ನು (ಮರ್ಷಣ) ಸಹಿಸುವುದು. (ಮೃಷ್–ಸಹನೇ) ಅಘಮರ್ಷಣ ಸೂಕ್ತವು ಅಶ್ವಮೇಧ ಯಾಗಕ್ಕೆ ಸಮಾನವಾಗಿದೆ. ಯಥಾಶ್ವಮೇಧಃ ಕೃತು ರಾಟ್ ಸರ್ವಪಾಪನೋದನಃ (ಲಘುವ್ಯಾಸ ಸ್ಮೃತಿ) ಕೈಯಲ್ಲಿರುವ ಜಲವನ್ನು ಮೂಗಿನವರೆಗೆ ಎತ್ತಿ, ಮಂತ್ರವನ್ನು ಉಚ್ಚರಿಸಿ, ಆಘ್ರಾಣಿಸಿ ಎಡಕ್ಕೆ ಚೆಲ್ಲಬೇಕು. ಅದನ್ನು ನೋಡಬಾರದು. ತೃಜ್ವಲಂ ನಾऽವಲೋಕ್ಯಾಥವಾಮಭಾಗೇ ಕ್ಷಿತೌಕ್ಷಿಪೇತ್(ಆಚಾರಮಯೂಖ).

ಪಾಪ ಪುರುಷನನ್ನು ತನ್ನ ಉಸುರಿನ ಮುಖಾಂತರ ಹೊರತಂದು ಈ ಜಲದಲ್ಲಿ ಬಂಧಿಸಿ, ತನ್ನ ಎಡ ಪಾರ್ಶ್ವದಲ್ಲಿ ನೀರನ್ನು ಬಿಡಬೇಕು. ವಾಮ ಪಾರ್ಶ್ವದಲ್ಲಿ ವಜ್ರ ಶಿಲೆ ಇದೆಯೆಂದು ಭಾವಿಸಿ, ಈ ನೀರನ್ನು ಆ ಶಿಲೆಯ ಮೇಲೆ ಎತ್ತಿಹಾಕುವುದರಿಂದ ಆ ಪಾಪ ಪುರುಷನು ನುಚ್ಚು ನೂರಾಗುತ್ತಾನೆಂದು ಕಲ್ಪನೆ ಮಾಡಿಕೊಳ್ಳಬೇಕು.

ಅರ್ಘ್ಯ ಪ್ರದಾನ: (ಅರ್ಘ್ಯ ಪ್ರದಾನದಲ್ಲಿ ಒಂಬೇ ಪ್ರಾಣಾಯಾಮವನ್ನು ಹೇಳಿದೆ.) 'ಸಂಧ್ಯಾಯಾಮರ್ಘ್ಯದಾನೇಚ ಪ್ರಾಣಾಯಾಮೈಕಃ ಉಚ್ಯತೇ').

ಅನೇಕ ಬಗೆಯಲ್ಲಿ ನಮಗೆಲ್ಲ ಉಪಕಾರ ಮಾಡುತ್ತಿರುವ ಸೂರ್ಯ ದೇವನಿಗೆ ನಮ್ಮ ಕೃತಜ್ಞತೆಯನ್ನು ಸೂಚಿಸುವ ಚಿಹ್ನೆ ಇದು. ಅರ್ಘ್ಯವನ್ನು ಕೊಡುವುದು 'ಉತ್ತಮವಾದ ದಾನ' ಎಂದು ವೇದದಲ್ಲಿ ಹೇಳಿದೆ. ಆದುದರಿಂದಲೇ ಇದಕ್ಕೆ ಅರ್ಘ್ಯ 'ಪ್ರದಾನ' ಎಂದಿರುವುದು. ಮೂರಾವರ್ತಿ ಅರ್ಘ್ಯಕೊಡುವುದಕ್ಕೆ ಕಾರಣ ನಮ್ಮಲ್ಲಿರುವ ಮಲಿನ ಸತ್ವ, ರಾಜಸ ಮತ್ತು ತಾಮಸ ಗುಣಗಳನ್ನು ಗೆಲ್ಲುವುದಕ್ಕಾಗಿ. ಪ್ರಾತಃಕಾಲದಲ್ಲಿ ಸ್ವಲ್ಪ ಬಗ್ಗಿ, ಮಧ್ಯಾಹ್ನದಲ್ಲಿ ನೆಟ್ಟಗೆ ನಿಂತು ನೀರಿನಲ್ಲಿ ಅರ್ಘ್ಯ ಬಿಡಬೇಕು. ಸಾಯಂಕಾಲದಲ್ಲಿ ಕುಳಿತು ಭೂಮಿಯ ಮೇಲೆ ಅರ್ಘ್ಯಜಲಬಿಡಬೇಕು (ತೈ. ಸಂ ಭಾಷ್ಯ) ಸಾಯಂಕಾಲದಲ್ಲಿ ಅರ್ಘ್ಯಜಲ ನೀರಿನಲ್ಲಿ ಬಿಡುವುದರಿಂದ ರೌರವ ನರಕವಾಗುವುದು. ಮೂರು ಅರ್ಘ್ಯದಿಂದ "ಏಕಂ ಶಸ್ತ್ರಾಸ್ತ್ರನಾಶಾಯ. ಏಕಂ ವಾಹನ ನಾಶನೇ ಅಸುರಾಣಾಂ ವಧಾಯೈಕಂ ದದಾರ್ಘ್ಯತ್ರಯಂ ಶುಚಿಃ|| ಪ್ರಾತಃ ಮತ್ತು ಸಾಯಂಕಾಲದಲ್ಲಿ ಮೂರು ಅರ್ಘ್ಯ ಹೇಳಿದೆ. ಈ ವ್ಯತ್ಯಾಸಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂರ್ಯನಿಗೂ, ಭೂಮಿಗೂ ಆ ಕಾಲಗಳಲ್ಲಿರುವ ದೂರದ ಅಂತರವೇ ಕಾರಣ. ಕೆಲವರು. (ಪೈಖಾಸನರು) ಅರ್ಘ್ಯಪ್ರದಾನಕ್ಕೂ ಹೃದಯ ನ್ಯಾಸವನ್ನು ಹೇಳುತ್ತಾರೆ, ಅದಾದ ಮೇಲೆ 'ದ್ರುಪದಾದಿವ' ಹೇಳಿದನಂತರ ಅರ್ಘ್ಯಕೊಡುತ್ತಾರೆ. ಉಪಸಂಹಾರಕ್ಕೂ ಋಷಿ, ದೇವತಾ, ಛಂದಸ್ಸುಗಳನ್ನು ಹೇಳುತ್ತಾರೆ.

ತರ್ಪಣ: ಅರ್ಘ್ಯವಾದ ಮೇಲೆ ಕೇಶವಾದಿ, ಆದಿತ್ಯಾದಿ ತರ್ಪಣ. 'ನಮ್ಮ ಪೂರ್ವಜರ ಬಗೆಗೆ ಕೃತಜ್ಞತೆ ಸಮರ್ಪಿಸುವುದರಲ್ಲಿ ನಮ್ಮ ಹೃದಯ ಹೂ ಆದರೆ, ಪ್ರೇಮ ಮಧು ಊರಿಬಂದರೆ, ಕಣ್ಣು ಸಜಲವಾದರೆ , ಮನಸ್ಸು ಮೃದುವಾದರೆ ಇವೆಲ್ಲದರ ಸೂಚಕವಾಗಿ ಜಲವೀಯುವುದೇ ತರ್ಪಣ" ತರ್ಪಣವನ್ನು ದೇವತೆಗಳಿಗೆ ಕೊಡುವಾಗ ಉಪವೀತ ಹಾಕಿಕೊಂಡು, ಪಿತೃಗಳಿಗೆ ಪ್ರಾಚಾನಾವೀತಿಯಾಗಿ, ಋಷಿಗಳಿಗೆ ಕೊಡಬೇಕು. (ಯ. ಸಂ.)

ಗಾಯತ್ರೀ ಜಪ

ಸಂಧ್ಯೋಪಾಸನೆಯಲ್ಲಿ ಗಾಯತ್ರೀ ಜಪವೇ ಒಂದು ಮುಖ್ಯ ಭಾಗ.

ಇದುವರೆಗೂ ಗಾಯತ್ರೀ ದೇವತೆಯ ಉಪಾಸನೆಗೆ ಅರ್ಹತೆಯನ್ನು ಒದಗಿಸಿ ಕೊಡುವ ಅಂಗಕರ್ಮಗಳನ್ನು ಗೈದು, ಸಿದ್ಧತೆ ಮಾಡಿಕೊಂಡಾಯಿತು. ಆದನ್ನು ಆಚರಿಸಿದ ಅನಂತರವೇ ಗಾಯತ್ರೀ ದೇವಿಯನ್ನು ಉಪಾಸನೆ ಮಾಡುವ ಅಧಿಕಾರ ಉಂಟಾಗುವುದು. ಇನ್ನು ನೇರವಾಗಿ ಗಾಯತ್ರೀ ಆರಾಧನೆ, ಅಂಗನ್ಯಾಸ, ಕರನ್ಯಾಸ ಆವಾಹನೆ ,ಧ್ಯಾನ ಎಲ್ಲ ಆದಕ್ಕಾಗಿಯೇ ' ಆಪಸರ್ಪಂತು ' ಮೊದಲಾದ ಮಂತ್ರಗಳಿಂದ ಭೂಶುದ್ಧಿ, ದಿಕ್ ಶುದ್ಧಿಯನ್ನು ಮಾಡಿಕೊಳ್ಳುವುದು. ' ಉತ್ತಿಷ್ಠದೇವಿ ಗಂತವ್ಯಂ ' ' ಆಯಾತು ವರದಾದೇವಿ ' ಮೊದಲಾದುವುಗಳಿಂದ ಗಾಯತ್ರೀ ದೇವಿಯನ್ನು ಬರ ಮಾಡಿಕೊಂಡು ಹೃದಯದಲ್ಲಿ ಪ್ರತಿಷ್ಠಿಸಿಕೊಳ್ಳುವುದು (ಆಯಾತ್ವಿತ್ಯನುವಾಕ್ಕೇನ ಹೃದಯೇ ವಾರ್ಕಮಂಡಲೇ, ದೇವೀಂ ಗಾಯತ್ರೀಂ ತತೋಧ್ಯಾಯೇದ್ದ್ವಿಜೋತ್ತಮಃ)

ಗಾಯತ್ರೀ ಜಪ : ಗಾಯತ್ರೀ ಜಪವನ್ನು ಕೆಲವು ಪಾಠಗಳಲ್ಲಿ ಉಪಸ್ಥಾನವಾದ ಮೇಲೆ, ಇನ್ನು ಕೆಲವುಗಳಲ್ಲಿ ಉಪಸ್ಥಾನಕ್ಕೆ ಮುಂಚೆ ಸೂಚಿಸಿದೆ. (ಅವರವರ ಸಂಪ್ರದಾಯದಂತೆ) ಬ್ರಹ್ಮಚಾರೀ ಮತ್ತು ಗೃಹಸ್ಥರು ೧೦೮ ಬಾರಿ, ವಾನಪ್ರಸ್ಥ, ಹಾಗೂ ಸಂನ್ಯಾಸಿಗಳು ೧೦೦೦ ಬಾರಿ ಜಪಮಾಡಬೇಕು ಎಂದು ಮನುವು (ಬ್ರಹ್ಮಚಾರೀ ಗೃಹಸ್ಥಶ್ಚ ಶತಮಷ್ಟೋತ್ತರಂ ಜಪೇತ್ | ವಾನಪ್ರಸ್ಥಶ್ಚ ಸನ್ಯಸ್ತೋ ದ್ವಿ ಸಹಸ್ರಾಧಿಕಂ ಜಪೇತ್) ಮನು ಜಪವನ್ನು ಮಾಡುವಾಗ ಎಣಿಕೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಶ್ಯ ಇಟ್ಟುಕೊಳ್ಳಬೇಕು. ಹಾಗಲ್ಲದ ಜಪವು ಅಸುರ ಜಪವೆಂದು ಕರೆಯಲ್ಪಡುವುದು. (ಅಸಂಖ್ಯಮಸುರಂ ಯಸ್ಮಾತ್ತಸ್ಮಾತ್ತದ್ ಗಣಯೇದ್ಧ್ರುವಮ್ ಬೃ.ಪಂ.ಸ.)

ಜಪಕಾಲದಲ್ಲಿ ಗಾಯತ್ರಿಯ ಆದಿ ಮತ್ತು ಅಂತ್ಯದಲ್ಲಿಯೂ ಪ್ರಣವವನ್ನು ಸೇರಿಸಬೇಕು. (ಓಂಕಾರಪೂರ್ವಮುಚ್ಚಾರ್ಯ ಭೂರ್ಭುವಃ ಸ್ವಸ್ತತಃ ಪರಮ್ । ಗಾಯತ್ರೀಂ ಪ್ರಣವಂ ಚಾನ್ತೇ ಜಪ್ಯಂ ಹ್ಯೇವ ಮುದಾಹೃತಮ್ (ಯೋಗೀ ಯಾಜ್ಞವಲ್ಕ್ಯ) ಹರಿಹರ ಮೊದಲಾದ ಭಾಷ್ಯಕಾರರೂ ಅಂತ್ಯದಲ್ಲಿಯೂ ಪ್ರಣವವನ್ನು ಸಮರ್ಥಿಸಿದ್ದಾರೆ. ಶ್ರೀ ವೀರ ಮಿತ್ರೋದಯನು ತನ್ನ ಆಹ್ನಿಕ ಪ್ರಕಾಶದಲ್ಲಿ ಆದ್ಯಂತಿಕ ಪ್ರಣವವೇ ಸಿದ್ಧಾಂತವೆಂದಿದ್ದಾರೆ. ಆದರೆ "ಗೃಹಸ್ಥೋಬ್ರಹ್ಮಚಾರೀಚ ಪ್ರಣವಾ ದ್ಯಾಮಿ ಮಾಂ ಜಪೇತ್। ಅಂತೇಯಃ ಪ್ರಣವಂ ಕುರ್ಯಾನ್ನಾಸೌವೃದ್ಧಿಮವಾಪ್ನು ಯಾತ್ ॥ಚಂದ್ರಿಕಾ ॥ ಮುಂತಾದ ವಚನಗಳಿಂದ ಗೃಹಸ್ಥ ಮತ್ತು ಬ್ರಹ್ಮಚಾರಿಗಳಿಗೆ ಆದಿ ಪ್ರಣವ ಗಾಯತ್ರಿಯನ್ನೇ ಕೆಲವರು ಅಂಗೀಕರಿಸುತ್ತಾರೆ. ಈ ಪದ್ಧತಿಯೇ ಬಹುವಾಗಿ ಈಗ ಪ್ರಾಚುರ್ಯದಲ್ಲಿರುತ್ತದೆ ಆದರೂ 'ನಿತ್ಯಕರ್ಮ ಪ್ರಯೋಗ' ಕಾರರೇನೋ ಜಪದಲ್ಲಿ ಆದ್ಯಂತಿಕ ಪ್ರಣವವೇ ಸರಿಯೆಂದೂ' ಬೇರೆ ಸ್ಥಳಗಳಲ್ಲಿ ಬಳಸುವಾಗ ಆದಿ ಪ್ರಣವವನ್ನು ಹೇಳಬಹುದೆಂದೂ ತಿಳಿಸಿದ್ದಾರೆ.

ಗಾಯತ್ರೀ ಜಪವಿಧಾನ

ಸೂರ್ಯನಿಗೆ ಅಭಿಮುಖವಾಗಿ ನಿಂತು ಅಥವಾ ಕುಳಿತು ದರ್ಭೆಯ ಪವಿತ್ರವನ್ನು ಇಟ್ಟುಕೊಂಡು, ಅಕ್ಷರಮಾಲೆಯಿಂದ ಆಯಾಯದೇವತೆಗಳನ್ನು ಧ್ಯಾನ ಮಾಡುತ್ತಾ ಜಪವನ್ನು ಮಾಡಬೇಕು. ಜಪವು ೩ ವಿಧ. ವಾಚಿಕೆ, ಉಪಾಂಶು ಮತ್ತು ಮಾನಸಿಕ ಎಂದು. ಉದಾತ್ತ, ಅನುದಾತ್ತ, ಸ್ವರಿತ, ಪದ ಅಕ್ಷರ ಹಾಗೂ ಶಬ್ದಗಳ ಸ್ಪಷ್ಟತೆಗೆ ಗಮನವೀಯುತ್ತಾ ಇತರರಿಗೆ ಕೇಳುವಂತೆ ಉಚ್ಚರಿಸುವುದು ವಾಚಕ. ಇತರರಿಗೆ ಕೇಳಿಸದಂತೆ ಸ್ವಲ್ಪ ಸ್ವಲ್ಪವಾಗಿ ತುಟಿಯನ್ನು ಅಲ್ಲಾಡಿಸುತ್ತಾ ಸೂಕ್ಷ್ಮವಾಗಿ ಉಚ್ಚಾರ ಮಾಡುವ ಜಪವು ಉಪಾಂಶು. ಮನಃಪೂರ್ವಕ್ಕಾಗಿ ಮಂತ್ರಗಳ ವರ್ಣ, ಶಬ್ದ ಮತ್ತು ಅರ್ಥವನ್ನು ಚಿಂತನ ಮಾಡುತ್ತಾ ಮನಸ್ಸಿನಲ್ಲಿ ಮಾಡುವ ಜಪವನ್ನು ಮಾನಸ ಜಪವೆಂದು ಹೇಳುತ್ತಾರೆ.

ನ್ಯಾಸ: ನ್ಯಾಸವೆಂದರೆ ಬಚ್ಚಿಡುವುದು, ತ್ಯಾಗಮಾಡುವುದು ಎಂದರ್ಥ. ಹಸ್ತದಲ್ಲಿ ಸಕಲ ದೇವತಾ ಶಕ್ತಿಗಳೂ ಅಡಗಿರುವುವೆಂಬುದೇ ತಾತ್ಪರ್ಯ. ಆದರಿಂದಲೇ ದೇವರಿಗೆ 'ವರದಹಸ್ತ' ಕಲ್ಪಿಸಿದ್ದಾರೆ. ಹಸ್ತಗಳು ಹೆಚ್ಚಾಗಿರುತ್ತವೆ

CC-O. Vasishtha Tapasvi Gyan Kendra Book Centre, Sringeri

CC-O. In Public Domain. Digitized by eGangotri

ಎಂಬುದೇ ಮೂಲಕಲ್ಪನೆ. ಋಷಿ, ಛಂದಸ್ಸು ಹೇಳಿ ಜಪಮಾಡುವಾಗ ಎಣಿಸುವ ಬೆರಳುಗಳನ್ನು ಶುದ್ಧಿಮಾಡುವುದೆಂದೇ ನ್ಯಾಸದ ಭಾವ.

ದಿಗ್ಬಂಧ : ಎಂದರೆ ದಿಕ್ಕುಗಳ ಬಂಧನ. ಅರ್ಥಾತ್ ಇಂದ್ರಿಯಾಕರ್ಷಕ ಗಳೆಂಬ ತುಂಟು ಕುದುರೆಗಳನ್ನು ಬಂಧಿಸುವ ತತ್ತ್ವವೇ 'ದಿಗ್ಬಂಧ' ಎನ್ನುವುದರ ಮುಖ್ಯಾರ್ಥ. ಧ್ಯಾನ ಮಾಡುವಾಗ ನಿಶ್ಚಲತೆ ಇರಬೇಕು.

ಮುದ್ರಾದರ್ಶನ : ಗಾಯತ್ರೀ ಜಪಕ್ಕೆ ಮುಂಚೆ 'ಸುಮುಖಂ ಸಂಪುಟಂ ಚೈವ' ಎಂದೂ, ಜಪವಾದ ಮೇಲೆ 'ಸುರಭಿ ಜ್ಞಾನ ಚಕ್ರಾಖ್ಯ' ಎಂದೂ ಕೆಲವರು ಮುದ್ರಾ ಮಂತ್ರಗಳನ್ನು ಹೇಳಿ ಮುದ್ರಾದರ್ಶನವನ್ನು ಮಾಡಿಸುತ್ತಾರೆ. ಆದರೆ ಗ್ರಂಥಾಂತರೇ ಸೂಕ್ತತ್ವಾತ್ತತ್ಕೇಚಿನ್ನೈಚ್ಛಂತಿ|ಪ್ರತ್ಯವಾಯಾಭಾವಾತ್ [ವೈ.ಗೃ.ತಾ]

ಸೂರ್ಯೋಪಸ್ಥಾನ : ಉಪಸ್ಥಾನಃ – ಸ್ತುತಿಸಿ ಸೇವಿಸುವುದು. ನೇರ ಸಂಬಂಧ ಇಟ್ಟುಕೊಳ್ಳುವುದು, ಹತ್ತಿರ ಇರುವುದು, ಹತ್ತಿರ ಹೋಗುವುದು ಎಂದರ್ಥ. ಸೂರ್ಯನ ಸಮೀಪಕ್ಕೆ ಉಪಸ್ಥಿತವಾಗುವುದು. ಸೂರ್ಯಇಂದ್ರಾದ್ಯಷ್ಟದಿಕ್ಪಾಲಕರು ಪರಮಾತ್ಮ – ಇವರುಗಳನ್ನು ಸ್ತುತಿಸಿ, ಭೂರ್ಭುವಸ್ಸುವರಾದಿ ಲೋಕಗಳಿಗೆ ಪ್ರದಕ್ಷಿಣೆ ಮಾಡಿ ವಂದಿಸುವುದರಿಂದ ಅವರುಗಳ ಅನುಗ್ರಹವನ್ನು ಸಂಪಾದಿಸಿದಂತಾಗುವುದು. ಸೂರ್ಯದೇವನನ್ನು ನೋಡುತ್ತಾ ಕೈ ಮೇಲಕ್ಕೆತ್ತಿ ಮೂರು ವೇದಗಳಲ್ಲೂ ಉಕ್ತವಾದ ಸೌರ ಮಂತ್ರಗಳಿಂದಲೂ (ಸೂರ್ಯಪುರಾಣ) ಉದ್ವಯಮಿತಿ, ಚಿತ್ರಮಿತಿ ಮಂತ್ರಗಳಿಂದ ಉಪಸ್ಥಾನ ಮಾಡಬೇಕು. (ಉದ್ವಯ ಮಾದಿತ್ಯಂ ಚಿತ್ರಂ ತಚ್ಚಕ್ಷುರಿತಿ ಗಾಯತ್ರ್ಯಾಚ ಯಥಾಶಕ್ತಿ ವಿಭಾದಿತ್ಯನುವಾಕ ಪುರುಷ ಸೂಕ್ತ ಶಿವಸಂಕಲ್ಪ ಮಂಡಲ ಬ್ರಾಹ್ಮಣೈರಿತ್ಯುಪಸ್ಥಾಯ ಪ್ರದಕ್ಷಿಣೇ ಕೃತ್ವ ನಮಸ್ಯ ತ್ಯೋಪವಿಶೇತ್ [ಕಾತ್ಯಾಯನೋಕ್ತ ತ್ರಿಖಂಡಿಕಾಸೂಕ್ತಂ].

ಪ್ರಾತಸ್ಸಾಯಂಕಾಲಗಳಲ್ಲಿ ಕೃತಾಂಜಲಿಯಾಗಿ, ಮಧ್ಯಾಹ್ನದಲ್ಲಿ ಎರಡು ಭುಜಗಳನ್ನು ಮೇಲಕ್ಕೆತ್ತಿ ಮಂತ್ರವನ್ನು ಹೇಳಬೇಕು : [ನಿ.ಪ್ರ.]

ವಿಸರ್ಜನ : ತದನಂತರ ಉತ್ತಮೇ ಶಿಖರೇ ಜಾತೇ [ದೇವಿ]. ಮಂತ್ರವನ್ನು ಹೇಳಿ ಹಿಂದೆ ಆವಾಹನೆ ಮಾಡಿದ್ದ ಸೂರ್ಯಪರಮಾತ್ಮನನ್ನು ವಿಸರ್ಜನೆ ಮಾಡಬೇಕು. ಆಮೇಲೆ 'ಕಾಯೇನವಾಚಾ', ಮಂತ್ರಗಳಿಂದ ಸಂಪೂರ್ಣ ಸಂಧ್ಯೋಪಾಸನೆಯ ಕರ್ಮವನ್ನು ನಾರಾಯಣನಿಗೆ ಸಮರ್ಪಣೆ ಮಾಡಬೇಕು. ಭರಸಮರ್ಪಣೆಯ ವಿಷಯದಲ್ಲಿ ಭಗವತ್ಪಾದ ಶ್ರೀಮದಾಚಾರ್ಯರು ಸರ್ವಧರ್ಮಾಗೆ ನೀಡಿದ

CC-O. Jagadguru Shri Shivarathri Deshikendra Mahaswamiji Vidyabharathi Book Centre, Sringeri

CC-O. In Public Domain. Digitized by eGangotri

ಸುಂದರ ವಿವರಣೆ ಹೀಗಿದೆ :

ಪರಮಶ್ರೇಯಸ್ಸಿಗೆ ಸಾಧನವಾದ ಕರ್ಮ, ಜ್ಞಾನ, ಭಕ್ತಿಯೋಗ ರೂಪವಾದ ಸರ್ವಧರ್ಮಗಳನ್ನು ಭಗವದಾರಾಧನೆಯೆಂದು, ತನ್ನ ಯೋಗ್ಯತೆಗೆ ತಕ್ಕಂತೆ ಅನುಷ್ಠಾನ ಮಾಡುವವನಾಗಿ, ಅವುಗಳಲ್ಲಿ ಫಲ, ಮಮತೆ, ಕರ್ತೃತ್ವ ಮೊದಲಾದವನ್ನು ಬಿಟ್ಟು, ಭಗವಂತನೊಬ್ಬನೇ ಕರ್ತೃವೆಂದೂ ಆರಾಧ್ಯನೆಂದೂ ಪ್ರಾಪ್ಯನೆಂದೂ ಅನುಸಂಧಾನ ಮಾಡಬೇಕು.

ಹೀಗೆ ಸಂಧ್ಯಾವಂದನೆಯು ಒಂದು ಶ್ರೌತಕರ್ಮ. ಶ್ರುತಿಯಲ್ಲಿ ಉಕ್ತವಾದುದು ಆದರ ಉಗಮ 'ಅಪರಹಸ್ಸಂಧ್ಯಾಮುಪಾಸೀತ' ಎಂಬ ತೈತ್ತರೀಯ ವಾಕ್ಯದಿಂದ. ಮುಂದೆ "ತಸ್ಮಾದ್ಬ್ರಾಹ್ಮಣೋ ಅಹೋರಾತ್ರಸ್ಯ ಸಂಯೋಗೇ ಸಂಧ್ಯಾಮುಪಾಸ್ತೇ" ಎಂಬ ಷಟ್ವಿಂಶ ಬ್ರಾಹ್ಮಣವು ಸಂಧ್ಯಾಕಾಲವನ್ನು ನಿರ್ದೇಶಿಸಿದೆ. ನಂತರ ಆದೇ ಶ್ರುತಿಯು 'ಅಥಯುದಪಃ ಪ್ರಯುಜ್ಯತೇ ತಾನಿ ವಿಪ್ರುಷೇ ವಜ್ರೀ ಭವಂತಿ ವಿಪ್ರುಷೋ ಭೂತ್ವಾನುಸಾರಾನಪಾಘ್ನಂತೀ' ಎಂದು ಅರ್ಘ್ಯಪ್ರದಾನವನ್ನು ವಿಧಿಸಿದೆ. ಹಾಗೆಯೇ ಶ್ರುತಿಯು 'ಉದ್ಯಂತ ಮಸ್ತಯಂತ ಮಾದಿತ್ಯಮಭಿಧ್ಯಾರ್ಯ ಕುರ್ವನ್ ಬ್ರಾಹ್ಮಣೋ ವಿದ್ವಾ ಸಕಲಂ ಭದ್ರಮಶ್ನುತೇ' ಎಂಬ ಮಂತ್ರದಲ್ಲಿ 'ಅಭಿಧ್ಯಾರ್ಯ' ಎಂಬುದರಿಂದ ಗಾಯತ್ರೀ ಜಪವನ್ನು, 'ಕುರ್ವಸ್' ಎಂಬುದರಿಂದ (ಸೂರ್ಯ ನಮಸ್ಕಾರ) ಸೂರ್ಯೋಪಸ್ಥಾನವನ್ನು ಗೊತ್ತುಮಾಡಿದೆ. 'ಸಕಲಂ ಭದ್ರಮಶ್ನುತೇ' ಎಂಬ ಫಲಶ್ರುತಿಯಿಂದ ಪೂರ್ಣಗೊಳಿಸಿದೆ. ಇದೇ ಸಂಧ್ಯಾ ವಿಧಿಯ ಆದ್ಯಂತಗಳೆಂದೂ, ಇವುಗಳಲ್ಲಿ ಲೋಪವಾದಾಗಲೇ ಸಂಧ್ಯಾಪ್ರತ್ಯವಾಯದೋಷ ಪ್ರಾಪ್ತವಾಗುವುದೆಂದೂ ಹೇಳಬಹುದು.

ಗಾಯತ್ರೀ ಮಂತ್ರಃ

ಗಾಯತ್ರ್ಯಾಸ್ಯೈಕಪದೀ ದ್ವಿಪದೀ ಚತುಷ್ಪದ್ಯಪದಸಿ ನಹಿ ಪದ್ಯಸೇ ನಮಸ್ತೇ ತುರೀಯಾಯದರ್ಶತಾಯ ಪದಾಯ ಪರೋರಜಸೇಸಾವದೋ ಓಂ ॥ ಬೃ ॥ ಗಾಯತ್ರೀ ವಾ ಇದಂ ಸರ್ವಭೂತಂ ಯದಿದಂ ಕಿಂಚಿ ವಾಂ। (ಹಿಂದೆ ಏನೇನು ಉದ್ಭವಿಸಿತೋ ಈಗ ಏನೇನು ಕಾಣುತ್ತಿದೆಯೋ ಇದೆಲ್ಲ ಗಾಯತ್ರಿಯೇ).

ನಮ್ಮ ದೇಶದಲ್ಲಿ ಈಗ್ಗೆ ಸಹಸ್ರಾರು ವರ್ಷಗಳಿಂದಲೂ ಮಹಾಮಹಿಮೆಯುಳ್ಳ ಈ ಗಾಯತ್ರೀ ಮಂತ್ರದ ಪಠನವಾಗುತ್ತಿದೆ. ಕೋಟ್ಯಾವಧಿ ಜನ ಅದರ ಪ್ರಯೋ

Sri Vidyabharathi Book Centre, Sringeri

CC-O. In Public Domain. Digitized by eGangotri

ಜನವನ್ನು ಕಂಡುಕೊಂಡಿದ್ದಾರೆ. ಸ್ವತಃ ಸ್ವಾಮಿ ವಿದ್ಯಾರಣ್ಯರು ಆಗ, ಭೀಕರ ಕ್ಷಾಮ ಪ್ರಾಪ್ತವಾಗಿದ್ದಾಗ, ೨೪ ಲಕ್ಷ ಗಾಯತ್ರೀ ಮಂತ್ರ ಜಪ ನಡೆಸಿದರು. ದೇವಿ ಪ್ರತ್ಯಕ್ಷಳಾದಳು. ವರವಾಗಿ ದುರ್ಭರ ಕ್ಷಾಮ ಪರಿಹರಿಸಬೇಕೆಂದು ಕೇಳಿಕೊಂಡರು. ಚಿನ್ನದಂತಹ ಮಳೆ ಆಗಿ ದೇಶ ಸುಭಿಕ್ಷವಾಯಿತು.

ಧ್ವನಿರೂಪದಲ್ಲಿ ವ್ಯಕ್ತವಾಗುತ್ತಿರುವ ದೈವತ್ವವೇ ಗಾಯತ್ರಿ.

ಗಾಯತ್ರಿ ಜಪವನ್ನು ಶ್ರದ್ಧೆಯಿಂದ ಮಾಡುತ್ತಿರುವವನ ಸುತ್ತಲೂ ಒಂದು ವಿಭವಾದ ತೇಜೋ ಮಂಡಲವು ವಿರಾಜಿಸುತ್ತಿರುವುದನ್ನು ನೋಡಿದವರೂ ಉಂಟು. ಮೂರು ವೇದಗಳ ಮೊದಲ ಮಂತ್ರಗಳೆಲ್ಲವೂ ಗಾಯತ್ರೀ ಛಂದೋ ರೂಪವಾಗಿಯೇ ಪ್ರಾರಂಭಿಸಿವೆ (ಪ್ರಾ.) ಅನೇಕ ಮಹಿಮರು ತಪಸ್ಸಿನಿಂದಲೂ, ಚಿಂತನದಿಂದಲೂ ಈ ಮಂತ್ರದ ಮಹಾಶಕ್ತಿಯನ್ನು ದಿನದಿನವೂ ಹೊಸಹೊಸದಾಗಿ ಕಾಣುತ್ತಿದ್ದಾರೆ. ಗಾಯತ್ರಿಯಲ್ಲಿ ಅಡಗಿರುವ ಮಹಾಶಕ್ತಿಯಿಂದಲೇ ಈ ಮಂತ್ರ ಎಲ್ಲ ವೇದಗಳಲ್ಲೂ ಮತ್ತೆ ಮತ್ತೆ ಬಂದಿದೆ. ವ್ಯಾಹೃತಿ ರಹಿತವಾದ (ಗಾಯತ್ರಿ ಋಗ್ವೇದದಲ್ಲಿ ೩-೬೨-೧೦) ಸಾಮವೇದದಲ್ಲಿ (೧-೪-೬) ಶುಕ್ಲಯಜುರ್ವೇದ ಅಥವಾ ವಾಸನೇಯ ಸಂಹಿತೆಯಲ್ಲಿ (೩-೩೫) ಕೃಷ್ಣ ಯಜುರ್ವೇದ ಅಥವಾ ತೈತ್ತರೀಯ ಸಂಹಿತೆಯಲ್ಲಿ (೧-೫-೬೪) ತೈತ್ತರೀಯ ಅರಣ್ಯಕದಲ್ಲಿ (೧-೧೧-೩) ಹೀಗೆ. ೮ ಅಕ್ಷರಗಳ ಮೂರು ಪಾದಗಳುಳ್ಳ ಋಕ್ಕು ಇದು. ಯಜುರ್ವೇದ (೩-೩೬ ವ್ಯಾಹೃತಿ ಸಹಿತವಿದೆ.) ಅದೇ ಈಗಿನ ನಮ್ಮ ಅನುಷ್ಠಾನದ ಮಂತ್ರ.

ತತ್ಸವಿತು ವರೇಣ್ಯಂ

ಭರ್ಗೋ ದೇವಸ್ಯ ಧೀಮಹಿ

ಧಿಯೋ ಯೋ ನಃ ಪ್ರಚೋದಯಾತ್ ॥

ಇದು ಮಂತ್ರ. ಗಾಯತ್ರೀ ಜಪ ಮಾಡುವಾಗ ಓಂ ಎಂಬ ಪ್ರಣವ, ಭೂರ್ಭುವಸ್ಸುಃ (ಸ್ಸುವಃ) ಎಂಬ ಮಹಾ ವ್ಯಾಹೃತಿ-ಇವುಗಳಿಂದ ಯುಕ್ತವಾಗಿಯೇ ಹೇಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ ॥

ಇದು ಜಪದ ಪೂರ್ಣಪಾಠ, ಎಂಟೆಂಟು ಅಕ್ಷರಗಳ ಮೂರು ಪಾದಗಳುಳ್ಳ ಋಕ್. ಋಕ್ ಎಂದರೆ "ಋಚ್ಯಂತೇ ಸ್ತೂಯನ್ತೇ ದೇವಾ ಅನಯೇತಿ" ಋಕ್ ಯಜ್ಞ ದೇವತೆಗಳನ್ನು ಸ್ತುತಿಸುವುದು ಎಂದು.

ವೇದದಲ್ಲಿ, ಉಪನಿಷತ್ತುಗಳಲ್ಲಿ ಮತ್ತು ಸ್ಮೃತಿ ಗ್ರಂಥಗಳು ಮುಂತಾದುವುಗಳಲ್ಲಿ ಗಾಯತ್ರಿಯ ಮಾಹಾತ್ಮ್ಯವನ್ನು ಬಹುವಾಗಿ ಹೇಳಿದೆ. ಇದು ಯೋಗಿಯಾಜ್ಞವಲ್ಕ್ಯರ ವಚನ, "ಸಪ್ತಭಿಃ ಪಾವಯೇದ್ದೇಹಂ ದಶಭಿಃ ಪ್ರಾಪಯೇದ್ ದಿವಮ್ । ವಿಂಶತ್ಯಾವರ್ತಿತು ದೇವೀ ನಯತೇಜೇಶ್ವರಾಲಯಂ ॥ ಅಷ್ಟೋತ್ತರ ಶತಂ ಜಪ್ತ್ವಾ ತಾರಯೇಜ್ಜನ್ಮಸಾಗರಾತ್ । ತೀರ್ಣೋನ ಪಶ್ಯತಿ ಪ್ರಾಯೋಜನ್ಮ ಮೃತ್ಯುಂ ಹಿ ದಾರುಣಮ್. ಪ್ರತಿದಿನ ೭ ಸಾರಿ ಜಪ ಮಾಡುವುದರಿಂದ ಗಾಯತ್ರೀ ದೇವಿಯು ಶರೀರವನ್ನು ಶುದ್ಧಿ ಮಾಡುತ್ತಾಳೆ. ಹತ್ತು ಸಾರಿ ಮಾಡುವುದರಿಂದ ಸ್ವರ್ಗಲೋಕ ಪ್ರಾಪ್ತಿಯಾಗುವುದು. ೨೦ ಸಾರಿ ಜಪಮಾಡುವುದರಿಂದ ಜನ್ಮ ಸಮುದ್ರದಿಂದ ಪಾರಾಗುತ್ತಾನೆ. ಹೀಗೆ ಪಾರಾದವನಿಗೆ ಪುನರ್ಜನ್ಮವಿಲ್ಲ. ಗಾಯತ್ರಿಯನ್ನು ೧೦೮ ಸಾರಿ ಜಪಮಾಡುವುದರಿಂದ ಈ ಜನ್ಮದ ಪಾಪ ಪರಿಹಾರವಾಗುವುದು, ನೂರು ಜಪ ಮಾಡುವುದರಿಂದ ಪೂರ್ವ ಜನ್ಮದ ಮತ್ತು ಸಾವಿರ ಜಪ ಮಾಡುವುದರಿಂದ ಮೂರು ಜನ್ಮಗಳ ಪಾಪವೂ ಪರಿಹಾರವಾಗುವುದು. ಬಹಿರ್ಯಮಸ್ಮೃತಿ ಹೇಳುತ್ತಿದೆ 'ಯಾವ ಪ್ರಕಾರ ಗಾಯತ್ರೀ ಜಪ ಮಾಡುವುದರಿಂದ ಸರ್ವ ಪ್ರಕಾರವಾದ ಪಾಪದಿಂದ ಮುಕ್ತಿಯಾಗುವುದೋ ಆ ಪ್ರಕಾರ ಕೇವಲ ವೇದಾಧ್ಯಯನದಿಂದಲೂ ಆಗಲಾರದು.

ಮಂತ್ರದ ಅರ್ಥ: ಯಾವನು ಭೂಲೋಕ, ಭುವಃ (ಅಂತರಿಕ್ಷ) ಲೋಕ ಮತ್ತು ಸುವಃ (ದ್ಯು) ಲೋಕಗಳ ಸ್ವರೂಪನು ಆಗಿರುವನೋ ಆ ಪ್ರಕಾಶಮಾನನಾದ ಸವಿತೃವಿನ ಶ್ರೇಷ್ಠವಾದ ತೇಜಸ್ಸನ್ನು ಧ್ಯಾನ ಮಾಡುತ್ತೇವೆ. ಅದು ನಮ್ಮ ಬುದ್ಧಿಯನ್ನು ಪ್ರಚೋದಿಸಲಿ.

(ಗಾಯತ್ರೀ ಮಂತ್ರದ ವಿಸ್ತೃತವ್ಯಾಖ್ಯಾನಕ್ಕೆ ನಮ್ಮ "ಗಾಯತ್ರೀ ಮಹಾಮಹಿಮೆ" ಎಂಬ ಕಿರು ಹೊತ್ತಿಗೆಯನ್ನು ನೋಡಿ.)

Sri Vidyabharati Book Centre, Sringeri

CC-O. In Public Domain. Digitized by eGangotri

ಗಾಯತ್ರೀ ಮಂತ್ರವೆಂದರೆ ಯಾವುದು?

ಸಂಧ್ಯಾವಂದನೆಯಲ್ಲಿ ಜಪ ಮಾಡುವಾಗ ಯಾವ ಮಂತ್ರವನ್ನು ಹೇಳಬೇಕು ಎಂಬ ವಿಷಯಕ್ಕೆ ಬೃಹದಾರಣ್ಯಕದ ಕಾಲದಲ್ಲಿ ಮತಭೇದವಿದ್ದಂತೆ ಕಾಣಿಸುತ್ತಿದೆ. ಆದುದರಿಂದಲೇ ಆ ಉಪನಿಷತ್ತು ವಿಚಾರಮಥನ ಮಾಡಿ ನಿರ್ಣಯವನ್ನು ಮಂಡಿಸುವಷ್ಟು ಶ್ರಮವನ್ನು ತೆಗೆದುಕೊಂಡಿದೆ. ಜಪ ಮಾಡುವುದು ಸವಿತಾ ದೇವತಾ, (ಸೂರ್ಯ)ನನ್ನು ಕುರಿತು ಸೂರ್ಯನನ್ನು ಪ್ರಾರ್ಥಿಸುವ ಮಂತ್ರಗಳು ವೇದದಲ್ಲಿ ಅನೇಕವಿವೆ. ಕೆಲವರು, ಆಗ, ಅನುಷ್ಟುಪ್ ಛಂದಸ್ಸಿನ "ತತ್ಸವಿತುರ್ವರೇಣ್ಯಮಹೇ ವಯಂ ದೇವಸ್ಯ ಭೋಜನಂ। ಶ್ರೇಷ್ಠಂ ಸರ್ವಧಾತಮಂ ತುರಂ ಭಗಸ್ಯ ಧೀಮಹಿ" ಎಂಬ ಅನುಷ್ಟುಪ್ ಸಾವಿತ್ರಿಯನ್ನು ಹೇಳುತ್ತಿದ್ದರು. ಉಪನಿಷತ್ತು 'ಅವರು ಹಾಗೆ ಹೇಳುತ್ತಾರಲ್ಲ ಅದು ತಪ್ಪು, ಹಾಗೆ ಮಾಡಬಾರದು. ಗಾಯತ್ರೀ ಸಾವಿತ್ರೀಯನ್ನೇ ಅನುವಚನ ಮಾಡಬೇಕು' (ನ ತಥಾ ಕುರ್ಯಾದ್ಗಾಯತ್ರೀ ಮೇವ ಸಾವಿತ್ರೀ ಮನು ಬ್ರೂಯಾತ್) ಎಂದು ಕಂಠೋಕ್ತವಾಗಿ ಹೇಳಿದೆ. ಉಪನಯನ ಕಾಲದಲ್ಲಿ ವಟುವು 'ಭಗವ್, ಸಾವಿತ್ರೀ ಮನುಬ್ರೂಹಿ' ಎಂದು ಪ್ರಾರ್ಥಿಸಿದಾಗ ಅವನಿಗೆ ಈಗ ಹೇಳಿ ಕೊಡುತ್ತಿರುವ ಗಾಯತ್ರೀ ಛಂದಸ್ಸಿನ ಮೂರು ಪಾದದ "ತತ್ಸವಿತುರ್ವರೇಣ್ಯಂ" ಮಂತ್ರವನ್ನೇ (ಅಮೂಂಗಾಯತ್ರೀಂ ಸಾವಿತ್ರೀಂ ಸವಿತೃ ದೇವತಾಕಾಮ್ ಅನ್ವಾಹ ಇದಾನೀಂ ವ್ಯಾಖ್ಯಾತಾ! ನಾನ್ಯಾ (ಶಂ. ಭಾ.) ಎಂದು ತಿಳಿಸಿ ಜಪದ ಮಂತ್ರದ ಸ್ವರೂಪವನ್ನು ಸ್ಪಷ್ಟಪಡಿಸಿದೆ.

ಆ ಮಂತ್ರವೇ ಈಗಿನ ನಮ್ಮ ಅಧ್ಯಯನದ ವಸ್ತು. ಈ ಮಂತ್ರವನ್ನು ಗಾಯತ್ರೀ ಮಂತ್ರವೆಂದೂ ಸಾವಿತ್ರೀ ಮಂತ್ರವೆಂದೂ ಮತ್ತು ಗುರು ಮಂತ್ರವೆಂದೂ ಕರೆಯುವುದುಂಟು. ಗಾಯತ್ರೀ, ಸಾವಿತ್ರೀ, ಸರಸ್ವತೀ, ಎಲ್ಲ ಒಂದೇ. ಅವು ದೇವಿಯ ವಿವಿಧ ಕಾಲದ ಕನ್ಯಾ, ಯುವತಿ ಮತ್ತು ಮಹಿಳೆಯ ಸ್ವರೂಪಗಳ ವರ್ಣನೆ, ಅಷ್ಟೆ.

ಗಾಯತ್ರೀ ಶಬ್ದಾರ್ಥ

ವೇದ ಪರಿಭಾಷೆಯಲ್ಲಿ 'ಗಾಯತ್ರೀ' ಎಂಬ ಪದವನ್ನು ಮೂರು ಅರ್ಥದಲ್ಲಿ ಬಳಸುತ್ತಿದ್ದೇವೆ. ೧) ಛಂದಸ್ಸೆಂದು (ಗಾಯತ್ರೀ ಛಂದಸಾಂ ಮಾತಾ) ೨) ಮಂತ್ರವೆಂದು (ಗಾಯತ್ರೀಚ್ಛಂದಃ).

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಯತ್ರ್ಯಾ : ಗಾಯತ್ರೀ ಮಂತ್ರಕ್ಕೆ ಗಾಯತ್ರೀ ಛಂದಸ್ಸು, ೩. **ದೇವತೆ ಯೆಂದು.** (ಆಯಾತು ವರದಾದೇನಿ. ಗಚ್ಛದೇವಿ ಯಥಾ ಸುಖಮ್) ಮೂರಕ್ಕೂ ಗಾಯತ್ರೀ ಎಂಬ ಹೆಸರೇ ಬಹುಕಾಲದಿಂದ ಬಂದ ಬಳಕೆಯಿಂದ ರೂಢಿಗೆ ಬಂದಿದೆ. ಗಾಯತ್ರೀ ಎಂಬ ಪದವು ' ಗೈ ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ' ಗಾಯತಂ ತ್ರಾಯತೇ ಇತಿ ಗಾಯತ್ರೀ ' ಗಾನ ಮಾಡುವವನನ್ನು ಕಾಪಾಡುತ್ತದೆ, ಆದುದರಿಂದ ಗಾಯತ್ರೀ ಎಂದು.

ಗಾಯತ್ರಿಯನ್ನು ಕಂಡುಕೊಂಡುದು

ಒಂದು ಸಾರಿ ರಾಕ್ಷಸರು ಉಗ್ರ ತಪಸ್ಸನ್ನಾಚರಿಸಿದರು. ಪ್ರಜಾಪತಿ ಪ್ರತ್ಯಕ್ಷ ವಾದ. ಏನು ಬೇಕೆಂದು ಕೇಳಿದ. ಸೂರ್ಯನೊಂದಿಗೆ ಯುದ್ಧ ಮಾಡುವ ಶಕ್ತಿ ಕೊಡು, ಅವಕಾಶಕೊಡು ಎಂದರು. ಪ್ರಜಾಪತಿ ತಥಾಸ್ತು ಎಂದ. ಅಸುರರು ಸೂರ್ಯ ನನ್ನು ಓಡಿಸಿಕೊಂಡು ಹೋದರು. ಸೂರ್ಯನು ಹೆದರಿ, ಬ್ರಹ್ಮನ ಹತ್ತಿರಕ್ಕೆ ಓಡಿ ಹೋದ. ಆಗ ಬ್ರಹ್ಮನು ಅವನ ಭೀತಿಯ ಪರಿಹಾರಕ್ಕೆ ಒಂದು ಔಷಧವನ್ನು ಕಂಡನು. ಋತವೂ, ಸತ್ಯವೂ, ಬ್ರಹ್ಮವೂ, ಓಂಕಾರವೂ ಗಾಯತ್ರಿಯೂ–ಇವೇ ಆವ ನಿಗೆ ಗೋಚರವಾದ ಪ್ರತೀಕಗಳು. ಆದುದರಿಂದ ದ್ವಿಜರು ಅಹೋರಾತ್ರಿಯ ಸಂಧಿ ಯಲ್ಲಿ ಸಂಧ್ಯೋಪಾಸನೆಯನ್ನು ಮಾಡುತ್ತಾರೆ (ಛಾಂದೋಗ್ಯ ಶ್ರುತಿ) ಫಲರೂಪ.

ಮಂತ್ರಶಕ್ತಿ

ಜಪ ಮಾಡುವಾಗ ' ಯಥಾಶಕ್ತಿ ಗಾಯತ್ರೀ **ಮಂತ್ರ** ಜಪಂ ಕರಿಷ್ಯೆ ' ಎನ್ನುತ್ತೇವೆ. ಆ ಮಂತ್ರದ ಮಹಿಮೆ ಏನು?

ಗಾಯತ್ರಿಯು ಒಂದು ಪವಿತ್ರವಾದ ಮಹಾಶಕ್ತಿಯುಳ್ಳ ಮಂತ್ರ. ಶ್ರೀರಾಮ ಚಂದ್ರನು ಈ ಮಂತ್ರವನ್ನು ಅನುಸಂಧಾನ ಮಾಡಿ ರಾವಣನನ್ನು ವಧಿಸಿದನೆಂದು ಇತಿಹಾಸವು ತಿಳಿಸುತ್ತದೆ. ಮಂತ್ರಗಳಿಗೆ ಅಂತಹ ಶಕ್ತಿ ಎಲ್ಲಿಂದ ಬಂತು? ಅವು ಕಾರ್ಯಕಾರಿಯಾಗುವುದು ಯಾವ ವಿಧಾನದಿಂದ ಎಂಬ ಪ್ರಶ್ನೆ ಸಹಜ. ಆದಕ್ಕೆ ತಾತ್ತ್ವಿಕವಾದ, ವಿಜ್ಞಾನಿಗಳೂ ಹೌದು ಹೌದು ಎನ್ನುವಂತಹ ಸಮಾಧಾನವೀಯುತ್ತಿದೆ ಮಂತ್ರ ಶಾಸ್ತ್ರ.

ಸೂರ್ಯನು ಭೂಮಿಯ ಮೇಲಿರುವ ನೀರನ್ನು ವರ್ಷದಲ್ಲಿ ಎಂಟು ತಿಂಗಳ ಕಾಲ ಮೇಲಕ್ಕೆ ಎಳೆದುಕೊಂಡು ತನ್ನಲ್ಲಿಟ್ಟುಕೊಂಡು ಆದನ್ನು ಉಳಿದ ನಾಲ್ಕು

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಂಗಳ ಕಾಲ ಭೂಮಿಗೆ ಮಳೆಯ ರೂಪದಲ್ಲಿ ಒದಗಿಸುತ್ತಾನೆ. ಇದನ್ನು 'ರೌದ್ರ' ಎಂದು ಕರೆಯುತ್ತಾರೆ. ಹಾಗವನು ಮಾಡದೇ ಇದ್ದಿದ್ದರೆ ಜಗತ್ತಿನಲ್ಲಿ ಮಳೆಯೆಂಬುದೇ ಇಲ್ಲದೆ ಪ್ರಾಣಿವರ್ಗವೆಲ್ಲ ಸಂಪೂರ್ಣವಾಗಿ ನಾಶವಾಗುತ್ತಿತ್ತು. ಏಕೆಂದರೆ ನೀರಿಗೆ ತಾನಾಗಿಯೇ ಮೇಲಕ್ಕೆ ಏರುವ ಶಕ್ತಿ ಇಲ್ಲ. ಅದಕ್ಕೆ ಸೂರ್ಯನ ಶಕ್ತಿಯ ಸಹಾಯ ಅನಿವಾರ್ಯ.

ತೊಟ್ಟಿಲಿನಲ್ಲಿ ಮಲಗಿರುವ ಮಗು ತಾಯಿ ಕಂಕುಳನ್ನು ತಾನಾಗಿಯೇ ಸೇರಲು ಅದಕ್ಕೆ ಶಕ್ತಿ ಇಲ್ಲ. ತಾಯಿ ಕೃಪೆಮಾಡಿ ಕೈನೀಡಿ, ಎತ್ತಿಕೊಂಡರೆ ಮಾತ್ರ ಅದುಸಾಧ್ಯ.

ಹಾಗೆಯೇ ಜೀವನಿಗೂ ತಾನಾಗಿಯೇ ಪರಮಾತ್ಮನನ್ನು ಸೇರುವ ಶಕ್ತಿ ಸ್ವತಃ ಇಲ್ಲ. ಅವನನ್ನು ಪರಮೇಶ್ವರನನ್ನು ಒಡಗೂಡಿಸುವ ಆ ಶಕ್ತಿಯನ್ನೇ 'ಮಂತ್ರ, ಮಂತ್ರ ಶಕ್ತಿ, ಎನ್ನುತ್ತಾರೆ. ಋಷಿಯ ಅಂತಸ್ಫುರಣೆಗೆ ಗೋಚರವಾದ ದೇವತೆಯ ಪ್ರಥಮ ಧ್ವನಿ ಚಿತ್ರವೇ ಮಂತ್ರ. ಅದನ್ನು ಬೀಜಮಂತ್ರ ಎನ್ನುವರು ಅದನ್ನೇ ಗುರುವು ಶಿಷ್ಯನಿಗೆ ಉಪದೇಶಿಸುವುದು. ಬೀಜದಿಂದ ವೃಕ್ಷ. ಬೀಜಮಂತ್ರದಿಂದ ಮಂತ್ರ ಸಾಹಿತ್ಯ. ಋಷಿಗಳು ಧ್ಯಾನಾಸಕ್ತರಾಗಿದ್ದಾಗ ಅವರಿಗೆ ಕೆಲವು ಮೂಲಧ್ವನಿಗಳು, ಧ್ವನಿಚಿನ್ಹೆಗಳು, ಗೋಚರವಾದವು. ಅದನ್ನು ಮಾನವ ಭಾಷೆಯಲ್ಲಿನ ಆದಷ್ಟು ಸಮೀಪದ ರೂಪದಲ್ಲಿ ಅಳವಡಿಸಿದರು. ಇವೇ ವೇದದಲ್ಲಿ ಪವಿತ್ರವಾಗಿರುವ ಮಂತ್ರಗಳು. ಅವ್ಯಕ್ತದ ವ್ಯಕ್ತಾಕ್ಷರಗಳು. ಗಾಯತ್ರಿಯು ಅಂತಹ ಮುಖ್ಯ ಮಂತ್ರಗಳಲ್ಲಿ ಒಂದು ಪ್ರಧಾನವಾದುದು.

ನಮ್ಮ ಸುತ್ತ ವಿಶ್ವವು ವಿಸ್ತಾರವಾಗಿ ಹರಡಿದೆಯಷ್ಟೆ. ಅದರಲ್ಲಿ ಗಿಡಮರಗಳು ಕಲ್ಲು ಬಂಡೆಗಳೂ, ಪಶುಪಕ್ಷಿ ಮನುಷ್ಯ ಮೊದಲಾದ ಪ್ರಾಣಿವರ್ಗಗಳೂ ತುಂಬಿವೆ. ಅವೆಲ್ಲ ಮುಟ್ಟಿದರೆ ಸ್ಪರ್ಶನಕ್ಕೆ ಅಳವಟ್ಟು ಗಡುಸಾಗಿರುವಂತಿವೆ. ಆದರೆ ವೈಜ್ಞಾನಿಕವಾಗಿ ನೋಡುವುದಾದರೆ ಅವು ನಾವು ನಂಬಿಕೊಂಡಿರುವಷ್ಟು ಗಟ್ಟಿಮುಟ್ಟಾಗಿಲ್ಲ. ಎಲ್ಲವೂ ಸ್ಪಂದನಗಳ (Vibration) ರೂಪ: ಪರಿಣಾಮ. ಚಲನಶಕ್ತಿಗಳ (Energy) ರೂಪಾಂತರ. ಸ್ಪಂದನವೇ ಆಕಾರದ ಮೂಲ. ಸ್ಪಂದನಶಕ್ತಿಯನ್ನು ಬಿಟ್ಟು ಪದಾರ್ಥ ಎಂಬುದು ಬೇರೆ ಇಲ್ಲ. ನಮಗೆ ಕಾಣಬರುತ್ತಿರುವ ಪ್ರತಿಯೊಂದು ಜೀವಂತ ಆಕಾರದ ಹಿಂಬದಿಯಲ್ಲಿಯೂ ಅದನ್ನು ಹಾಗೆ ರೂಪಿಸಿರುವ ವಿಶಿಷ್ಟ ಸ್ಪಂದನ ಪೊಂದಿದೆ. ಸ್ಪಂದನ, ಆಕಾರ ಮತ್ತು ಚೈತನ್ಯ (ಜ್ಞಾನ) ಇವು ಮೂರೂ ಒಂದೇ ವಸ್ತು. ಸ್ಪಂದನದಲ್ಲಿ ಬದಲಾವಣೆ ಉಂಟುಮಾಡುವುದರ ಮೂಲಕ ಆಕಾರದಲ್ಲಿಯೂ ಬದ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಾವಣಿ ತರಬಹುದು. ಒಂದು ಇನ್ನೊಂದರ ಮೇಲೆ ಪರಸ್ಪರ ಪ್ರಭಾವವುಂಟು ಮಾಡಬಲ್ಲದು. ಈ ಸಂಬಂಧ ಸೃಷ್ಟಿಯ ಮೂಲ ಕ್ರಿಯೆಯಲ್ಲಿಯೇ ರೂಢವಾಗಿದೆ. ಇದನ್ನು ಮಿಸೆಸ್ ವಾಲ್ಟ್ಸ್ ಹ್ಯೂಸ್ (Mrs. Walts Hughaers) ಎಂಬಾಕೆ ಎಲ್ಲರ ಸ್ಕೂಲಚಕ್ಷುಸ್ಸಿಗೂ ಕಾಣುವಂತೆ ಒಂದಾವರ್ತಿ ಬಹಿರಂಗವಾಗಿ ಪ್ರದರ್ಶನ ಮಾಡಿ ತೋರಿಸಿದಳು. ಆಕೆ ತನ್ನ "ಐಡೊಫೋ್ (Eidophone) ಎಂಬ ಗಾನ ಯಂತ್ರವನ್ನು ನುಡಿಸಿದಾಗ ತದನುಗತವಾದ ಆಕಾರವು ಎದುರಿನ ಮಳಲ ಹಲಗೆಯ ಮೇಲೆ ರೂಪುಗೊಳ್ಳುತ್ತಿತ್ತು. 'ಮೇರಿ ಮಾತೆಗೆ ಸಂಬಂಧಪಟ್ಟ ಹಾಡನ್ನು ಯಂತ್ರ ದಲ್ಲಿ ನುಡಿಸಿದಾಗ ಮಳಲ ಮೇಲೆ ಮಗುವನ್ನೆತ್ತಿಕೊಂಡಿರುವ ಮೇರಿ ತಾಯಿಯ ಆಕಾರವು ರೂಪುನೆತ್ತಿತ್ತು. ' ಹಾಗೆಯೇ ಭೈರವೀ ರಾಗವನ್ನು ನುಡಿಸಿದಾಗ ಶ್ವಾನ ವನ್ನು ಜೊತೆಯಲ್ಲಿ ಉಳ್ಳ ಭೈರವ ದೇವರ ವಿಗ್ರಹ ಮಳಲ ಮೇಲೆ ರೂಪುಗೊಂಡಿತು. ಈ ಅದ್ಭುತ ದೃಶ್ಯವನ್ನು ನೋಡಿ ನೆರೆದಿದ್ದ ಪ್ರೇಕ್ಷಕರು ಬೆರಗಾದರು. ಜಪವು ಈ ಸ್ಪಂದನಗಳಲ್ಲಿ ಕ್ರಿಯೆಯನ್ನು ಉಂಟುಮಾಡುತ್ತದೆ. ಈ ಸ್ಪಂದನಗಳು ಜೀವಕೋಶಗಳ ಮೇಲೆ ಪರಿಣಾಮ ಬೀರುವುವು. ವ್ಯಕ್ತವಾಗಿರುವ ಈ ವಿಶ್ವವೆಲ್ಲವೂ ಸರ್ವವ್ಯಾಪಿಯೂ ಸರ್ವಾತ್ಮಕವೂ ಆದ ಒಂದು ಸ್ಪಂದನದ ಪರಿಣಾಮ. ಆ ಮೂಲ ಸ್ಪಂದನವನ್ನು 'ನಾದ' ಎಂದು ಕರೆಯುತ್ತಾರೆ. ಕೆಲವು ಧ್ವನಿಮೇಳಗಳಲ್ಲಿ ಅಡಗಿರುವ ಶಕ್ತಿಗಳನ್ನು ಮಾನವನ ಜ್ಞಾನ ವಿಕಾಸಕ್ಕೆ ಅಳವಡಿಸುವ ಯೋಗಶಾಸ್ತ್ರದ ಭಾಗಕ್ಕೆ ಮಂತ್ರಯೋಗ ಎಂದು ಹೆಸರು, ಅದರಿಂದ ಮಂತ್ರವೂ ದೇವತೆಯೂ ಅಭಿನ್ನ ಎಂಬುದು ವ್ಯಕ್ತವಾಯಿತು.

ಹೀಗೆ ಛಂದಸ್ಸೆಂದೂ, ಮಂತ್ರವೆಂದೂ ಗಾಯತ್ರಿಯು ವೇದ, ಪುರಾಣ ಸ್ಮೃತಿ ಮತ್ತು ಆಗಮಗಳೆಲ್ಲವುಗಳಿಂದಲೂ ಸರ್ವ ಶ್ರೇಷ್ಠವೆಂದು ಪೂಜಿತವಾಗಿದೆ.

ಮೇಲಾಗಿ ಪವಿತ್ರವಾದ ಈ ಮಂತ್ರದ ಸ್ವರೂಪವು ಇಷ್ಟೇ ಸರಿ ಎಂದು ನಿರ್ಧರಿಸುವ ಶಕ್ತಿಯಾದರೂ ಯಾರಿಗಿದೆ ! ಅದು ಬೇರೊಬ್ಬ ಋಷಿಯಿಂದ ಮಾತ್ರ ಸಾಧ್ಯ. ಚಿಂತಿಸಿದಷ್ಟೂ, ಗಂಗೆಯ ಪಾತ್ರದಂತೆ ವಿಸ್ತಾರವಾಗುತ್ತಿದೆ. ಅದರ ವ್ಯಾಪನೆ ಸಂಧ್ಯಾವಂದನೆಯಲ್ಲಿ ಅದನ್ನು ವೊದಲು ತ್ರಿಪದಿ ಎಂದು ಕೊಂಡೆವು. ಮುಂದೆ ಅದು ತುರೀಯ ದರ್ಶತಪದವಾದ ಆದಿತ್ಯನಲ್ಲಿ ಪ್ರತಿಷ್ಠಿತವಾದ ಚತುಷ್ಪದೀ ಎಂದು ಗೋಚರಕ್ಕೆ ಬಂತು. ಅಲ್ಲಿಗೆ ಮುಗಿಯಿತೇ ? ಇಲ್ಲ. ಆ ಆದಿತ್ಯನು ಸತ್ಯದಲ್ಲಿಯೂ ಸತ್ಯವು ಬಲದಲ್ಲಿಯೂ ಪ್ರತಿಷ್ಠಿತವಾಗಿದೆಯೆಂದು ತಿಳಿದು ಬಂತು. ಹೀಗೆ ಅಪಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿದೆ ಆದರ ಮಹಿಮೆ, ಅದರಿಂದಲೇ ಇರಬಹುದು ಅನಂತರ ರುದ್ರ ಗಾಯತ್ರೀ, ಹಂಸ ಗಾಯತ್ರೀ, ವಿಷ್ಣು ಗಾಯತ್ರೀ, ಮೊದಲಾದ ಅನೇಕ ಗಾಯತ್ರಿಗಳು ಅವತರಿಸಿವೆ ; ಬ್ರಹ್ಮೋಪಾಸನೆಗೆ ಗಾಯತ್ರಿಯನ್ನು, ಪ್ರತಿಮೆಯೇ ಮುಂತಾದವುಗಳಂತೆ, ಒಂದು **ಸಾಧನ (ಪ್ರತೀಕ)** ವೆಂಬ ಭಾವದಿಂದ ಕೆಲವರು ಸೇವಿಸುತ್ತಾರೆ. ಇನ್ನು ಕೆಲವರು ಗಾಯತ್ರಿ ಎಂಬ ಹೆಸರಿನಿಂದ ಸಾಕ್ಷಾತ್ತಾಗಿ ಬ್ರಹ್ಮವನ್ನೇ ಉಪಾಸಿಸುತ್ತಾರೆ. ಆದುದರಿಂದ ಸಂಧ್ಯಾವಂದನೆಯೆಂಬ ನಿತ್ಯಕರ್ಮದಲ್ಲಿ ನಾವು ವಿನೀತರಾಗಿ ಭಕ್ತಿಯಿಂದ ಸಕಾಲದಲ್ಲಿ ಗಾಯತ್ರೀ ಮಂತ್ರವನ್ನು ಜಪಿಸಿ ಸೂರ್ಯನನ್ನು ಬುದ್ಧಿ ಪ್ರಚೋದನೆಗಾಗಿ ಪ್ರಾರ್ಥಿಸಿ ಪುನೀತರಾಗೋಣ, ಕೃತಾರ್ಥರಾಗೋಣ - ಗಾಯತ್ರಿಯು ತರ್ಕದ ವಿಷಯವಲ್ಲ, ಅನುಷ್ಠಾನದ ದೇವತೆ.

ಫಲಶ್ರುತಿ

ಹೀಗೆಂದರಿತವನು ಸೂರ್ಯನಂತೆ ಶ್ರೀಯಿಂದಲೂ, ಯಶಸ್ಸಿನಿಂದಲೂ ಖ್ಯಾತಿಯಿಂದಲೂ ಶೋಭಿಸುತ್ತಾ, ತಾನೂ ಗಾಯತ್ರೀ ಸಾಕ್ಷಾತ್ಕಾರ ಪಡೆದವನಾದ್ದರಿಂದ ಅಗ್ನಿಯಂತೆ ಶುದ್ಧನೂ ಪೂತನೂ ಆಗಿ ಗಾಯತ್ರ್ಯಾತ್ಮನೂ ಅಜರನೂ ಅಮರನೂ ಆಗುವನು ; ಗಾಯತ್ರೀ ರೂಪವಾದ ಬ್ರಹ್ಮನ ಸಾಕ್ಷಾತ್ಕಾರವನ್ನೇ ಪಡೆಯುವನು.

ಗಾಯತ್ರೀ ದೇವಿ ! ನಮಸ್ಕಾರ ! ! ನಿನಗೆ ನಮಸ್ಕಾರ ! ! !

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪನಯನ ಸಂಘದ ಪ್ರಕಟನೆಗಳು

1.	ಯಜುರ್ವೇದ ಸ್ಮಾರ್ತ ಸಂಧ್ಯಾವಿಧಿಃ	1–00
2.	ಋಗ್ವೇದ ಮಾಧ್ವ ಸಂಧ್ಯಾವಿಧಿಃ	1–00
3.	ಮಂತ್ರಾರ್ಥಗಳು	0–60
4.	ೀವತಾರ್ಚನೆ ಸ್ಮಾರ್ತ	1–50
5.	ರುದ್ರಾಧ್ಯಾಯ–ನಮಕ ಚಮಕ (ಸಸ್ವರ)	0–45
6.	ವೇದಗಳ ಪರಿಚಯ	1–75
7.	ಗಾಯತ್ರೀ ಮಹಾಮಹಿಮೆ	0–40
8.	ಶ್ರೀ ವ್ರತ ಚಂದ್ರಿಕೆ	3–00
9.	ಲಲಿತಾ ಸಹಸ್ರ ನಾಮ	0–85
10.	ಸಂಧ್ಯಾವಂದನೆ ಎಂದರೇನು	2–00
11.	ಋಗ್ವೇದ ಸ್ಮಾರ್ತ ಸಂಧ್ಯಾವಿಧಿಃ	1–00
12.	ಯಜುರ್ವೇದ ಮಾಧ್ವ ಸಂಧ್ಯಾವಿಧಿಃ	1–00

— : ಪುಸ್ತಕಗಳು ಸಿಗುವ ಸ್ಥಳ : —

ಶ್ರೀಧರ ಟ್ರಾವೆಲ್ಸ್, 98, ರತ್ನ ವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು-4.

ಗೀತಾ ಏಜೆನ್ಸೀಸ್, ಬಳೇಪೇಟೆ ಚೌಕ, ಬೆಂಗಳೂರು-53.

ವೇದಾಂತ ಭವನ, (ಉಮಾ ಟಾಕೀಸ್ ಬಳಿ) ಚಾಮರಾಜಪೇಟೆ
ಬೆಂಗಳೂರು-10. ಫೋನ್ : 67590.

ಟಿ.ಎಸ್. ಕೃಷ್ಣಸ್ವಾಮಿ ಶೆಟ್ಟಿ ಅಂಡ್ ಸನ್ಸ್, 235, ಚಿಕ್ಕಪೇಟೆ ಬೆಂಗಳೂರು-53.

ಪ್ರತಿಭಾ ಸ್ಟೋರ್ಸ್, ಡಾ|| ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು-4.

ಕರ್ಣಧಾರರುಗಳು

ಶ್ರೀ ವಿ.ಎಸ್. ಕೃಷ್ಣಅಯ್ಯರ್, ಬಿ.ಎಸ್.ಸಿ., ನಗರಾಡಳಿತ ಮಂತ್ರಿಗಳು,
ಕರ್ನಾಟಕ ರಾಜ್ಯಸರ್ಕಾರ.

ಶ್ರೀ ಕೆ.ಆರ್. ಶ್ರೀಧರಮೂರ್ತಿ,
ಮಾಲೀಕರು, ಶ್ರೀಧರ್ ಟ್ರಾವೆಲ್ಸ್, ಬೆಂಗಳೂರು-4.

Sri Vidyabharathi Book Centre, Singeri